ಸಾರ್ವಜನಿಕ ಶಿಕ್ಷಣ ಇಲಾಖೆ

# ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ,

**6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–560003**

## ಅಧಿಸೂಚನೆ

**2022–23ನೇ ಸಾಲಿನ ಎಸ್.ಎಸ್.ಎಲ್.ಸಿ ಮುಖ್ಯ ಪರೀಕ್ಷಾ ಪ್ರಕ್ರಿಯೆಯ ಕುರಿತು ಮಾರ್ಗಸೂಚಿ.**

**ಸೂಚನೆ: “ಎಲ್ಲಾ ಪುಟಗಳನ್ನು ಕಡ್ಡಾಯವಾಗಿ ಓದಿ ಮನನ ಮಾಡಿಕೊಳ್ಳುವುದು”**

## :: ಪರಿವಿಡಿ ::


| ವಿಭಾಗ ಸಂಖ್ಯೆ | ವಿಷಯ | ಪುಟ ಸಂಖ್ಯೆ |
|---|---|---|
| I | I ಶೈಕ್ಷಣಿಕ ವಿಭಾಗ<br>I(A) ಮಾನದಂಡಗಳು<br>I(B) ಅಂಕಗಳು ಮತ್ತು ಶ್ರೇಣಿಗಳ ವಿವರ<br>I(C) ರೂಪಣಾತ್ಮಕ ಮೌಲ್ಯಮಾಪನದ (Formative Assessment) ಚಟುವಟಿಕೆಗಳು<br>I(D) ಇತರೆ ವಿಷಯಗಳು<br>I(E) ಪಠ್ಯ ಪುಸ್ತಕ ಪರಿಷ್ಕರಣೆ ಕುರಿತು | 3–8 |
| II | ಆಡಳಿತ ವಿಭಾಗ | 9–12 |
| III | ಅರ್ಜಿಗಳ ಸ್ವರೂಪ | 13 |
| IV | ಪರೀಕ್ಷಾ ಶುಲ್ಕ ನಿಗಧಿಯ ಬಗ್ಗೆ | 13–14 |
| V | ಪರೀಕ್ಷಾ ಶುಲ್ಕ ವಿನಾಯಿತಿ | 15 |
| VI | ಪರೀಕ್ಷಾ ಶುಲ್ಕವನ್ನು ಪಾವತಿಸುವ ಸ್ವರೂಪ | 16 |
| VII | ರಾಜ್ಯ ಪಠ್ಯಕ್ರಮಕ್ಕೆ ವಲಸೆ ಬರುವ ವಿದ್ಯಾರ್ಥಿಗಳ ನೋಂದಣಿ | 16 |
| VIII | ವಿದ್ಯಾರ್ಥಿಗಳ ವಿವರಗಳನ್ನು ಆನ್‌ಲೈನ್ ಮುಖಾಂತರ ನೋಂದಾಯಿಸಲು ಮತ್ತು ಪರೀಕ್ಷಾ ಶುಲ್ಕ ಪಾವತಿಸುವ ಕುರಿತು. | 17–18 |
| IX | ಶಾಲಾ ಸಂಕೇತ | 19 |
| X | ವಿಭಿನ್ನ ಸಾಮರ್ಥ್ಯವುಳ್ಳ (Differently Abled) ಮಕ್ಕಳಿಗೆ ನೀಡುವ ಸೌಲಭ್ಯಗಳು ಮತ್ತು ವಿನಾಯಿತಿಗಳು | 20–23 |
| XI | ಭಾಷಾ ಸಂಯೋಜನೆ | 24 |
| XII | ಮಕ್ಕಳ ಹಾಜರಾತಿ | 24–25 |
| XIII | ಆಂತರಿಕ ಮೌಲ್ಯಮಾಪನದ ಅಂಕಗಳ ನಮೂದು | 25–26 |
| XIV | ಸತತ 6 ಪ್ರಯತ್ನಗಳ ಮಿತಿಗೊಳಿಸಿರುವ ಕುರಿತು | 26–28 |
| XV | 2011ಕ್ಕೂ ಹಿಂದಿನ ವರ್ಷಗಳಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ನೋಂದಾಯಿಸಿ ಅನುತ್ತೀರ್ಣರಾದ ಎಲ್ಲಾ ವಿಧದ ಪುನರಾವರ್ತಿತ ಅಭ್ಯರ್ಥಿಗಳಿಗೆ (NSR, NSPR) ಅಂತಿಮವಾಗಿ ಪರೀಕ್ಷೆಗೆ ನೋಂದಾಯಿಸಲು ಅವಧಿ ನಿಗದಿಗೊಳಿಸಿರುವ ಬಗ್ಗೆ | 28 |
| XVI | ಫಲಿತಾಂಶ ಉತ್ತಮ ಪಡಿಸಿಕೊಳ್ಳುವಿಕೆ | 28–29 |
| XVII | ಕಿರಿಯ ತಾಂತ್ರಿಕ ಶಾಲೆಗಳ ಕುರಿತು (Junior Technical Schools) | 29 |
| XVIII | ಎನ್.ಎಸ್.ಕ್ಯೂ.ಎಫ್ ವಿಷಯದ ಕುರಿತು | 30 |
| XIX | ಎಸ್‌ಎಸ್‌ಎಲ್‌ಸಿ ಪರೀಕ್ಷಾ ಪ್ರಶ್ನೆಪತ್ರಿಕೆ ಸ್ವರೂಪ ಮತ್ತು ಕಠಿಣತೆ ಮಟ್ಟದ ಕುರಿತು. | 30 |
| XX | ಪರೀಕ್ಷೆಗೆ ಸಂಬಂಧಿಸಿದಂತೆ ಪರೀಕ್ಷಾ ಅರ್ಜಿ ಸಲ್ಲಿಸುವಾಗ ಕ್ಷೇತ್ರ ಶಿಕ್ಷಣಾಧಿಕಾರಿಗಳು ತೆಗೆದುಕೊಳ್ಳಬೇಕಾದ ಸೂಕ್ತ ಕ್ರಮಗಳು | 31 |
| XXI | ಶಾಲಾ ಮುಖ್ಯೋಪಾಧ್ಯಾಯರ ಜವಾಬ್ದಾರಿಗಳು ಮತ್ತು ಪರೀಕ್ಷಾ ಅರ್ಜಿಗಳನ್ನು ಸಲ್ಲಿಸಲು ಪಾಲಿಸಬೇಕಾದ ಸೂಚನೆಗಳು | 32–35 |
|  | ಅನುಬಂಧ 1 ರಿಂದ 8 | 37–47 |

ಕರ್ನಾಟಕ ಸರ್ಕಾರ

**ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ 6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-3.**

ಸಂಖ್ಯೆ:ಎ8/ಎಸ್.ಎಸ್.ಎಲ್.ಸಿ.ಅಧಿಸೂಚನೆ/ಮಾರ್ಚ್-23/14/2022-23 ದಿನಾಂಕ:17.09.2022

## ಅಧಿಸೂಚನೆ

ವಿಷಯ:- 2022-23ನೇ ಸಾಲಿನ ಎಸ್.ಎಸ್.ಎಲ್.ಸಿ ಮುಖ್ಯ ಪರೀಕ್ಷಾ ಪ್ರಕ್ರಿಯೆಯ ಕುರಿತು ಮಾರ್ಗಸೂಚಿ.

ಉಲ್ಲೇಖ:-
1. ಸರ್ಕಾರದ ಆದೇಶದ ಸಂಖ್ಯೆ:ಇಡಿ.156.ಮಾಹಿತಿ.2014, ದಿನಾಂಕ:26.06.2014.
2. ಸರ್ಕಾರದ ಆದೇಶದ ಸಂಖ್ಯೆ:ಇಡಿ 295 ಮಾಹಿತಿ 2014 ದಿನಾಂಕ:09.11.2015.
3. ಸರ್ಕಾರದ ಆದೇಶದ ಸಂಖ್ಯೆ:ಇಪಿ 62 ಎಸ್‌ಎಲ್‌ಬಿ 2021 ದಿನಾಂಕ:15.03.2021.
4. ಸರ್ಕಾರದ ಆದೇಶ ಸಂಖ್ಯೆ:ಇಪಿ 189 ಎಸ್‌ಎಲ್‌ಬಿ 2021 ದಿನಾಂಕ:30.11.2021
5. ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆರವರ ಕಛೇರಿ ಸುತ್ತೋಲೆ ಸಂಖ್ಯೆ:ಸಿ4(6) ಶೈ.ವ.ಪ್ರಾ-01/2022-23 ದಿನಾಂಕ:20.04.2022.
6. ಈ ಕಛೇರಿ ಸುತ್ತೋಲೆ ಸಂಖ್ಯೆ:ಸಿ1/ಎಸ್‌ಎಸ್‌ಎಲ್‌ಸಿ/ಆ.ವಿ.ಶಾ/41/2021-22 ದಿನಾಂಕ:14.01.2022
7. ಈ ಕಛೇರಿ ಸುತ್ತೋಲೆ ಸಂಖ್ಯೆ:ಎ8/ಎಸ್‌ಎಸ್‌ಎಲ್‌ಸಿ/ಹಾ.ಕ-23/10/2022-23 ದಿನಾಂಕ:30.06.2022.
8. ಈ ಕಛೇರಿ ಸುತ್ತೋಲೆ ಸಂಖ್ಯೆ:ಎ8/ಎಸ್‌ಎಸ್‌ಎಲ್‌ಸಿ/ಪ್ರ.ಪ.ಸ್ವ/12/2022-23 ದಿನಾಂಕ:11.07.2022.

* * * * *

2023ರ ಮಾರ್ಚ್/ಏಪ್ರಿಲ್ ಮಾಹೆಯಲ್ಲಿ ನಡೆಯಲಿರುವ 2022-23ನೇ ಸಾಲಿನ ಎಸ್.ಎಸ್.ಎಲ್.ಸಿ ಮುಖ್ಯ ಪರೀಕ್ಷೆಗೆ ರಾಜ್ಯದ ಸರ್ಕಾರಿ ಮತ್ತು ಸರ್ಕಾರದಿಂದ ಮಾನ್ಯತೆ ಪಡೆದ ಅನುದಾನಿತ, ಅನುದಾನರಹಿತ ಶಾಲಾ/ ಕಾಲೇಜುಗಳಿಂದ ಹಾಜರಾಗುವ ಅರ್ಹ ವಿದ್ಯಾರ್ಥಿಗಳನ್ನು ನೋಂದಾಯಿಸಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಇದಲ್ಲದೆ ಖಾಸಗಿ ಅಭ್ಯರ್ಥಿಗಳು ಮತ್ತು ಪುನರಾವರ್ತಿತ ಅಭ್ಯರ್ಥಿಗಳು ಸಹ ಈ ಪರೀಕ್ಷೆಗೆ ನೋಂದಾಯಿಸಲು ಅರ್ಜಿಗಳನ್ನು ಶಾಲೆಗಳ ಮುಖಾಂತರ ಸಲ್ಲಿಸಬಹುದಾಗಿದೆ. ಸದರಿ ಶಾಲೆಗಳ ಮುಖ್ಯ ಶಿಕ್ಷಕರು ತಮ್ಮ ಶಾಲೆಯಿಂದ 2023ರ ಎಸ್.ಎಸ್.ಎಲ್.ಸಿ ಪರೀಕ್ಷೆಗೆ ಹಾಜರಾಗುವ ಅರ್ಹ ಶಾಲಾ ವಿದ್ಯಾರ್ಥಿಗಳ (CCERF), ಖಾಸಗಿ ಅಭ್ಯರ್ಥಿಗಳ (CCEPF) ಮತ್ತು ಪುನರಾವರ್ತಿತ ಅಭ್ಯರ್ಥಿಗಳ (CCERR, CCEPR, NSR & NSPR) ವಿವರಗಳನ್ನು ಮಂಡಳಿಯ https://sslc.karnataka.gov.in ಜಾಲತಾಣದ ಶಾಲಾ ಲಾಗಿನ್ ಮೂಲಕ ಅಪ್‌ಲೋಡ್ ಮಾಡಲು ಕೆಳಕಂಡಂತೆ ಮಾರ್ಗಸೂಚಿ ಹೊರಡಿಸಲಾಗಿದೆ. ವಿದ್ಯಾರ್ಥಿಗಳ ನೋಂದಣಿಗೆ ಅಗತ್ಯವಿರುವ ಮಾಹಿತಿಗಳನ್ನು ಸಂಗ್ರಹಿಸಿಕೊಂಡು ಮಂಡಳಿ ತಿಳಿಸುವ ದಿನಾಂಕದಲ್ಲಿ ಶಾಲಾ ಲಾಗಿನ್‌ನಲ್ಲಿ ವಿದ್ಯಾರ್ಥಿಗಳ ನೋಂದಣಿಯನ್ನು ಮಾಡುವುದು.

### I. ಶೈಕ್ಷಣಿಕ ವಿಭಾಗ:-

ಸರ್ಕಾರದ ಆದೇಶ ಸಂಖ್ಯೆ:ಇಡಿ.156.ಮಾಹಿತಿ.2014, ದಿನಾಂಕ:26.06.2014 ಮತ್ತು ಸರ್ಕಾರದ ಆದೇಶ ಸಂಖ್ಯೆ:ಇಡಿ 295 ಮಾಹಿತಿ 2014 ದಿನಾಂಕ:09.11.2015 ರನ್ವಯ, ನಿರಂತರ ಹಾಗೂ ಸಮಗ್ರ ಮೌಲ್ಯಮಾಪನ (ಸಿ.ಸಿ.ಇ) ಪದ್ಧತಿಯನ್ನು ರಾಜ್ಯದ ಸರ್ಕಾರಿ, ಖಾಸಗಿ ಅನುದಾನಿತ ಮತ್ತು ಅನುದಾನರಹಿತ ಪ್ರೌಢಶಾಲೆಗಳಲ್ಲಿ 2022-23ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ನಡೆಯುವ ಎಸ್.ಎಸ್.ಎಲ್.ಸಿ. ಪರೀಕ್ಷೆಗೂ ಮುಂದುವರೆಸಲಾಗಿದೆ. ಈ ಹಿನ್ನೆಲೆಯಲ್ಲಿ ನಿರಂತರ ಹಾಗೂ ಸಮಗ್ರ ಮೌಲ್ಯಮಾಪನ (ಸಿ.ಸಿ.ಇ) ಅಳವಡಿಸುವ ವಿಧಿವಿಧಾನಗಳನ್ನು ಕೆಳಕಂಡಂತೆ ವಿವರಿಸಲಾಗಿದೆ.



8 2/7/9 [illegible]

1. ವಿದ್ಯಾರ್ಥಿಗಳನ್ನು ಪ್ರಗತಿಶೀಲರನ್ನಾಗಿಸಲು, ಸರ್ವತೋಮುಖ ಅಭಿವೃದ್ಧಿಗೆ ಪ್ರೇರೇಪಿಸಲು ಶಿಕ್ಷಣವೂ ಮಹತ್ತರವಾದ ಪಾತ್ರ ವಹಿಸುತ್ತದೆ. ವಿದ್ಯಾರ್ಥಿಗಳಲ್ಲಿ ಗುಣಮಟ್ಟದ ಕಲಿಕೆ ಉಂಟಾಗಬೇಕಾದಲ್ಲಿ ಅವರಲ್ಲಿ ಶಿಸ್ತು, ಕಾರ್ಯತತ್ಪರತೆ, ಸೃಜನಶೀಲತೆ, ಕಲಾತ್ಮಕತೆಗಳಿಗೆ ಒತ್ತು ನೀಡಬೇಕಾಗಿದೆ. ಇದನ್ನು ಸಾಧಿಸಲು ಪಠ್ಯ ವಿಷಯಗಳ ಮೌಲ್ಯಮಾಪನದ ಜೊತೆಗೆ ಸಹಪಠ್ಯ ಚಟುವಟಿಕೆಗಳ ಮೌಲ್ಯಮಾಪನದ ಅಗತ್ಯತೆ ಇರುವುದನ್ನು ಮನಗಂಡಿದೆ.

2. ಶೈಕ್ಷಣಿಕ ವರ್ಷದಲ್ಲಿ ವಿಷಯವಾರು ಒಟ್ಟು 04 ರೂಪಣಾತ್ಮಕ ಮೌಲ್ಯಮಾಪನಗಳನ್ನು ಮಾಡಲಾಗುತ್ತಿದ್ದು, ಪ್ರತಿ ರೂಪಣಾತ್ಮಕ ಮೌಲ್ಯಮಾಪನದಲ್ಲಿ (ಎರಡು ಚಟುವಟಿಕೆಗಳನ್ನು) ಒಂದು ಕಿರು ಪರೀಕ್ಷೆಯನ್ನು ನಡೆಸಬೇಕಾಗುತ್ತದೆ. ಒಟ್ಟಾರೆ 04 ರೂಪಣಾತ್ಮಕ ಮೌಲ್ಯಮಾಪನಗಳಿಂದ 08 ಚಟುವಟಿಕೆಗಳು ಹಾಗೂ 04 ಕಿರು ಪರೀಕ್ಷೆಗಳನ್ನು ನಡೆಸಬೇಕಾಗುತ್ತದೆ.

3. 2014–15ನೇ ಸಾಲಿನಿಂದ ಜಾರಿಗೆ ಬರುವಂತೆ (2015ನೇ ಏಪ್ರಿಲ್ ಪರೀಕ್ಷೆಯಿಂದ) ಕೆಳಕಂಡ ಮಾನದಂಡಗಳನ್ನು ಆಧರಿಸಿ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ನಿರಂತರ ಹಾಗೂ ಸಮಗ್ರ ಮೌಲ್ಯಮಾಪನ ಪದ್ಧತಿ (ಸಿ.ಸಿ.ಇ.)ಯನ್ನು ಅಳವಡಿಸಿ ಏಪ್ರಿಲ್–2015ರಲ್ಲಿ ಹಾಗೂ ತದನಂತರದಲ್ಲಿ ನಡೆಯುವ ಎಸ್.ಎಸ್.ಎಲ್.ಸಿ. ಪರೀಕ್ಷಾ ಫಲಿತಾಂಶವನ್ನು ಇದೇ ರೀತಿ ಅಂಕಗಳು ಹಾಗೂ ಶ್ರೇಣಿಗಳ ಆಧಾರದ ಮೇರೆಗೆ ಪ್ರಕಟಿಸಲಾಗುವುದು.

**I(A) ಮಾನದಂಡಗಳು (ಶಾಲಾ ವಿದ್ಯಾರ್ಥಿಗಳಿಗೆ ಮಾತ್ರ) :–**

1. ಹತ್ತು ವರ್ಷದ ಔಪಚಾರಿಕ ಶಿಕ್ಷಣವನ್ನು ಮುಗಿಸಿದ ಎಲ್ಲಾ ಶಾಲಾ ವಿದ್ಯಾರ್ಥಿಗಳು, ಹತ್ತನೇ ವರ್ಷದ ಅಂತ್ಯದಲ್ಲಿ ಎಸ್.ಎಸ್.ಎಲ್.ಸಿ. ಅಂತಿಮ ಪರೀಕ್ಷೆ ಬರೆಯತಕ್ಕದ್ದು.
2. ಪರೀಕ್ಷೆಯು ವಿದ್ಯಾರ್ಥಿಯ ಆಂತರಿಕ ಮೌಲ್ಯಮಾಪನ ಹಾಗೂ ಬಾಹ್ಯ ಪರೀಕ್ಷಾ ವಿಧಾನದಿಂದ ಕೂಡಿರಬೇಕು.
3. ಬಾಹ್ಯ ಪರೀಕ್ಷೆಗೆ ಶೇ.80 ಹಾಗೂ ಆಂತರಿಕ ಮೌಲ್ಯಮಾಪನಕ್ಕೆ ಶೇ.20 ಅಂಕಗಳನ್ನು ಮೀಸಲಿಡತಕ್ಕದ್ದು.
4. ವಿದ್ಯಾರ್ಥಿಗಳ ಪ್ರಗತಿಯನ್ನು ಭಾಗ–ಎ (ಪಠ್ಯ ವಿಷಯಗಳು), ಭಾಗ–ಬಿ (ಸಹಪಠ್ಯ ವಿಷಯಗಳು) ಆಧಾರದ ಮೇಲೆ ಪರಿಗಣಿಸಬೇಕಾಗುತ್ತದೆ.
5. ಭಾಗ–ಎ ಯಲ್ಲಿ ಬರುವ ಪ್ರತಿ ವಿಷಯಗಳಿಗೆ ಅಂಕಗಳು ಹಾಗೂ ಶ್ರೇಣಿಗಳನ್ನು ಒಟ್ಟಾರೆ ಅಂಕಗಳು ಮತ್ತು ಶ್ರೇಣಿಯನ್ನು (Cumulative Grade Average) CGA ಆಧರಿಸಿ ನೀಡಲಾಗುತ್ತದೆ.
6. ಎಲ್ಲಾ ವಿಷಯಗಳಲ್ಲಿ ಬಾಹ್ಯ ಪರೀಕ್ಷೆಗೆ ಒಟ್ಟು 500 ಅಂಕಗಳು ಮತ್ತು ಆಂತರಿಕ ಮೌಲ್ಯಮಾಪನಕ್ಕೆ 125 ಅಂಕಗಳನ್ನು ನಿಗದಿಪಡಿಸಿದೆ. ವಿಷಯವಾರು ಅಂಕಗಳ ವಿಂಗಡಣೆ ಕೆಳಕಂಡಂತಿದೆ.

| ವಿಷಯ | ಬಾಹ್ಯ ಪರೀಕ್ಷೆ | ಆಂತರಿಕ ಮೌಲ್ಯಮಾಪನ | ಒಟ್ಟು |
|---|---|---|---|
| ಪ್ರಥಮ ಭಾಷೆ | 100 | 25 | 125 |
| ದ್ವಿತೀಯ ಭಾಷೆ | 80 | 20 | 100 |
| ತೃತೀಯ ಭಾಷೆ | 80 | 20 | 100 |
| ಗಣಿತ | 80 | 20 | 100 |
| ವಿಜ್ಞಾನ | 80 | 20 | 100 |
| ಸಮಾಜ ವಿಜ್ಞಾನ | 80 | 20 | 100 |
| ಒಟ್ಟು | 500 | 125 | 625 |

7. ಭಾಗ–ಬಿಯಲ್ಲಿ (P1) ದೈಹಿಕ ಮತ್ತು ಆರೋಗ್ಯ ಶಿಕ್ಷಣ, (P2) ಮನೋಭಾವ ಮತ್ತು ಮೌಲ್ಯಗಳು, (P3) ಕಾರ್ಯಾನುಭವ, (P4) ಕಲಾ ಶಿಕ್ಷಣ ಈ ಸಹಪಠ್ಯ ವಿಷಯಗಳಿಗೆ ಎ, ಬಿ ಅಥವಾ ಸಿ ಶ್ರೇಣಿಗಳನ್ನು ನೀಡತಕ್ಕದ್ದು.

## I(B) ಅಂಕಗಳು ಮತ್ತು ಶ್ರೇಣಿಗಳ ವಿವರ :

**ಒಟ್ಟು 625 ಅಂಕಗಳಿಗೆ**

| ಅಂಕಗಳು | ಶೇಕಡಾ | ಶ್ರೇಣಿ |
|---|---|---|
| 563–625 | 90 ರಿಂದ 100 | ಎ+ |
| 500–562 | 80 ರಿಂದ 90 ರವರೆಗೆ | ಎ |
| 438–499 | 70 ರಿಂದ 80 ರವರೆಗೆ | ಬಿ+ |
| 375–437 | 60 ರಿಂದ 70 ರವರೆಗೆ | ಬಿ |
| 313–374 | 50 ರಿಂದ 60 ರವರೆಗೆ | ಸಿ+ |
| 219–312 | 35 ರಿಂದ 50 ರವರೆಗೆ | ಸಿ |

**ಒಟ್ಟು 125 ಅಂಕಗಳಿಗೆ (ಪ್ರಥಮ ಭಾಷಾ ವಿಷಯದಲ್ಲಿ)**

| ಅಂಕಗಳು | ಶೇಕಡಾ | ಶ್ರೇಣಿ |
|---|---|---|
| 113–125 | 90 ರಿಂದ 100 | ಎ+ |
| 100–112 | 80 ರಿಂದ 90 ರವರೆಗೆ | ಎ |
| 88–99 | 70 ರಿಂದ 80 ರವರೆಗೆ | ಬಿ+ |
| 75–87 | 60 ರಿಂದ 70 ರವರೆಗೆ | ಬಿ |
| 63–74 | 50 ರಿಂದ 60 ರವರೆಗೆ | ಸಿ+ |
| 44–62 | 35 ರಿಂದ 50 ರವರೆಗೆ | ಸಿ |

**ಒಟ್ಟು 100 ಅಂಕಗಳಿಗೆ (ವಿಷಯವಾರು)**

| ಅಂಕಗಳು | ಶೇಕಡಾ | ಶ್ರೇಣಿ |
|---|---|---|
| 90–100 | 90 ರಿಂದ 100 | ಎ+ |
| 80–89 | 80 ರಿಂದ 90 ರವರೆಗೆ | ಎ |
| 70–79 | 70 ರಿಂದ 80 ರವರೆಗೆ | ಬಿ+ |
| 60–69 | 60 ರಿಂದ 70 ರವರೆಗೆ | ಬಿ |
| 50–59 | 50 ರಿಂದ 60 ರವರೆಗೆ | ಸಿ+ |
| 35–49 | 35 ರಿಂದ 50 ರವರೆಗೆ | ಸಿ |

**ಭಾಗ 'ಬಿ'ಯ ಸಹಪಠ್ಯ ವಿಷಯಗಳಿಗೆ ಗಳಿಸಿದ ಅಂಕಗಳ ಆಧಾರದ ಮೇಲೆ ನೀಡುವ ಗ್ರೇಡ್(ಶ್ರೇಣಿ)**

| ಶೇಕಡಾ | ಶ್ರೇಣಿ |
|---|---|
| 80 ರಿಂದ 100 | ಎ |
| 50 ರಿಂದ 79ರವರೆಗೆ | ಬಿ |
| 35 ರಿಂದ 49ರವರೆಗೆ | ಸಿ |

ವಿಶೇಷ ಸೂಚನೆ :-

- **ಬಾಹ್ಯ ಪರೀಕ್ಷೆಯಲ್ಲಿ ಪ್ರಥಮ ಭಾಷೆಯಲ್ಲಿ 100 ಅಂಕಗಳಿಗೆ ಕನಿಷ್ಠ 35 ಹಾಗೂ ಇತರೆ 5 ವಿಷಯಗಳಲ್ಲಿ ಪ್ರತಿ ವಿಷಯಕ್ಕೆ 80 ಅಂಕಗಳಿಗೆ ಕನಿಷ್ಠ 28 ಅಂಕಗಳನ್ನು ಪಡೆದಿರತಕ್ಕದ್ದು. ಒಟ್ಟಾರೆ ವಿದ್ಯಾರ್ಥಿಯು ತೇರ್ಗಡೆಯಾಗಲು ಬಾಹ್ಯ ಪರೀಕ್ಷೆಯ 500 ಅಂಕಗಳಿಗೆ ಕನಿಷ್ಠ 175 ಅಂಕಗಳನ್ನು(ಶೇ.35) ಪಡೆದಿರಲೇಬೇಕು.**
- **ವಿದ್ಯಾರ್ಥಿ ತೇರ್ಗಡೆಯಾಗಲು ಬಾಹ್ಯ ಪರೀಕ್ಷೆಯಲ್ಲಿ ಪ್ರತಿ ವಿಷಯದಲ್ಲಿ ಕನಿಷ್ಠ ಶೇ.30 ಹಾಗೂ ಬಾಹ್ಯ ಪರೀಕ್ಷೆಯ ಎಲ್ಲಾ ವಿಷಯಗಳ ಸರಾಸರಿ ಶೇ.35 ಆಗಿರಬೇಕು. ಹಾಗೂ ಬಾಹ್ಯ ಪರೀಕ್ಷೆ ಮತ್ತು ಆಂತರಿಕ ಮೌಲ್ಯಮಾಪನದ ಎಲ್ಲಾ ವಿಷಯಗಳ ಸರಾಸರಿ ಶೇಕಡ 35 ಆಗಿರಬೇಕು.**
- ಅನುತ್ತೀರ್ಣರಾದ ವಿದ್ಯಾರ್ಥಿಗಳಿಗೆ ವಿಷಯವಾರು ಬಾಹ್ಯ ಪರೀಕ್ಷೆಯಲ್ಲಿ ಶೇಕಡ 35 ಅಂಕಗಳಿಸಿ ಉತ್ತೀರ್ಣರಾಗಿದ್ದರೂ, ಬಾಹ್ಯ ಮತ್ತು ಆಂತರಿಕ ಮೌಲ್ಯಮಾಪನಗಳ ಒಟ್ಟಾರೆ ಶೇಕಡ 35 ಕ್ಕಿಂತ ಕಡಿಮೆ ಇದ್ದಲ್ಲಿ ಆಯಾ ವಿಷಯಗಳ ಆಂತರಿಕ ಮೌಲ್ಯಮಾಪನದ ಅಂಕಗಳನ್ನು ಉತ್ತಮ ಪಡಿಸಿಕೊಳ್ಳಲು ಸಾಧ್ಯವಿಲ್ಲದ ಕಾರಣ ಬಾಹ್ಯ ಪರೀಕ್ಷೆಯಲ್ಲಿ ಅಂಕಗಳನ್ನು ಉತ್ತಮಪಡಿಸಿಕೊಂಡು ಆ ವಿಷಯದ ಒಟ್ಟಾರೆ ಅಂಕ ಶೇಕಡ 35 ಗಳಿಸಿರಬೇಕು.

## I(C) ರೂಪಣಾತ್ಮಕ ಮೌಲ್ಯಮಾಪನದ (Formative Assessment) ಚಟುವಟಿಕೆಗಳು:

1. ಆಂತರಿಕ ಮೌಲ್ಯಮಾಪನದ ಅಂಕಗಳನ್ನು ನಾಲ್ಕು ರೂಪಣಾತ್ಮಕ ಮೌಲ್ಯಮಾಪನದ ಆಧಾರದ ಮೇಲೆ ನಿರ್ಧರಿಸುವುದು. FA1, FA2, FA3, FA4
2. ಪ್ರತಿಯೊಂದು ರೂಪಣಾತ್ಮಕ ಮೌಲ್ಯಮಾಪನದಲ್ಲಿ 20 ಅಂಕಗಳ ಕಿರು ಪರೀಕ್ಷೆ, (ಶಿಕ್ಷಕರ ನಿರ್ಧಾರದಂತೆ) ಹಾಗೂ 15 ಅಂಕಗಳ ಎರಡು ಚಟುವಟಿಕೆಗಳು ಇದ್ದು, ಪ್ರತಿ ರೂಪಣಾತ್ಮಕ ಮೌಲ್ಯಮಾಪನಕ್ಕೆ 50 ಅಂಕಗಳು ನಿಗದಿಯಾಗಿರುತ್ತದೆ. ಒಟ್ಟು ನಾಲ್ಕು ರೂಪಣಾತ್ಮಕ ಮೌಲ್ಯಮಾಪನದ ಅಂಕ 200 ಆಗಿರುತ್ತದೆ. ವಿದ್ಯಾರ್ಥಿಯು ಗಳಿಸಿದ ಒಟ್ಟು ಅಂಕಗಳನ್ನು, 200 ಅಂಕಗಳಿಗೆ ಪರಿಮಾಣಾತ್ಮಕವಾಗಿ ಪ್ರಥಮ ಭಾಷೆಗೆ 25 ಅಂಕಗಳಿಗೂ, ಉಳಿದ 05 ವಿಷಯಗಳಲ್ಲಿ 20 ಅಂಕಗಳಿಗೂ ಲೆಕ್ಕ ಹಾಕಿ ಆಂತರಿಕ ಮೌಲ್ಯಮಾಪನಕ್ಕೆ ಪರಿಗಣಿಸತಕ್ಕದ್ದು.
3. ಆಂತರಿಕ ಮೌಲ್ಯಮಾಪನದಲ್ಲಿ ನಡೆಸುವ ಕಿರು ಪರೀಕ್ಷೆ ಹಾಗೂ ಚಟುವಟಿಕೆಗಳು ಸಿ.ಸಿ.ಇ. ಆಧಾರವಾಗಿರಬೇಕು.
4. ಪ್ರತಿ ರೂಪಣಾತ್ಮಕ ಮೌಲ್ಯಮಾಪನದ ಚಟುವಟಿಕೆಗಳು ಮತ್ತು ಕಿರು ಪರೀಕ್ಷೆಗಳ ಅಂಕಗಳು ದಶಮಾಂಶ ರೂಪದಲ್ಲಿದ್ದರೆ, ಉದಾಹರಣೆಗೆ:-39.25, 34.50, 43.75, 44.00 ಹೀಗೆ ಪಡೆದಿದ್ದಲ್ಲಿ ಕೊನೆಯವರೆಗೂ ಹಾಗೇ ಉಳಿಸಿಕೊಂಡಿದ್ದು, 04 ರೂಪಣಾತ್ಮಕ ಮೌಲ್ಯಮಾಪನಗಳು ಮತ್ತು ಚಟುವಟಿಕೆಗಳು ಪೂರ್ಣಗೊಂಡ ನಂತರ ಮುಂದಿನ ಪೂರ್ಣಾಂಕಕ್ಕೆ ಪರಿವರ್ತಿಸುವುದು.

ಉದಾಹರಣೆಗೆ:-

| Subject | FA1 | | | | FA2 | | | | FA3 | | | | FA4 | | | | GRAND TOTAL | |
|---|---|---|---|---|---|---|---|---|---|---|---|---|---|---|---|---|---|---|
| | Test | Activity 1 | Activity 2 | Total | Test | Activity 1 | Activity 2 | Total | Test | Activity 1 | Activity 2 | Total | Test | Activity 1 | Activity 2 | Total | | |
| | 20 | 15 | 15 | 50 | 20 | 15 | 15 | 50 | 20 | 15 | 15 | 50 | 20 | 15 | 15 | 50 | 200 | |
| Ist language | 18 | 14 | 10.5 | 42.5 | 17 | 13 | 14.5 | 44.5 | 16 | 14 | 13 | 43 | 15 | 12 | 13 | 43 | 173 | (173/200) X 25= 21.62 = 22 |
| Other subjects | 13 | 14 | 12 | 39 | 14 | 14 | 13 | 41 | 15 | 12 | 11 | 38 | 14 | 13 | 14 | 41 | 159 | (159/200) X 20 = 15.9= 16 |
| | 17 | 15 | 13 | 45 | 11 | 13 | 15 | 39 | 19 | 12 | 15 | 46 | 09 | 11 | 12 | 32 | 162 | (162/200) X 20 = 16.2= 17 |

5. ವಿದ್ಯಾರ್ಥಿಗಳು ತೇರ್ಗಡೆಯಾಗಲು ಆಂತರಿಕ ಮೌಲ್ಯಮಾಪನದಲ್ಲಿ ಇಂತಿಷ್ಟೇ ಕನಿಷ್ಠ ಅಂಕಗಳನ್ನು ಪಡೆಯಬೇಕು ಎಂಬ ನಿಯಮವಿರುವುದಿಲ್ಲ.

6. ವಿದ್ಯಾರ್ಥಿಗಳ ಚಟುವಟಿಕೆಗಳ ದಾಖಲೀಕರಣವನ್ನು ಮುಖ್ಯ ಶಿಕ್ಷಕರು ನಿರ್ವಹಣೆ ಮಾಡುವುದು ತುಂಬಾ ಪ್ರಾಮುಖ್ಯತೆ ಹೊಂದಿರುತ್ತದೆ. ಮೌಲ್ಯಮಾಪನ ಮಾಡಿದ ವಿದ್ಯಾರ್ಥಿಗಳ ಚಟುವಟಿಕೆಗಳು ಹಾಗೂ ಕಿರು ಪರೀಕ್ಷೆಯ ಉತ್ತರ ಪತ್ರಿಕೆಗಳ ಮಾಹಿತಿಯನ್ನು ಇಲಾಖೆ, ಪೋಷಕರು ಹಾಗೂ ವಿದ್ಯಾರ್ಥಿಗಳು ಪಡೆಯುವ ಸಂಭವಗಳಿರುತ್ತದೆ. ಆದ್ದರಿಂದ ಸರ್ಕಾರಿ/ ಅನುದಾನಿತ/ ಅನುದಾನರಹಿತ ಎಲ್ಲಾ ಶಾಲೆಗಳ ಮುಖ್ಯ ಶಿಕ್ಷಕರು ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನದ ಚಟುವಟಿಕೆ ಮತ್ತು ಕಿರು ಪರೀಕ್ಷೆಗಳ ದಾಖಲೆಗಳನ್ನು ಮಂಡಳಿಯ ಕಾಯ್ದೆ 1966ರ Annexure-3 ನಿಯಮ-20(ಎ) ಅನ್ವಯ ಎಸ್.ಎಸ್.ಎಲ್.ಸಿ. ಪರೀಕ್ಷಾ ಫಲಿತಾಂಶ ಪ್ರಕಟವಾದ ನಂತರ ಕನಿಷ್ಠ 05 ತಿಂಗಳವರೆಗೆ ಸುರಕ್ಷಿತವಾಗಿ ಮುಖ್ಯ ಶಿಕ್ಷಕರ ವಶದಲ್ಲಿ ಸಂರಕ್ಷಿಸಿಡಬೇಕು. ಉಳಿದಂತೆ ಕ್ರೋಢೀಕೃತ ವಹಿಗಳನ್ನು ದಾಖಲಾತಿ ವಹಿಯಂತೆ ಖಾಯಂ ಆಗಿ ಶಾಲೆಯಲ್ಲಿ ಸಂರಕ್ಷಿಸಬೇಕಾಗುತ್ತದೆ.

7. ಪ್ರತಿ ರೂಪಣಾತ್ಮಕ ಮೌಲ್ಯಮಾಪನ ಮತ್ತು ಕಿರುಪರೀಕ್ಷೆಗಳಲ್ಲಿ ಗಳಿಸಿದ ಅಂಕಗಳನ್ನು ವಿದ್ಯಾರ್ಥಿಗೆ ಮತ್ತು ಪೋಷಕರುಗಳಿಗೆ ತಿಳಿಸಬೇಕು. ಈ ಮಾಹಿತಿಯನ್ನು ತಿಳಿಸಿದ ಬಗ್ಗೆ ಪೋಷಕರುಗಳಿಂದ ಕಡ್ಡಾಯವಾಗಿ ಸಹಿ ಪಡೆಯತಕ್ಕದ್ದು.

8. **ಖಾಸಗಿ ಅಭ್ಯರ್ಥಿಗಳಿಗೆ:-**

ಪಠ್ಯ ವಿಷಯಗಳಿಗಷ್ಟೆ ಅಂತಿಮ ಪರೀಕ್ಷೆಯನ್ನು ನಡೆಸಲಾಗುವುದು.

| | |
|---|---|
| ಪ್ರಥಮ ಭಾಷೆ : | 125 |
| ದ್ವಿತೀಯ ಭಾಷೆ : | 100 |
| ತೃತೀಯ ಭಾಷೆ : | 100 |
| ಗಣಿತ : | 100 |
| ವಿಜ್ಞಾನ : | 100 |
| ಸಮಾಜ ವಿಜ್ಞಾನ : | 100 |
| **ಒಟ್ಟು :** | **625 ಅಂಕಗಳು** |

ಖಾಸಗಿ ಅಭ್ಯರ್ಥಿಗಳಿಗೆ ಆಂತರಿಕ ಮೌಲ್ಯಮಾಪನ ಹಾಗೂ ಭಾಗ-ಬಿ ಅನ್ವಯವಾಗುವುದಿಲ್ಲ. ಬಾಹ್ಯ ಪರೀಕ್ಷೆಯನ್ನು 625 ಅಂಕಗಳಿಗೆ ನಡೆಸಲಾಗುವುದು.

## I(D) ಇತರೆ ವಿಷಯಗಳು:

- ಅರ್ಧ ವಾರ್ಷಿಕ ಪರೀಕ್ಷೆಯ ಅಂಕಗಳನ್ನು ರೂಪಣಾತ್ಮಕ ಮೌಲ್ಯಮಾಪನದೊಡನೆ ಸೇರಿಸುವ ಅವಶ್ಯಕತೆ ಇಲ್ಲ.
- ಸತತ 06 ಪ್ರಯತ್ನಗಳಲ್ಲಿ ಅನುತ್ತೀರ್ಣವಾಗಿದ್ದಲ್ಲಿ ಮುಂದಿನ ಪರೀಕ್ಷೆಗೆ ಹೊಸದಾಗಿ ಖಾಸಗಿ ಅಭ್ಯರ್ಥಿಯಾಗಿ ನೋಂದಣಿ ಮಾಡಿಸಿ ಸಿ.ಸಿ.ಇ. ಆಧಾರಿತ ಹೊಸ ಪಠ್ಯಕ್ರಮದಲ್ಲಿ ಪರೀಕ್ಷೆಗೆ ಹಾಜರಾಗತಕ್ಕದ್ದು ಹಾಗೂ 06 ವಿಷಯಗಳಿಗೂ ಹೊಸದಾಗಿ ಪರೀಕ್ಷೆಗೆ ಹಾಜರಾಗತಕ್ಕದ್ದು.
- ಸರ್ಕಾರದ ಆದೇಶ ಸಂಖ್ಯೆ:ಇಡಿ 156 ಎಸ್‌ಎಲ್‌ಬಿ 2016 ದಿನಾಂಕ:11.08.2016 ರಂತೆ ವಿದ್ಯಾರ್ಥಿಗಳು ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಅನುತ್ತೀರ್ಣರಾದ ಶಾಲಾ ವಿದ್ಯಾರ್ಥಿಗಳಿಗೆ ಪುನ: ಮುಂದಿನ ಒಂದು ಶೈಕ್ಷಣಿಕ ವರ್ಷದಲ್ಲಿ ಶಾಲಾ ಅಭ್ಯರ್ಥಿಯಾಗಿ ಪ್ರವೇಶ ಪಡೆಯಲು ಅವಕಾಶವಿರುತ್ತದೆ. ಅನುತ್ತೀರ್ಣರಾದ ಶಾಲಾ ವಿದ್ಯಾರ್ಥಿಗಳು ಮರು ಶಾಲಾ ಪ್ರವೇಶ ಪಡೆಯಲು ಎಲ್ಲಾ ಆರು (06) ವಿಷಯಗಳನ್ನು ವ್ಯಾಸಂಗ ಮಾಡಿ ಪರೀಕ್ಷೆಗೆ ಕುಳಿತುಕೊಳ್ಳಬೇಕಾಗಿರುತ್ತದೆ.
- ಪ್ರಶ್ನೆಪತ್ರಿಕೆ ಹಾಗೂ ಉತ್ತರ ಪತ್ರಿಕೆಗಳನ್ನು ಪ್ರತ್ಯೇಕವಾಗಿ ಮುದ್ರಿಸಿ ನೀಡಲಾಗುವುದು. ಪ್ರಶ್ನೆಪತ್ರಿಕೆ ಹಾಗೂ ಉತ್ತರ ಪತ್ರಿಕೆಗಳ ನಿರ್ವಹಣೆ ಮತ್ತು ವಿತರಣೆ ಕುರಿತು ಹಾಗೂ ಉತ್ತರ ಪತ್ರಿಕೆಗಳ ಮೌಲ್ಯಮಾಪನ ಕಾರ್ಯದಲ್ಲಿ ಜಿಲ್ಲಾ ಉಪನಿರ್ದೇಶಕರು (ಆಡಳಿತ), ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ಮೌಲ್ಯಮಾಪಕರು ಅನುಸರಿಸಬೇಕಾದ ಕರ್ತವ್ಯಗಳ ಕುರಿತು ಮಂಡಳಿಯಿಂದ ಪ್ರತ್ಯೇಕವಾಗಿ ವಿವರವಾದ ಸುತ್ತೋಲೆಯನ್ನು ಹೊರಡಿಸಲಾಗುವುದು.

- **2020-21 ಮತ್ತು 2021-22ನೇ ಸಾಲಿನಲ್ಲಿ ಶಾಲಾ ವಿದ್ಯಾರ್ಥಿ, ಖಾಸಗಿ ಅಭ್ಯರ್ಥಿ ಮತ್ತು ಪುನರಾವರ್ತಿತ ಅಭ್ಯರ್ಥಿಗಳಾಗಿ ಪ್ರಥಮ ಪ್ರಯತ್ನದಲ್ಲಿ ಪರೀಕ್ಷೆಗೆ ಹಾಜರಾಗಿ ಅನುತ್ತೀರ್ಣರಾದವರು ಈ ಬಾರಿಯೂ ಸಹ ಅದೇ ಸಾಲಿನಲ್ಲಿ ನಿಗಧಿಗೊಳಿಸಿದ್ದ ಪಠ್ಯವಸ್ತುಗಳನ್ನು ಅಭ್ಯಸಿಸಿ ಪರೀಕ್ಷೆಗೆ ಹಾಜರಾಗುವುದು. ಉಳಿದಂತೆ 2020-21 ಕ್ಕೂ ಹಿಂದಿನ ಸಾಲಿನಲ್ಲಿ ಅನುತ್ತೀರ್ಣರಾದ ಅರ್ಹ ಪುನರಾವರ್ತಿತ ಅಭ್ಯರ್ಥಿಗಳು ಮತ್ತು 2022-23ನೇ ಸಾಲಿನಲ್ಲಿ ಪ್ರಥಮ ಪ್ರಯತ್ನವಾಗಿ ಕುಳಿತುಕೊಳ್ಳುವ ಹೊಸ ಶಾಲಾ ಮತ್ತು ಖಾಸಗಿ ಅಭ್ಯರ್ಥಿಗಳು ಪ್ರಸಕ್ತ ಸಾಲಿನ ಪೂರ್ಣ ಪಠ್ಯಗಳನ್ನು ಅಭ್ಯಸಿಸಿ ಪರೀಕ್ಷೆಗೆ ಹಾಜರಾಗತಕ್ಕದ್ದು.**

## I(E) ಪಠ್ಯ ಪುಸ್ತಕ ಪರಿಷ್ಕರಣೆ ಕುರಿತು :-

- **ಶಾಲಾ ಅಭ್ಯರ್ಥಿಗಳು ಮತ್ತು ಖಾಸಗಿ ಅಭ್ಯರ್ಥಿಗಳು:** ಪ್ರಸಕ್ತ ಸಾಲಿಗೆ ಪರಿಷ್ಕೃತಗೊಂಡಿರುವ ಪ್ರಥಮ ಭಾಷೆ ಕನ್ನಡ ಮತ್ತು ಸಮಾಜ ವಿಜ್ಞಾನ (ಎಲ್ಲಾ ಮಾಧ್ಯಮ) ವಿಷಯಗಳನ್ನು ಹಾಗೂ ಪರಿಷ್ಕೃತವಾಗದೇ ಯಥಾವತ್ತು ಮುಂದುವರೆದಿರುವ ಭಾಷಾವಾರು ಮತ್ತು ಕೋರ್ ವಿಷಯಗಳನ್ನು ಅವರವರ ಆಯ್ಕೆಗನುಗುಣವಾಗಿ ಅಭ್ಯಾಸ ಮಾಡಿ ಮಾರ್ಚ್/ಏಪ್ರಿಲ್-2023ರ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಹಾಜರಾಗುವುದು
- **ಶಾಲಾ ಪುನರಾವರ್ತಿತ / ಖಾಸಗಿ ಪುನರಾವರ್ತಿತ /ಎನ್.ಎಸ್.ಆರ್ /ಎನ್.ಎಸ್.ಪಿ.ಆರ್ ಅಭ್ಯರ್ಥಿಗಳು:** ಪ್ರಥಮ ಭಾಷೆ ಕನ್ನಡ ಮತ್ತು ಸಮಾಜ ವಿಜ್ಞಾನ (ಎಲ್ಲಾ ಮಾಧ್ಯಮ) ವಿಷಯಗಳನ್ನು ಕಳೆದ ಸಾಲಿನಲ್ಲಿ ನಿಗದಿಪಡಿಸಿದ್ದ ಪಠ್ಯಪುಸ್ತಕಗಳಂತೆ ಅಭ್ಯಾಸ ಮಾಡಬೇಕು. ಉಳಿದಂತೆ ಪರಿಷ್ಕೃತವಾಗದಿರುವ ಭಾಷಾವಾರು ವಿಷಯಗಳು ಮತ್ತು ಕೋರ್ ವಿಷಯಗಳನ್ನು ಅವರವರ ಆಯ್ಕೆಗನುಗುಣವಾಗಿ ಅಭ್ಯಾಸ ಮಾಡಿ ಮಾರ್ಚ್/ಏಪ್ರಿಲ್-2023ರ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಹಾಜರಾಗುವುದು.

## II. ಆಡಳಿತ ವಿಭಾಗ :-

**ಖಾಸಗಿ ಪ್ರೌಢಶಾಲೆಗಳ ನೋಂದಣಿ ಮತ್ತು ಮಾನ್ಯತೆ :-**

- ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ಕಾಯ್ದೆ- 1966 Chapter VI -ನಿಯಮ 36 ಮತ್ತು 37ರನ್ವಯ ಮಾನ್ಯತೆ ಪಡೆದ ಪ್ರೌಢಶಾಲೆಗಳ ವಿದ್ಯಾರ್ಥಿಗಳನ್ನು ಮಾತ್ರ ಎಸ್.ಎಸ್.ಎಲ್.ಸಿ ಪರೀಕ್ಷೆಗೆ ನೋಂದಾಯಿಸಲು ಅವಕಾಶವಿರುತ್ತದೆ.
- ಕರ್ನಾಟಕ ಶಿಕ್ಷಣ ಕಾಯ್ದೆ-1983 ನಿಯಮ-30, 31, 33, 36 ಹಾಗೂ 38 ರನ್ವಯ ಖಾಸಗಿ ಅನುದಾನಿತ ಹಾಗೂ ಅನುದಾನರಹಿತ ಪ್ರೌಢಶಾಲೆಗಳು ನೋಂದಣಿ ಮತ್ತು ಮಾನ್ಯತೆಯನ್ನು ಕಡ್ಡಾಯವಾಗಿ ಪಡೆದಿರಬೇಕು ಹಾಗೂ ಪ್ರೌಢಶಾಲೆಯಲ್ಲಿ ಬೋಧನೆ ಮಾಡುವ ಮಾಧ್ಯಮಗಳಿಗನುಗುಣವಾಗಿ ಸಕ್ಷಮ ಪ್ರಾಧಿಕಾರದಿಂದ ಮಾನ್ಯತೆಯು ನವೀಕರಣವಾಗಿರಬೇಕು.
- 2022-23ನೇ ಸಾಲಿನ ಮಾನ್ಯತೆ ನವೀಕರಣವನ್ನು ಸಕ್ಷಮ ಪ್ರಾಧಿಕಾರದಿಂದ ಸಕಾಲದಲ್ಲಿ ಪಡೆಯುವುದು.

**ಪರೀಕ್ಷೆಗೆ ಕುಳಿತುಕೊಳ್ಳುವ ವಿದ್ಯಾರ್ಥಿಗಳನ್ನು ಕೆಳಕಂಡಂತೆ ವರ್ಗೀಕರಿಸಲಾಗಿದೆ:-**

### 1. ಶಾಲಾ ಅಭ್ಯರ್ಥಿಗಳು:-

- ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ಕಾಯ್ದೆ-1966ರ **ChapterVI** ನಿಯಮ-**36** ಹಾಗೂ **37(i)(ii)** ಮತ್ತು **Annexure-III** ನಿಯಮ-7ರನ್ವಯ, ರಾಜ್ಯದ ಅಧಿಕೃತ ಪ್ರೌಢಶಾಲೆಯಲ್ಲಿ 8 ರಿಂದ 10ನೇ ತರಗತಿಯವರೆಗೆ ವಿದ್ಯಾರ್ಥಿ ವ್ಯಾಸಂಗ ಮಾಡಿರಬೇಕು ಅಂತಹ ವಿದ್ಯಾರ್ಥಿಯನ್ನು **"ಶಾಲಾ ವಿದ್ಯಾರ್ಥಿಯೆಂದು"** ಪರಿಗಣಿಸಲಾಗುತ್ತದೆ.
- 2022-23ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ರಾಜ್ಯದ ಸರ್ಕಾರಿ ಮತ್ತು ಸರ್ಕಾರದಿಂದ ಮಾನ್ಯತೆ ಪಡೆದ ಅನುದಾನಿತ ಹಾಗೂ ಅನುದಾನ ರಹಿತ ಶಾಲಾ ಕಾಲೇಜುಗಳಲ್ಲಿ 10ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳನ್ನು **"ಶಾಲಾ ಅಭ್ಯರ್ಥಿಗಳೆಂದು"** ಪರಿಗಣಿಸಿದೆ. ಈ ವರ್ಗದ ಸಂಕೇತ **"ಸಿ.ಸಿ.ಇ.-ಆರ್.ಎಫ್" (CCERF)** ಎಂದು ವರ್ಗೀಕರಿಸಿದೆ.

### 2. ಪುನರಾವರ್ತಿತ ಅಭ್ಯರ್ಥಿಗಳು:-

- ಶಾಲಾ/ಕಾಲೇಜುಗಳಲ್ಲಿ ವ್ಯಾಸಂಗ ಮಾಡಿ **CCE** ಪದ್ಧತಿಯಲ್ಲಿ ಪರೀಕ್ಷೆಗೆ ಕುಳಿತು ಅನುತ್ತೀರ್ಣರಾಗಿದ್ದು, ಪುನಃ ಎಸ್.ಎಸ್.ಎಲ್.ಸಿ. ಪರೀಕ್ಷೆಯನ್ನು ತೆಗೆದುಕೊಳ್ಳುವ ಅರ್ಹ ಅಭ್ಯರ್ಥಿಗಳನ್ನು (ಸತತ 6 ಪ್ರಯತ್ನಗಳ ಒಳಗಿರುವ) **CCERR** ಎಂಬುದಾಗಿ ವರ್ಗೀಕರಿಸಲಾಗಿದೆ.
- ಶಾಲಾ/ಕಾಲೇಜುಗಳಲ್ಲಿ ವ್ಯಾಸಂಗ ಮಾಡಿ ಏಪ್ರಿಲ್ 2011ಕ್ಕಿಂತ ಪೂರ್ವದಲ್ಲಿ **ಎಸ್ಎಸ್ಎಲ್ಸಿ ಪರೀಕ್ಷೆಯಲ್ಲಿ ಕುಳಿತು ಅನುತ್ತೀರ್ಣರಾಗಿದ್ದು, ಪುನ: ಎಸ್ಎಸ್ಎಲ್ಸಿ ಪರೀಕ್ಷೆಯನ್ನು ತೆಗೆದುಕೊಳ್ಳುವ ಅರ್ಹ ಅಭ್ಯರ್ಥಿಗಳನ್ನು NSR (New Scheme Repeaters)** ಎಂಬುದಾಗಿ ವರ್ಗೀಕರಿಸಲಾಗಿದೆ.

**ಈ NSR (New Scheme Repeaters) ಅಭ್ಯರ್ಥಿಗಳನ್ನು ಕೆಳಕಂಡಂತೆ ಎರಡು ಗುಂಪುಗಳಾಗಿ ವಿಂಗಡಿಸಲಾಗಿದೆ.**

1) 2002 ಮತ್ತು ಅದಕ್ಕಿಂತ ಹಿಂದಿನ ವರ್ಷಗಳ ಪರೀಕ್ಷೆಗಳಲ್ಲಿ ಅನುತ್ತೀರ್ಣರಾದ ಅಭ್ಯರ್ಥಿಗಳು.
2) 2003 ರಿಂದ ಜೂನ್ 2010ರವರೆಗಿನ ಪರೀಕ್ಷೆಯಲ್ಲಿ ಅನುತ್ತೀರ್ಣರಾಗಿರುವ ಅಭ್ಯರ್ಥಿಗಳು.

## 3. ಖಾಸಗಿ ಅಭ್ಯರ್ಥಿಗಳು:-

ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ಕಾಯ್ದೆ-1966ರ **ChapterVI** ನಿಯಮ-39**(i)(iii)(iv), 40,42,43** ಮತ್ತು **Annexure-III** ನಿಯಮ-9**(a)(b),10,11** ರನ್ವಯ, ಖಾಸಗಿ ಅಭ್ಯರ್ಥಿಯಾಗಿ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಹಾಜರಾಗಬಹುದು. ಖಾಸಗಿ ಅಭ್ಯರ್ಥಿಯಾಗಿ ಹಾಜರಾಗಲು ಬಯಸುವ ಅಭ್ಯರ್ಥಿಗಳು ಆಯಾ ವರ್ಷದ ಮಾರ್ಚ್-1ನೇ ತಾರೀಖಿಗೆ 15 ವರ್ಷ ವಯೋಮಿತಿ ಪೂರ್ಣಗೊಂಡಿರಬೇಕು.

ಮಾನ್ಯತೆ ಪಡೆದ ಮತ್ತು ಶಾಲಾ ಸಂಕೇತ ಪಡೆದ ಶಾಲೆಗಳಲ್ಲಿ ವ್ಯಾಸಂಗ ಮಾಡದಿರುವ/ಅರ್ಧದಲ್ಲಿಯೇ ವ್ಯಾಸಂಗ ಮೊಟಕುಗೊಳಿಸಿರುವ ಅಥವಾ ದಿನಾಂಕ:01.03.2023ಕ್ಕೆ 15 ವರ್ಷಗಳ ವಯೋಮಾನ ಪೂರ್ಣಗೊಳಿಸಿ ನೇರವಾಗಿ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಕುಳಿತುಕೊಳ್ಳಲು ಅಪೇಕ್ಷಿಸುವವರನ್ನು **"ಖಾಸಗಿ ಅಭ್ಯರ್ಥಿಗಳೆಂದು"** ಪರಿಗಣಿಸಲಾಗುತ್ತದೆ. ಇವರುಗಳು ತಮ್ಮ ಹೆಸರು ಮತ್ತು ಇತರೆ ವಿವರಗಳನ್ನು ಸಂಬಂಧಿಸಿದ ಸರ್ಕಾರಿ/ಸರ್ಕಾರದಿಂದ ಮಾನ್ಯತೆ ಪಡೆದ ಶಾಲೆಗಳ ಮುಖ್ಯಶಿಕ್ಷಕರಲ್ಲಿ ನೋಂದಣಿ ಶುಲ್ಕ ರೂ.205/- ಪಾವತಿಸಿ ನೋಂದಾಯಿಸಿಕೊಳ್ಳಬೇಕು. ಈ ಹಿಂದಿನ ವರ್ಷಗಳಲ್ಲಿ ನಿಗದಿತ ನೋಂದಣಿ ಶುಲ್ಕ ಪಾವತಿಸಿ ನೋಂದಣಿ ಮಾಡಿಸಿಕೊಂಡು ಆ ವರ್ಷದಲ್ಲಿ ಪರೀಕ್ಷೆ ತೆಗೆದುಕೊಳ್ಳದಿದ್ದಲ್ಲಿ ಪ್ರಸ್ತುತ ಸಾಲಿಗೆ ರೂ.60/-ನ್ನು ಪಾವತಿಸಿ ನವೀಕರಿಸಿಕೊಂಡು ಪರೀಕ್ಷೆಗೆ ಹಾಜರಾಗಬಹುದು. ಈ ವರ್ಗದ ಅಭ್ಯರ್ಥಿಗಳಿಗೆ ಸಿ.ಸಿ.ಇ.ಪಿ.ಎಫ್ **(CCEPF)** ಎಂದು ವರ್ಗೀಕರಿಸಿದೆ. ಖಾಸಗಿ ಅಭ್ಯರ್ಥಿಗಳನ್ನು ಮಂಡಳಿಯು ನಿಗದಿಪಡಿಸುವ ಅಂತಿಮ ದಿನಾಂಕದೊಳಗೆ ನೋಂದಣಿ ಮಾಡಿಕೊಳ್ಳುವುದು. ಖಾಸಗಿ ಅಭ್ಯರ್ಥಿಯಾಗಿ ನೋಂದಣಿ ಮಾಡಿಕೊಂಡ ವಿದ್ಯಾರ್ಥಿಗಳು **ಪ್ರಸ್ತುತ ಸಾಲಿನ ಪಠ್ಯಪುಸ್ತಕಗಳನ್ನು ಅಭ್ಯಾಸ ಮಾಡಿ ಪರೀಕ್ಷೆಗೆ ಹಾಜರಾಗಬೇಕಾಗಿರುತ್ತದೆ.**

ಸರ್ಕಾರದ ಆದೇಶ ಸಂಖ್ಯೆ:ಇಡಿ 355 ಎಸ್‌ಎಲ್‌ಬಿ 2017 ದಿನಾಂಕ:16.09.2019 ರಂತೆ **" ಖಾಸಗಿ ಅಭ್ಯರ್ಥಿಗಳ ನೋಂದಣಿಯನ್ನು ಸರ್ಕಾರಿ ಮತ್ತು ಮಾನ್ಯತೆ ಪಡೆದ ಖಾಸಗಿ ಪ್ರೌಢ ಶಾಲೆಗಳ ಮುಖ್ಯ ಶಿಕ್ಷಕರ ಹಂತದಲ್ಲಿಯೇ ನಿಗದಿತ ನೋಂದಣಿ ಶುಲ್ಕ ಪಡೆದು ನಿಯಮಾನುಸಾರ ದಾಖಲೀಕರಣ ಮಾಡಿ ಮುಖ್ಯೋಪಾಧ್ಯಾಯರೇ ಸೂಕ್ತ ಆದೇಶ ಹೊರಡಿಸುವ ಮೂಲಕ ಶಾಲಾ ಮುಖ್ಯೋಪಾಧ್ಯಾಯರ ಹಂತದಲ್ಲಿಯೇ ನಿರ್ವಹಿಸುವುದು. ನಂತರ ಪರೀಕ್ಷಾ ಶುಲ್ಕ ಪಡೆದು ಮಂಡಳಿಯ ಜಾಲತಾಣದಲ್ಲಿ ಅಭ್ಯರ್ಥಿಗಳ ವಿವರಗಳನ್ನು ಮುಖ್ಯೋಪಾಧ್ಯಾಯರು ನಿಗದಿತ ಸಮಯದೊಳಗೆ ಅಪ್‌ಲೋಡ್ ಮಾಡುವುದು ".**

ಎಸ್.ಎಸ್.ಎಲ್.ಸಿ ಪರೀಕ್ಷೆಗೆ ಖಾಸಗಿ ಅಭ್ಯರ್ಥಿಯಾಗಿ ನೋಂದಣಿ ಮಾಡುವ ಮುನ್ನ ಸಂಬಂಧಿಸಿದ ಶಾಲಾ ಮುಖ್ಯೋಪಾಧ್ಯಾಯರು ದಿನಾಂಕ:16.09.2019ರ ಸರ್ಕಾರದ ಆದೇಶದಂತೆ ಮತ್ತು ಮಂಡಳಿಯ ಕಾಯ್ದೆ 1966ರ ಪ್ರಕಾರ ಕೆಳಕಂಡ ಮಾನದಂಡಗಳನ್ನು ಅನುಸರಿಸುವುದು ಹಾಗೂ ಕೆಳಕಂಡ ದಾಖಲೆಗಳನ್ನು ಪರಿಶೀಲಿಸುವುದು ಕಡ್ಡಾಯವಾಗಿರುತ್ತದೆ.

1) **ಆಯಾ ಶೈಕ್ಷಣಿಕ ಸಾಲಿನ ಮಾರ್ಚ್ 01ನೇ ತಾರೀಖಿಗೆ 15 ವರ್ಷ ವಯೋಮಿತಿ ತುಂಬುವ ವಿದ್ಯಾರ್ಥಿಗಳು ಖಾಸಗಿಯಾಗಿ ಎಸ್.ಎಸ್.ಎಲ್.ಸಿ ಪರೀಕ್ಷೆಗೆ ಹಾಜರಾಗಲು ಅವಕಾಶವಿದೆ. ಅಂತಹ ಅಭ್ಯರ್ಥಿಗಳು ಸರ್ಕಾರಿ / ಸರ್ಕಾರದಿಂದ ಮಾನ್ಯತೆ ಪಡೆದ ಖಾಸಗಿ ಶಾಲೆಗಳಿಗೆ ನೋಂದಣಿಗಾಗಿ ಅರ್ಜಿ ಸಲ್ಲಿಸಬೇಕು. 15 ವರ್ಷ ತುಂಬದ ಅಭ್ಯರ್ಥಿಗಳನ್ನು ನೋಂದಾಯಿಸಿಕೊಂಡಲ್ಲಿ ಪರೀಕ್ಷೆಗೆ ಅವಕಾಶ ನೀಡುವುದಿಲ್ಲ. ಈ ಬಗ್ಗೆ ಎಚ್ಚರವಹಿಸುವುದು.**

2) ವಯೋಮಾನಕ್ಕೆ ಸಂಬಂಧಪಟ್ಟಂತೆ ಜನ್ಮ ದಿನಾಂಕ ಪ್ರಮಾಣ ಪತ್ರದ ದಾಖಲೆಯಾಗಿ ಕೆಳಕಂಡ ಯಾವುದಾದರೂ ಒಂದು ದಾಖಲೆಯನ್ನು ಪಡೆದು ಪರಿಶೀಲಿಸಿ ಖಚಿತಪಡಿಸಿಕೊಳ್ಳುವುದು.

- ಶಾಲಾ ವರ್ಗಾವಣೆ ಪತ್ರ – ರಾಜ್ಯದ ಖಾಸಗಿ ಶಾಲೆಗಳಲ್ಲಿ ವ್ಯಾಸಂಗ ಮಾಡಿದ್ದರೆ ಸದರಿ ಶಾಲೆಯ ವರ್ಗಾವಣೆ ಪತ್ರಕ್ಕೆ ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಮೇಲು ಸಹಿ ಪಡೆದಿರಬೇಕು.
- ರಾಜ್ಯದ ಸರ್ಕಾರಿ ಶಾಲೆಗಳ ವರ್ಗಾವಣೆ ಪ್ರಮಾಣ ಪತ್ರಗಳಿಗೆ ಮೇಲುಸಹಿ ಅವಶ್ಯಕತೆ ಇರುವುದಿಲ್ಲ.
- ಹೊರರಾಜ್ಯದ ವರ್ಗಾವಣೆ ಪತ್ರವಾಗಿದ್ದಲ್ಲಿ ಆ ರಾಜ್ಯದ ಸಂಬಂಧಿಸಿದ ಜಿಲ್ಲಾ / ತಾಲ್ಲೂಕು ವಿದ್ಯಾಧಿಕಾರಿಗಳ ಮೇಲು ಸಹಿಯನ್ನು ಪಡೆದಿರಬೇಕು.
- Baptismal Certificate
- Extract from the birth register



8 8/3/19 [illegible]

- Affidavit sworn before a Judicial Magistrate
- Extract from Service Register if the candidate is a Government Servant

3) ಅಭ್ಯರ್ಥಿಯು ಅಪ್ರಾಪ್ತ (15 ರಿಂದ 18 ವರ್ಷದೊಳಗೆ) ವಯಸ್ಸಿನವರಾಗಿದ್ದಲ್ಲಿ ತಂದೆ/ತಾಯಿ/ಪೋಷಕರ ಒಪ್ಪಿಗೆಯನ್ನು ಲಿಖಿತವಾಗಿ ಪಡೆದುಕೊಳ್ಳುವುದು ಹಾಗೂ ಈ ಅಧಿಸೂಚನೆಯಲ್ಲಿರುವ ಅನುಬಂಧ-7ರಲ್ಲಿಯೂ ಸಹ ಸಹಿ ಪಡೆಯುವುದು ಕಡ್ಡಾಯ.

4) ಖಾಸಗಿ ಅಭ್ಯರ್ಥಿಗಳ ನೋಂದಣಿಗೆ ಸಂಬಂಧಿಸಿದಂತೆ ಅಭ್ಯರ್ಥಿಯು ವಾಸಿಸುತ್ತಿರುವ ಪಟ್ಟಣ / ತಾಲ್ಲೂಕು ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಅಥವಾ ಮಾನ್ಯತೆ ಪಡೆದ ಖಾಸಗಿ ಶಾಲೆಗಳ ಮುಖಾಂತರವೇ ನೋಂದಣಿಗಾಗಿ ಅರ್ಜಿ ಸಲ್ಲಿಸಬೇಕಾಗಿರುತ್ತದೆ. ಈ ಬಗ್ಗೆ ಅಧಿಕೃತ ದಾಖಲೆಯನ್ನು ಪಡೆದು ಪರಿಶೀಲಿಸಿ ಖಚಿತಪಡಿಸಿಕೊಳ್ಳುವುದು. ಉದಾಹರಣೆಗೆ (ಆಧಾರ್‌ಕಾರ್ಡ್/ಚುನಾವಣಾ ಗುರುತಿನ ಚೀಟಿ/ಪಡಿತರಚೀಟಿ)

5) ಎಸ್.ಎಸ್.ಎಲ್.ಸಿ ಪರೀಕ್ಷೆ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆಯಾಗಿರುವವರು ಪುನ: ಖಾಸಗಿಯಾಗಿ ಎಸ್.ಎಸ್.ಎಲ್.ಸಿ ಪರೀಕ್ಷೆಗೆ ಕೂರಲು ಅರ್ಹರಾಗಿರುವುದಿಲ್ಲ. ಒಂದು ಪಕ್ಷ ಈ ಬಗ್ಗೆ ಮುಂದೆ ಮಂಡಳಿಗೆ ಮಾಹಿತಿ ಬಂದಲ್ಲಿ ಅಂತಹ ಅಭ್ಯರ್ಥಿಗಳ ಪ್ರಮಾಣ ಪತ್ರವನ್ನು ರದ್ದುಪಡಿಸುವ ಸಂಪೂರ್ಣ ಅಧಿಕಾರ ಮಂಡಳಿಗೆ ಇದೆ. ಆದ್ದರಿಂದ ಈ ಬಗ್ಗೆ ಕೂಲಂಕುಷವಾಗಿ ಪರಿಶೀಲಿಸಿ ಖಚಿತ ಪಡಿಸಿಕೊಳ್ಳುವುದು.

6) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳಿಗೂ ಸಹ ನೋಂದಣಿ ಶುಲ್ಕ ಕಡ್ಡಾಯ, ಆದರೆ ಪರೀಕ್ಷಾ ಶುಲ್ಕಕ್ಕೆ ವಿನಾಯಿತಿ ಇರುತ್ತದೆ.

7) ವಿಭಿನ್ನ ಸಾಮರ್ಥ್ಯವುಳ್ಳ ವಿದ್ಯಾರ್ಥಿಗಳು ಪರೀಕ್ಷೆಗೋಸ್ಕರ ಇರುವ ವಿನಾಯಿತಿ ಅಥವಾ ಸವಲತ್ತನ್ನು ಪಡೆಯಲು ಸಕ್ಷಮ ಪ್ರಾಧಿಕಾರದಿಂದ ಪಡೆದ ವೈದ್ಯಕೀಯ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಶಾಲೆಗೆ ಸಲ್ಲಿಸಬೇಕು. ಶಾಲಾ ವಿದ್ಯಾರ್ಥಿಗಳಿಗೆ ಇಂತಹ ಸೌಲಭ್ಯ ನೀಡಲು ಪಾಲಿಸುತ್ತಿರುವ ನಿಯಮಗಳನ್ನೇ ಖಾಸಗಿ ವಿದ್ಯಾರ್ಥಿಗಳಿಗೂ ಅನುಸರಿಸುವುದು.

8) **ಖಾಸಗಿ ಅಭ್ಯರ್ಥಿಗಳನ್ನು ನೋಂದಾಯಿಸುವಾಗ ಸದರಿ ಅಭ್ಯರ್ಥಿಯ ಭಾಷಾ ಸಂಯೋಜನೆ ಮತ್ತು ಮಾಧ್ಯಮವನ್ನು ಸರಿಯಾಗಿ ಆಯ್ಕೆ ಮಾಡಲಾಗಿದೆಯೇ ಎಂದು ಪರಿಶೀಲಿಸುವುದು. ಈ ಬಗ್ಗೆ ಮುಖ್ಯ ಶಿಕ್ಷಕರು ಹೆಚ್ಚಿನ ಜಾಗರೂಕತೆ ವಹಿಸತಕ್ಕದ್ದು.**

9) **ಸಂಬಂಧಿಸಿದ ಶಾಲೆಗಳ ಮುಖ್ಯ ಶಿಕ್ಷಕರು ಖಾಸಗಿ ಅಭ್ಯರ್ಥಿಗಳಿಗೆ ಪ್ರತ್ಯೇಕ ದಾಖಲಾತಿ ವಹಿ ಕಡ್ಡಾಯವಾಗಿ ನಿರ್ವಹಿಸುವುದು.**

10) ಸರ್ಕಾರದ ಆದೇಶ ಸಂಖ್ಯೆ:ಇಡಿ 324 ಎಸ್‌ಇಪಿ 91 ದಿನಾಂಕ:21.06.1991ರ ಪ್ರಕಾರ ಖಾಸಗಿ ವಿದ್ಯಾರ್ಥಿಗಳಿಗೂ ಸಂಬಂಧಪಟ್ಟ ಶಾಲಾ ಮುಖ್ಯಸ್ಥರು ಸದರಿ ಅಭ್ಯರ್ಥಿ ಪರೀಕ್ಷೆಯಲ್ಲಿ ಉತ್ತೀರ್ಣರಾದ ನಂತರ ವರ್ಗಾವಣೆ ಪತ್ರವನ್ನು ಶಾಲಾ ವಿದ್ಯಾರ್ಥಿಗಳಿಗೆ ಕೊಟ್ಟ ರೀತಿಯಲ್ಲಿಯೇ ನೀಡಬೇಕು.

11) ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯ ಅಧಿಸೂಚನೆ ಸಂಖ್ಯೆ:ಎ8/ಪ.ಆ.ಪ್ರ/13/2010-11, ದಿನಾಂಕ:18.03.2011 ರನ್ವಯ ಏಪ್ರಿಲ್-2011ರ ಹಾಗೂ ನಂತರ ಪರೀಕ್ಷೆ ತೆಗೆದುಕೊಂಡ ಅಭ್ಯರ್ಥಿಗಳು ಹಾಗೂ ಪುನರಾವರ್ತಿತ ಅಭ್ಯರ್ಥಿಗಳು ಇತರೆ ಅಭ್ಯರ್ಥಿಗಳಂತೆಯೇ ಸತತ 06 ಪರೀಕ್ಷೆಗಳಲ್ಲಿ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಬೇಕು. ಇಲ್ಲವಾದಲ್ಲಿ ನಂತರದ ಪ್ರಯತ್ನದಲ್ಲಿ ಪುನ: ಖಾಸಗಿ ಅಭ್ಯರ್ಥಿಯಾಗಿ ಎಲ್ಲಾ ವಿಷಯಗಳಲ್ಲಿಯೂ ಹೊಸದಾಗಿ ಪರೀಕ್ಷೆ ತೆಗೆದುಕೊಳ್ಳಬೇಕು. ಅಭ್ಯರ್ಥಿಗೆ ಸರ್ಕಾರ ಒದಗಿಸಿರುವ ಸತತ 06 ಪರೀಕ್ಷೆಗಳಲ್ಲಿ ಅಭ್ಯರ್ಥಿಯು ಯಾವುದೇ ಕಾರಣಗಳಿಂದ ಯಾವುದಾದರೂ ಪರೀಕ್ಷೆ ತೆಗೆದುಕೊಳ್ಳದೆ ಇದ್ದಲ್ಲಿ ಆ ಪರೀಕ್ಷೆಯನ್ನು ಕೂಡ ಒಂದು ಪ್ರಯತ್ನ (Attempt) ಎಂದು ಗಣನೆಗೆ ತೆಗೆದುಕೊಳ್ಳಲಾಗುವುದು. ಉದಾಹರಣೆಗೆ ಜೂನ್-2020ರಲ್ಲಿ ಮುಖ್ಯ ಪರೀಕ್ಷೆ ತೆಗೆದುಕೊಂಡ ಅಭ್ಯರ್ಥಿಗಳಿಗೆ ಜೂನ್ 2022ರ ಪೂರಕ ಪರೀಕ್ಷೆಯು 6ನೇ ಪ್ರಯತ್ನವಾಗಿರುತ್ತದೆ.

12) ಖಾಸಗಿ ಅಭ್ಯರ್ಥಿಗಳ ನೋಂದಣಿಗೆ ಈ ಅಧಿಸೂಚನೆಯಲ್ಲಿರುವ ಅನುಬಂಧ-7ರ ನಮೂನೆಯನ್ನು ಉಪಯೋಗಿಸುವುದು. ಹಾಗೂ ಇದನ್ನು ದಾಖಲಾತಿ ವಹಿಯಂತೆ ಶಾಲೆಯಲ್ಲಿ ಖಾಯಂ ಆಗಿ ಸಂರಕ್ಷಿಸಿಡುವುದು.

13) ಖಾಸಗಿ ಅಭ್ಯರ್ಥಿಗಳು ನೋಂದಣಿ ಶುಲ್ಕ, ನವೀಕರಣ ಶುಲ್ಕ ಮತ್ತು ಪರೀಕ್ಷಾ ಶುಲ್ಕವನ್ನು ಶಾಲೆಯ ಮುಖ್ಯ



8 3/7/19

ಶಿಕ್ಷಕರಿಗೆ ಪಾವತಿಸುವುದು.

ಈ ಮೇಲ್ಕಂಡ ಅಂಶಗಳ ಬಗ್ಗೆ ಪರಿಶೀಲಿಸಿ ಖಚಿತಪಡಿಸಿಕೊಂಡು ನೋಂದಣಿ ಮಾಡುವುದು. ನಂತರ ಅಭ್ಯರ್ಥಿಗಳಿಂದ ಪರೀಕ್ಷಾ ಶುಲ್ಕ ಪಡೆದು ಸೂಚಿತ ಜಾಲತಾಣದಲ್ಲಿ ಇತ್ತೀಚಿನ ಭಾವಚಿತ್ರ ಮತ್ತು ಸಹಿಯೊಂದಿಗೆ ಅಭ್ಯರ್ಥಿಯ ಎಲ್ಲಾ ವಿವರಗಳನ್ನು ಅಪ್‌ಲೋಡ್ ಮಾಡುವುದು.

## 4. ಖಾಸಗಿ ಪುನರಾವರ್ತಿತ ಅಭ್ಯರ್ಥಿಗಳು:-

- **CCE** ಪದ್ಧತಿ ಅನುಷ್ಠಾನದ ನಂತರ ಖಾಸಗಿ ಅಭ್ಯರ್ಥಿಯಾಗಿ ಪರೀಕ್ಷೆಗೆ ಕುಳಿತು ಅನುತ್ತೀರ್ಣರಾಗಿದ್ದು, ಪುನಃ ಎಸ್.ಎಸ್.ಎಲ್.ಸಿ. ಪರೀಕ್ಷೆಯನ್ನು ತೆಗೆದುಕೊಳ್ಳುವ ಅರ್ಹ ಖಾಸಗಿ ಅಭ್ಯರ್ಥಿಗಳನ್ನು **CCEPR** ಎಂಬುದಾಗಿ ವರ್ಗೀಕರಿಸಲಾಗಿದೆ.
- 2011ಕ್ಕಿಂತ ಪೂರ್ವದಲ್ಲಿ ಖಾಸಗಿ ಅಭ್ಯರ್ಥಿಯಾಗಿ ಎಸ್.ಎಸ್.ಎಲ್.ಸಿ **ಪರೀಕ್ಷೆಗೆ ಕುಳಿತು ಅನುತ್ತೀರ್ಣರಾಗಿದ್ದು, ಪುನಃ ಎಸ್.ಎಸ್.ಎಲ್.ಸಿ. ಪರೀಕ್ಷೆಯನ್ನು ತೆಗೆದುಕೊಳ್ಳುವ ಅರ್ಹ ಖಾಸಗಿ ಅಭ್ಯರ್ಥಿಗಳನ್ನು NSPR (New Scheme Private Repeaters)** ಎಂಬುದಾಗಿ ವರ್ಗೀಕರಿಸಲಾಗಿದೆ.

**ಈ NSPR (New Scheme Private Repeaters) ಅಭ್ಯರ್ಥಿಗಳನ್ನು ಕೆಳಕಂಡಂತೆ ಎರಡು ಗುಂಪುಗಳಾಗಿ ವಿಂಗಡಿಸಲಾಗಿದೆ.**

1. 2002 ಮತ್ತು ಅದಕ್ಕಿಂತ ಹಿಂದಿನ ವರ್ಷಗಳ ಪರೀಕ್ಷೆಗಳಲ್ಲಿ ಅನುತ್ತೀರ್ಣರಾದ ಅಭ್ಯರ್ಥಿಗಳು.
2. 2003 ರಿಂದ ಜೂನ್ 2010ರವರೆಗೆ ಪರೀಕ್ಷೆಯಲ್ಲಿ ಅನುತ್ತೀರ್ಣರಾಗಿರುವ ಅಭ್ಯರ್ಥಿಗಳು.

**ಏಪ್ರಿಲ್-2011 ಮತ್ತು ನಂತರದ ಅವಧಿಗಳಲ್ಲಿ ಪರೀಕ್ಷೆಗೆ ಕುಳಿತ ಎಲ್ಲಾ ವಿಧದ ವಿದ್ಯಾರ್ಥಿಗಳು ಸತತ 06 ಪ್ರಯತ್ನಗಳಲ್ಲಿ ತೇರ್ಗಡೆಯಾಗಬೇಕು.** ಇಲ್ಲವಾದಲ್ಲಿ, ಖಾಸಗಿ ಅಭ್ಯರ್ಥಿಗಳಾಗಿ ಪುನಃ ಎಲ್ಲಾ 06 ವಿಷಯಗಳಿಗೆ ಪರೀಕ್ಷೆ ಬರೆಯಬೇಕಾಗುತ್ತದೆ. ಇವರುಗಳಿಗೂ ಸಹ ಮೇಲೆ ವಿವರಿಸಿದಂತೆ ಖಾಸಗಿ ಅಭ್ಯರ್ಥಿಗಳಿಗೆ ಅನುಸರಿಸುವ ವಿಧಿವಿಧಾನಗಳನ್ನು ಪಾಲಿಸಬೇಕಾಗುತ್ತದೆ.

**ವಿಶೇಷ ಸೂಚನೆ:-** ಸರ್ಕಾರದ ಆದೇಶ ಸಂಖ್ಯೆ:ಇಪಿ 177 ಎಸ್‌ಎಲ್‌ಬಿ 2021 ದಿನಾಂಕ:06.12.2021ರನ್ವಯ 2011ಕ್ಕೂ ಹಿಂದಿನ ವರ್ಷಗಳಲ್ಲಿ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಅನುತ್ತೀರ್ಣರಾದ ಎಲ್ಲಾ ವಿಧದ ಪುನರಾವರ್ತಿತ (NSR & NSPR) ಅಭ್ಯರ್ಥಿಗಳು ಅನುತ್ತೀರ್ಣವಾಗಿ ಬಾಕಿ ಇರುವ ವಿಷಯಗಳಿಗೆ 2022ರ ವರ್ಷದ ಮುಖ್ಯ ಪರೀಕ್ಷೆಯಿಂದ ಸತತ ಆರು ಪ್ರಯತ್ನಗಳ ಅವಕಾಶ ನೀಡಿ 2024ರ ಪೂರಕ ಪರೀಕ್ಷೆವರೆಗೆ ಪರೀಕ್ಷೆ ತೆಗೆದುಕೊಂಡು ಉತ್ತೀರ್ಣರಾಗಲು ಅವಕಾಶ ಕಲ್ಪಿಸಲಾಗಿದೆ. ಈ ಅವಕಾಶದ ನಂತರವೂ ಅನುತ್ತೀರ್ಣರಾಗುವ ಅಭ್ಯರ್ಥಿಗಳು 2025ರ ಎಸ್.ಎಸ್.ಎಲ್.ಸಿ ಮುಖ್ಯ ಪರೀಕ್ಷೆಯಿಂದ ನಿಯಮಾನುಸಾರ ಹೊಸದಾಗಿ ಖಾಸಗಿ ಅಭ್ಯರ್ಥಿಯಾಗಿ ನೋಂದಾಯಿಸಿಕೊಂಡು ಎಲ್ಲಾ ವಿಷಯಗಳ ಪರೀಕ್ಷೆಯನ್ನು ತೆಗೆದುಕೊಳ್ಳತಕ್ಕದ್ದು.

## III. ಅರ್ಜಿಗಳ ಸ್ವರೂಪ:-

ಶಾಲಾ ವಿದ್ಯಾರ್ಥಿಗಳ (CCERF), ಖಾಸಗಿ ಅಭ್ಯರ್ಥಿಗಳ (CCEPF), ಪುನರಾವರ್ತಿತ ಅಭ್ಯರ್ಥಿಗಳ (CCERR, CCEPR) (2003 ರಿಂದ ಜೂನ್ 2010ರವರೆಗೆ ಪರೀಕ್ಷೆಯಲ್ಲಿ ಅನುತ್ತೀರ್ಣರಾಗಿರುವ NSR ಮತ್ತು NSPR ಅಭ್ಯರ್ಥಿಗಳು) ಪರೀಕ್ಷಾ ಅರ್ಜಿಗಳನ್ನು ಮಂಡಳಿಯ ಜಾಲತಾಣದಲ್ಲಿ ಶಾಲಾ ಲಾಗಿನ್ ಮೂಲಕ ಸಲ್ಲಿಸುವುದು. ಇದೇ ಸಮಯದಲ್ಲಿ ವಿದ್ಯಾರ್ಥಿಗಳ ಭಾವಚಿತ್ರ 60 ರಿಂದ 80 kb ಹಾಗೂ ಸಹಿಯನ್ನು 40 ರಿಂದ 50 kb JPEG ನಮೂನೆಯಲ್ಲಿ ಅಪ್‌ಲೋಡ್ ಮಾಡುವುದು ಕಡ್ಡಾಯ.

ಎಂ.ಎಸ್.ಎ. ಅರ್ಜಿಗಳು:-

2002 ಮತ್ತು ಅದಕ್ಕಿಂತ ಹಿಂದಿನ ವರ್ಷಗಳಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅನುತ್ತೀರ್ಣರಾದ NSR ಮತ್ತು NSPR ಪುನರಾವರ್ತಿತ ಅಭ್ಯರ್ಥಿಗಳ ವಿವರಗಳನ್ನು ಶಾಲೆಯಲ್ಲಿ ಲಭ್ಯವಿರುವ ಎಂಎಸ್‌ಎ ಹಾಗೂ ಶಾಲೆಯಲ್ಲಿ ಲಭ್ಯವಿಲ್ಲದಿದ್ದಲ್ಲಿ ಸಂಬಂಧಿಸಿದ ವಿಭಾಗೀಯ ಕಛೇರಿಯಿಂದ ದ್ವಿತೀಯ ಪ್ರತಿ ಎಂಎಸ್‌ಎಯನ್ನು ಪಡೆದು ಅದರಲ್ಲಿರುವಂತೆ ಮಾಹಿತಿಯನ್ನು ಭರ್ತಿಮಾಡಿ ಮಂಡಳಿಗೆ ಭೌತಿಕವಾಗಿ ರವಾನಿಸುವುದು ಕಡ್ಡಾಯವಾಗಿರುತ್ತದೆ. ಈ ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕವನ್ನು ಹಳೆಯ ಪದ್ಧತಿಯಂತೆ ಮಂಡಳಿಯ ನೆಫ್ಟ್ ಚಲನ್ ಮೂಲಕ ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಪಾವತಿ, ಮೂಲ ಚಲನ್‌ನ್ನು ಎಂ.ಎಸ್.ಎ ನೊಂದಿಗೆ ಮಂಡಳಿಗೆ ಸಲ್ಲಿಸುವುದು.

## IV. ಪರೀಕ್ಷಾ ಶುಲ್ಕ:-

ಸರ್ಕಾರದ ಆದೇಶ ಸಂಖ್ಯೆ:ಇಪಿ 189 ಎಸ್‌ಎಲ್‌ಬಿ 2021 ದಿನಾಂಕ:30.11.2021 ರನ್ವಯ ಮಾರ್ಚ್/ಏಪ್ರಿಲ್-2023ರ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ನಿಗದಿಪಡಿಸಿದ ಪರೀಕ್ಷಾ ಶುಲ್ಕದ ವಿವರಗಳು ಈ ಕೆಳಕಂಡಂತಿರುತ್ತದೆ.

**ಪ್ರಥಮ ಬಾರಿಗೆ ಪರೀಕ್ಷೆಗೆ ಹಾಜರಾಗುವ ಶಾಲಾ ಅಭ್ಯರ್ಥಿಗಳಿಗೆ (CCERF) ನಿಗದಿಪಡಿಸಿದ ಶುಲ್ಕ**

| ಕ್ರ.ಸಂ. | ವಿದ್ಯಾರ್ಥಿಗಳ ವಿವರ | ಶುಲ್ಕ ರೂ. ಗಳಲ್ಲಿ |
|---|---|---|
| 1 | ಪ್ರಥಮ ಬಾರಿಗೆ ಪರೀಕ್ಷೆಗೆ ಹಾಜರಾಗುವ ಶಾಲಾ ಅಭ್ಯರ್ಥಿಗಳ (CCERF) ಪರೀಕ್ಷಾ ಶುಲ್ಕ | ಪರೀಕ್ಷಾ ಶುಲ್ಕ ರೂ.585=00<br>ಲ್ಯಾಮಿನೇಷನ್ ಶುಲ್ಕ ರೂ. 22=00<br>ಒಟ್ಟು **ರೂ.607=00** |

**ಪ್ರಥಮ ಬಾರಿಗೆ ಪರೀಕ್ಷೆಗೆ ಹಾಜರಾಗುವ ಖಾಸಗಿ ಅಭ್ಯರ್ಥಿಗಳು (CCEPF)**

| ಕ್ರ.ಸಂ | ವಿದ್ಯಾರ್ಥಿಗಳ ವಿವರ | ಶುಲ್ಕದ ವಿವರ |
|---|---|---|
| 1 | ಹೊಸದಾಗಿ ನೋಂದಣಿಯಾಗುವ ಖಾಸಗಿ ಅಭ್ಯರ್ಥಿಗಳ ನೋಂದಣಿ ಶುಲ್ಕ ಹಾಗೂ ಅರ್ಜಿ ಶುಲ್ಕ | ರೂ.205/-<br>(ಪ್ರತಿ ವಿದ್ಯಾರ್ಥಿಗೆ) |
| 2 | ಈಗಾಗಲೇ ಖಾಸಗಿ ಅಭ್ಯರ್ಥಿಯಾಗಿ ನೋಂದಣಿಯಾಗಿ ಪರೀಕ್ಷಾ ಶುಲ್ಕ ಪಾವತಿಸದ ಅಭ್ಯರ್ಥಿಗಳ ನೋಂದಣಿ ನವೀಕರಣ ಶುಲ್ಕ | ರೂ.60/- ಪ್ರತಿ ವಿದ್ಯಾರ್ಥಿಗೆ |
| 3 | ಪ್ರಥಮ ಬಾರಿಗೆ ಪರೀಕ್ಷೆಗೆ ಹಾಜರಾಗುವ ಖಾಸಗಿ ಅಭ್ಯರ್ಥಿಗಳ (CCEPF) ಪರೀಕ್ಷಾ ಶುಲ್ಕ | ಪರೀಕ್ಷಾ ಶುಲ್ಕ ರೂ.585=00<br>ಲ್ಯಾಮಿನೇಷನ್ ಶುಲ್ಕ ರೂ. 22=00<br>**ಪ್ರತಿ ವಿದ್ಯಾರ್ಥಿಗೆ ಒಟ್ಟು ರೂ.607=00** |

## ಎಲ್ಲಾ ವಿಧದ ಪುನರಾವರ್ತಿತ ಅಭ್ಯರ್ಥಿಗಳು (CCERR+NSR+CCEPR+NSPR)

| ಕ್ರಸಂ. | ವಿದ್ಯಾರ್ಥಿಗಳ ವಿವರ | ಶುಲ್ಕದ ವಿವರ |
|---|---|---|
| 1 | ಎಲ್ಲಾ ವಿಧದ ಪುನರಾವರ್ತಿತ ಅಭ್ಯರ್ಥಿಗಳ (CCERR+NSR+CCEPR+NSPR) ಪರೀಕ್ಷಾ ಶುಲ್ಕ<br>1. ಒಂದು ವಿಷಯಕ್ಕೆ<br>2. ಎರಡು ವಿಷಯಕ್ಕೆ<br>3. ಮೂರು ಹಾಗೂ ಮೂರಕ್ಕಿಂತ ಹೆಚ್ಚಿನ ವಿಷಯಗಳಿಗೆ | ಪ್ರತಿ ವಿದ್ಯಾರ್ಥಿಗೆ<br>ರೂ. 370=00<br>ರೂ. 461=00<br>ರೂ. 620=00 |

- ಪ್ರಥಮ ಬಾರಿಗೆ ಪರೀಕ್ಷೆಗೆ ಕುಳಿತುಕೊಳ್ಳುವ ಎಲ್ಲಾ ವರ್ಗದ ವಿದ್ಯಾರ್ಥಿಗಳು ಅಂಕಪಟ್ಟಿಯ ಲ್ಯಾಮಿನೇಷನ್ ಶುಲ್ಕ ರೂ.22/- (ರೂ. ಇಪ್ಪತ್ತೆರಡು ಮಾತ್ರ) ಗಳನ್ನು ಕಡ್ಡಾಯವಾಗಿ ಪಾವತಿಸಬೇಕು. **ಯಾವುದೇ ವಿದ್ಯಾರ್ಥಿಗೂ ಲ್ಯಾಮಿನೇಷನ್ ಶುಲ್ಕ ಪಾವತಿಯಿಂದ ವಿನಾಯಿತಿ ಇರುವುದಿಲ್ಲ.**
- ಪುನರಾವರ್ತಿತ ವಿದ್ಯಾರ್ಥಿಗಳು ಪುನ: ಲ್ಯಾಮಿನೇಷನ್ ಶುಲ್ಕ ಪಾವತಿಸುವ ಅಗತ್ಯವಿಲ್ಲ.
- **ಶಾಲಾ ಮುಖ್ಯೋಪಾಧ್ಯಾಯರು ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕವನ್ನು ಮಂಡಳಿಗೆ ಪಾವತಿಸುವ ಸಂದರ್ಭದಲ್ಲಿ, ಮಂಡಳಿಯ ಜಾಲತಾಣದಲ್ಲಿ ವಿದ್ಯಾರ್ಥಿಗಳ ಮಾಹಿತಿ ನೋಂದಣಿ ಮಾಡುವ ಹಾಗೂ ಪ್ರವೇಶ ಪತ್ರಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ಪ್ರಕ್ರಿಯೆಗೆ ಸಂಬಂಧಿಸಿದ ವೆಚ್ಚವನ್ನು ಪ್ರತಿ ವಿದ್ಯಾರ್ಥಿಗೆ ರೂ.25/- ರಂತೆ (ಶುಲ್ಕ ವಿನಾಯಿತಿ ಪಡೆದ ವಿದ್ಯಾರ್ಥಿಗಳು ಸೇರಿದಂತೆ) ಕಟಾಯಿಸಿಕೊಂಡು ಉಳಿದ ಮೊತ್ತವನ್ನು ಪಾವತಿಸುವುದು. ಈ ಪ್ರಕಾರವೇ ಚಲನ್ ಜನರೇಟ್ ಮಾಡಲಾಗುವುದು.**
- CCERF, CCEPF, CCERR, CCEPR, NSR ಮತ್ತು NSPR ಅಭ್ಯರ್ಥಿಗಳ ಪರೀಕ್ಷಾ ನೋಂದಣಿಯನ್ನು ಮಂಡಳಿ ಜಾಲತಾಣದ ಶಾಲಾಲಾಗಿನ್ ಮೂಲಕವೇ ಅಪ್‌ಲೋಡ್ ಮಾಡಬೇಕು. ನಿಗದಿಪಡಿಸಿದ ಅವಧಿಯೊಳಗೆ ನೋಂದಣಿ ಪ್ರಕ್ರಿಯೆ ಪೂರ್ಣಗೊಂಡ ನಂತರ ಶಾಲಾವಾರು ಪರೀಕ್ಷಾ ಶುಲ್ಕ ಪಾವತಿಗೆ ಸಂಬಂಧಪಟ್ಟಂತೆ ಆನ್‌ಲೈನ್‌ನಲ್ಲಿ ಚಲನ್ ಜನರೇಟ್ ಮಾಡುವ ವ್ಯವಸ್ಥೆಯನ್ನು ಮಾಡಲಾಗಿದೆ. ಸದರಿ ಚಲನ್ ಡೌನ್‌ಲೋಡ್ ಮಾಡಿಕೊಂಡು ಅದರಲ್ಲಿ ನಮೂದಿಸಿರುವ ಮೊತ್ತವನ್ನು ಅದೇ ಚಲನ್ ಬಳಸಿ ಶುಲ್ಕವನ್ನು ಬ್ಯಾಂಕಿನಲ್ಲಿ ಪಾವತಿಸುವುದು.

## V. ಪರೀಕ್ಷಾ ಶುಲ್ಕ ವಿನಾಯಿತಿ:

1. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಪರೀಕ್ಷಾ ಶುಲ್ಕದಿಂದ ವಿನಾಯಿತಿ ನೀಡಿದೆ. ಈ ವಿದ್ಯಾರ್ಥಿಗಳ ಜಾತಿ ಪ್ರಮಾಣ ಪತ್ರಗಳನ್ನು ಮಂಡಳಿಗೆ ಕಳುಹಿಸುವ ಅಗತ್ಯವಿರುವುದಿಲ್ಲ.
2. ಹಿಂದುಳಿದ ವರ್ಗಗಳ ಇಲಾಖೆಯ ಸರ್ಕಾರಿ ಆದೇಶದ ಸಂಖ್ಯೆ: ಬಿ.ಸಿ.ಡಬ್ಲ್ಯೂ 07 ಬಿ.ಎಂ. ಎಸ್–2015 ಬೆಂಗಳೂರು ದಿನಾಂಕ:24.01.2015ರ ಅನ್ವಯ ಮೊದಲ ಬಾರಿಗೆ ಎಸ್.ಎಸ್.ಎಲ್.ಸಿ ಪರೀಕ್ಷೆಗೆ ಕುಳಿತುಕೊಳ್ಳುವ (FRESHERS ONLY) ವಿವಿಧ ಪ್ರವರ್ಗಗಳ ವ್ಯಾಪ್ತಿಯಲ್ಲಿ ಬರುವ ವಿದ್ಯಾರ್ಥಿಗಳಿಗೆ ಪರೀಕ್ಷಾ ಶುಲ್ಕದ ವಿನಾಯಿತಿ ಇರುತ್ತದೆ. ಈ ಸೌಲಭ್ಯ ಪಡೆಯಲು ಬಯಸುವ ಪ್ರವರ್ಗ–1, ಪ್ರವರ್ಗ–2ಎ, ಪ್ರವರ್ಗ–2ಬಿ, ಪ್ರವರ್ಗ–3ಎ ಹಾಗೂ ಪ್ರವರ್ಗ–3ಬಿ ವ್ಯಾಪ್ತಿಯಲ್ಲಿ ಬರುವ ವಿದ್ಯಾರ್ಥಿಗಳ/ ಪೋಷಕರ ವಾರ್ಷಿಕ ಆದಾಯ ಮಿತಿ ಕೆಳಕಾಣಿಸಿದಂತೆ ನಿಗದಿಗೊಳಿಸಿದೆ (ಹೆಚ್ಚಿನ ವಿವರಗಳಿಗೆ ಸಂಬಂಧಿಸಿದ ಹಿಂದುಳಿದ ವರ್ಗಗಳ ಕಚೇರಿಯನ್ನು ಸಂಪರ್ಕಿಸತಕ್ಕದ್ದು).

| **ನಿಗದಿಪಡಿಸಿರುವ ವಾರ್ಷಿಕ ಆದಾಯ ಮಿತಿ** | |
|---|---|
| **ಪ್ರವರ್ಗ–1 ರಲ್ಲಿ ಬರುವ ವಿದ್ಯಾರ್ಥಿಗಳಿಗೆ** | **ಪ್ರವರ್ಗ–2ಎ, 2ಬಿ, 3ಎ ಮತ್ತು 3ಬಿ ಗಳಿಗೆ** |
| ರೂ. 1.00 ಲಕ್ಷ<br>(ಒಂದು ಲಕ್ಷ ರೂಪಾಯಿಗಳು ಮಾತ್ರ) | ರೂ.44,500/–<br>(ನಲವತ್ತಾಲ್ಕು ಸಾವಿರದ ಐದು ನೂರು ರೂಪಾಯಿಗಳು ಮಾತ್ರ) |

ಪ್ರವರ್ಗ ಗುಂಪಿನಲ್ಲಿ ಬರುವ ವಿದ್ಯಾರ್ಥಿಗಳು ಪರೀಕ್ಷಾ ಶುಲ್ಕ ವಿನಾಯಿತಿ ಪಡೆಯಲು ಸಕ್ಷಮ ಪ್ರಾಧಿಕಾರದಿಂದ ಪಡೆದ **ಜಾತಿ ಮತ್ತು ಆದಾಯ ಪ್ರಮಾಣ ಪತ್ರ**ಗಳ ಆರ್.ಡಿ ಸಂಖ್ಯೆಯನ್ನು ಮಂಡಳಿ ಜಾಲತಾಣದ ಶಾಲಾ ಲಾಗಿನ್ ಮೂಲಕ ಕೆಳಕಂಡ ಮಾದರಿಯಲ್ಲಿ ನಮೂದಿಸುವುದು ಕಡ್ಡಾಯವಾಗಿರುತ್ತದೆ. ಈ ಪ್ರಮಾಣಪತ್ರಗಳನ್ನು ಶಾಲೆಯಲ್ಲಿ ಸಂರಕ್ಷಿಸಿಡಲು ತಿಳಿಸಿದೆ. ಆದ್ದರಿಂದ ಶಾಲೆಯ ಮುಖ್ಯ ಶಿಕ್ಷಕರು ಪರೀಕ್ಷಾ ಶುಲ್ಕದ ವಿನಾಯಿತಿಯನ್ನು ದೃಢೀಕರಿಸುವ ಸಂದರ್ಭದಲ್ಲಿಯೇ ವಿದ್ಯಾರ್ಥಿಗಳಿಂದ/ ಪೋಷಕರಿಂದ ಈ ಪ್ರಮಾಣ ಪತ್ರಗಳನ್ನು ಪಡೆಯತಕ್ಕದ್ದು, **ಈ ಪ್ರಮಾಣ ಪತ್ರಗಳನ್ನು ಪಡೆಯದೇ ಶುಲ್ಕ ವಿನಾಯಿತಿ ನೀಡುವಂತಿಲ್ಲ**. ಜಾತಿ ಮತ್ತು ಆದಾಯ ಪ್ರಮಾಣಪತ್ರ ಸಲ್ಲಿಸಲು ಸಾಧ್ಯವಾಗದೇ ಇರುವ ಸಂದರ್ಭಗಳಲ್ಲಿ, ಅಂತಹ ವಿದ್ಯಾರ್ಥಿಗಳ ಪೂರ್ಣ ಪರೀಕ್ಷಾ ಶುಲ್ಕವನ್ನು ಮಂಡಳಿಗೆ ಪಾವತಿಸಬೇಕಾಗುತ್ತದೆ. ಈ ಅಂಶವನ್ನು ಎಲ್ಲಾ ಮುಖ್ಯ ಶಿಕ್ಷಕರು ತಪ್ಪದೇ ಪಾಲಿಸತಕ್ಕದ್ದು ಹಾಗೂ ಈ ಬಗ್ಗೆ ಅನಗತ್ಯವಾಗಿ ಮಂಡಳಿಗೆ ಪತ್ರ ವ್ಯವಹಾರ ಮಾಡತಕ್ಕದ್ದಲ್ಲ.

**ಮಾದರಿ :–**

| | | | | | | | | | | | | | | |
|---|---|---|---|---|---|---|---|---|---|---|---|---|---|---|
| R | D | 1 | 0 | 3 | 8 | 8 | 5 | 5 | 0 | 7 | 9 | 2 | 9 | 8 |

3. ಸರ್ಕಾರಿ ಆದೇಶ ಸಂಖ್ಯೆ:ಇಡಿ.119.ಯೋಯೋಕಾ ದಿನಾಂಕ:16.07.2001ರ ಅನ್ವಯ ಸರ್ಕಾರಿ ಪ್ರೌಢ ಶಾಲೆ/ ಸರ್ಕಾರಿ ಪದವಿ ಪೂರ್ವ ಕಾಲೇಜು (ಪ್ರೌಢಶಾಲಾ ವಿಭಾಗ)ಗಳಲ್ಲಿ ಶಾಲಾ ವಿದ್ಯಾರ್ಥಿಗಳಾಗಿ ಪ್ರಥಮ ಬಾರಿಗೆ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಹಾಜರಾಗುವ ಎಲ್ಲಾ ವರ್ಗದ ಹೆಣ್ಣುಮಕ್ಕಳಿಗೆ ಪರೀಕ್ಷಾ ಶುಲ್ಕದಿಂದ ವಿನಾಯಿತಿ ನೀಡಿದೆ.
4. ಸರ್ಕಾರದ ಆದೇಶ ಸಂಖ್ಯೆ:ಇಪಿ 62 ಎಸ್‌ಎಲ್‌ಬಿ 2021 ದಿನಾಂಕ:15.03.2021ರಂತೆ ವಿಭಿನ್ನ ಸಾಮರ್ಥ್ಯವುಳ್ಳ (Differently Abled) ಶಾಲಾ ಅಭ್ಯರ್ಥಿ/ ಖಾಸಗಿ ಅಭ್ಯರ್ಥಿಗಳಿಗೆ ಮುಖ್ಯ ಹಾಗೂ ಪೂರಕ ಪರೀಕ್ಷಾ ಶುಲ್ಕದಿಂದ ವಿನಾಯಿತಿ ನೀಡಲಾಗಿದೆ. ಈ ಸೌಲಭ್ಯ ಪಡೆಯಲು ಸಕ್ಷಮ ಪ್ರಾಧಿಕಾರದಿಂದ ವೈದ್ಯಕೀಯ ಪ್ರಮಾಣ ಪತ್ರ ಪಡೆದು ಶಾಲಾ ಮುಖ್ಯಸ್ಥರಿಗೆ ಹಾಜರುಪಡಿಸಬೇಕು. ಸರ್ಕಾರದ ಆದೇಶಗಳಲ್ಲಿ ನಮೂದಿಸಿರುವ ಸೌಲಭ್ಯಗಳನ್ನು ಈ ವಿದ್ಯಾರ್ಥಿಗಳಿಗೆ ಒದಗಿಸಲು ತಿಳಿಸಿದೆ.
5. **ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಪುನರಾವರ್ತಿತ ಅಭ್ಯರ್ಥಿಗಳಿಗೆ ಮಾತ್ರ ಶುಲ್ಕ ವಿನಾಯಿತಿ ಇರುತ್ತದೆ.**
6. ಮೇಲೆ ವಿವರಿಸಿರುವ ಹಿಂದುಳಿದ ಪ್ರವರ್ಗಗಳ ಪುನರಾವರ್ತಿತ ಅಭ್ಯರ್ಥಿಗಳಿಗೆ (REPEATERS) ಪರೀಕ್ಷಾ ಶುಲ್ಕದ ವಿನಾಯಿತಿ ಇರುವುದಿಲ್ಲ.

## VI. ಪರೀಕ್ಷಾ ಶುಲ್ಕವನ್ನು ಪಾವತಿಸುವ ಸ್ವರೂಪ:-

- 2023ರ ಮಾರ್ಚ್/ಏಪ್ರಿಲ್ ಮಾಹೆಯ ಎಸ್.ಎಸ್.ಎಲ್.ಸಿ ಪರೀಕ್ಷೆಯ ಎಲ್ಲಾ (CCERF, CCEPF, CCERR, CCEPR, NSR & NSPR) ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕ, ಲ್ಯಾಮಿನೇಷನ್ ಶುಲ್ಕ ಮತ್ತು CCEPF ವಿದ್ಯಾರ್ಥಿಗಳ ನೋಂದಣಿ ಶುಲ್ಕವನ್ನು ಒಳಗೊಂಡಂತೆ ನೋಂದಣಿಯ ಕಡೆಯ ದಿನಾಂಕದ ನಂತರ ಶಾಲಾಲಾಗಿನ್‌ನಲ್ಲಿ ಸೃಜಿಸಲಾಗುವ ಚಲನ್ ಬಳಸಿಕೊಂಡು ಪಾವತಿ ಮಾಡಬೇಕಾಗಿರುತ್ತದೆ.
- 2002 ಮತ್ತು ಅದಕ್ಕೂ ಹಿಂದಿನ ವರ್ಷಗಳಲ್ಲಿ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಅನುತ್ತೀರ್ಣರಾದ NSR ಮತ್ತು NSPR ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕವನ್ನು ಹಳೆಯ ಪದ್ಧತಿಯಂತೆ ಮಂಡಳಿಯ ನೆಫ್ಟ್ ಚಲನ್ ಮೂಲಕ ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಪಾವತಿಸುವುದು. ಇದರ ಹೊರತಾಗಿ ಪಾವತಿಸುವ ಬ್ಯಾಂಕ್ ಹುಂಡಿಗಳು ಮತ್ತು ನೆಫ್ಟ್ ಚಲನ್‌ಗಳನ್ನು ತಿರಸ್ಕರಿಸಲಾಗುವುದು.

## VII. ರಾಜ್ಯ ಪಠ್ಯಕ್ರಮಕ್ಕೆ ವಲಸೆ ಬರುವ ವಿದ್ಯಾರ್ಥಿಗಳ ನೋಂದಣಿ:

ಕೇಂದ್ರ ಪಠ್ಯಕ್ರಮ ಸಿ.ಬಿ.ಎಸ್.ಇ, ಐ.ಸಿ.ಎಸ್.ಇ ಹಾಗೂ ಹೊರ ರಾಜ್ಯ ಪಠ್ಯಕ್ರಮಗಳಿಂದ ರಾಜ್ಯ ಪಠ್ಯಕ್ರಮಕ್ಕೆ ವಲಸೆ ಬರುವ ಅರ್ಹ ವಿದ್ಯಾರ್ಥಿಗಳು ಸಂಬಂಧಿಸಿದ ಜಿಲ್ಲಾ ಉಪ ನಿರ್ದೇಶಕರು (ಆಡಳಿತ)ರವರಿಗೆ ರೂ.1,000+ರೂ.10=ಒಟ್ಟು ರೂ.1010/-ಗಳ ನೋಂದಣಿ ಶುಲ್ಕ ಮಂಡಳಿಯ ನಿಗದಿತ ಚಲನ್ ಮೂಲಕ ಸಲ್ಲಿಸಿ ರಾಜ್ಯ ಪಠ್ಯಕ್ರಮಕ್ಕೆ ನಿಯಮಾನುಸಾರ ನೋಂದಾಯಿಸಿಕೊಳ್ಳುವುದು ಕಡ್ಡಾಯವಾಗಿರುತ್ತದೆ. ರಾಜ್ಯ ಪಠ್ಯಕ್ರಮದಲ್ಲಿ ಅಭ್ಯಾಸ ಮಾಡಲು ಜಿಲ್ಲಾ ಉಪನಿರ್ದೇಶಕರ ಪೂರ್ವಾನುಮತಿ ಪಡೆಯುವುದು ಕಡ್ಡಾಯ. ಈ ಆದೇಶದ ಪ್ರತಿಯನ್ನು ಕಡ್ಡಾಯವಾಗಿ ಸಲ್ಲಿಸುವುದು. ವಲಸೆ ಬಂದ ವಿದ್ಯಾರ್ಥಿಗಳ ಮಾಹಿತಿಯನ್ನು ಈ ಅಧಿಸೂಚನೆಯಲ್ಲಿರುವ ಅನುಬಂಧ-6ರಲ್ಲಿ ಸಲ್ಲಿಸುವುದು.

**ರಾಜ್ಯ ಪಠ್ಯಕ್ರಮಕ್ಕೆ ವಲಸೆ ಬಂದ ವಿದ್ಯಾರ್ಥಿಗಳು ನೋಂದಣಿ ಶುಲ್ಕಗಳನ್ನು ಮಂಡಳಿಯ NEFT ಚಲನ್ ಮೂಲಕ ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ಪಾವತಿಸುವಂತೆ ಕ್ರಮವಹಿಸಬೇಕು.**

**ಮಂಡಳಿ NEFT ಚಲನ್ ಮುಖೇನ ಪಾವತಿ ಮಾಡುವ ವಿವರ :**

| ಕ್ರಮ ಸಂಖ್ಯೆ | ವಿವರಗಳು | ಉದ್ದೇಶಿತ ಕೋಡ್ |
|---|---|---|
| 1 | ರಾಜ್ಯ ಪಠ್ಯಕ್ರಮ ಬದಲಾವಣೆಯ ನೋಂದಣಿ ಶುಲ್ಕ | S-15 |

ಸದರಿ ಶುಲ್ಕವನ್ನು ಹಳೆಯ ಪದ್ಧತಿಯಂತೆ ಮಂಡಳಿಯ ನೆಫ್ಟ್ ಚಲನ್ ಮೂಲಕ ಬ್ಯಾಂಕ್‌ಗೆ ದಿನಾಂಕ:12.10.2022 ರೊಳಗೆ ಪಾವತಿಸುವುದು.

ಶಾಲಾ ಸಂಕೇತದೊಂದಿಗೆ ಉದ್ದೇಶದ ಕೋಡ್ ಬಳಸಿ ಮಂಡಳಿ **NEFT ಚಲನ್ ಭರ್ತಿ** ಮಾಡಿ ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ಪಾವತಿಸಬೇಕು. ನೋಂದಣಿ ಶುಲ್ಕ ಪಾವತಿಸಿದ ಬಗ್ಗೆ ಚಲನ್‌ನಲ್ಲಿ ಬ್ಯಾಂಕಿನ ಮೊಹರು ಮತ್ತು ಟಿ.ಎಸ್.ಎಲ್. ಅಥವಾ ಯು.ಟಿ.ಆರ್ (TSL or UTR) ಸಂಖ್ಯೆ ಇರುವುದನ್ನು ಖಾತ್ರಿ ಪಡಿಸಿಕೊಳ್ಳುವುದು.

ನೋಂದಣಿ ಶುಲ್ಕ ಪಾವತಿಸಿದ ಮೂಲ ಚಲನ್ ಪ್ರತಿಗಳನ್ನು ಲಗತ್ತಿಸಿ, ಪೂರ್ಣ ವಿವರಗಳೊಂದಿಗೆ ಕ್ರೋಢೀಕೃತ ವರದಿಯನ್ನು ಮೇಲೆ ನಿಗದಿಪಡಿಸಿದ ಅಂತಿಮ ದಿನಾಂಕದ ನಂತರ ಒಂದು ವಾರದೊಳಗೆ ಸಂಬಂಧಿಸಿದ ಎಲ್ಲಾ ಉಪನಿರ್ದೇಶಕರು (ಆಡಳಿತ)ರವರು ಮಂಡಳಿಯ ಅಯಾ ಪರಿಶೀಲನಾ ಶಾಖೆಗೆ ಸಲ್ಲಿಸಬೇಕು.

## VIII. ವಿದ್ಯಾರ್ಥಿಗಳ ವಿವರಗಳನ್ನು ಆನ್‌ಲೈನ್ ಮುಖಾಂತರ ನೋಂದಾಯಿಸಲು ಮತ್ತು ಪರೀಕ್ಷಾ ಶುಲ್ಕ ಪಾವತಿಸುವ ಕುರಿತು.

ಮಂಡಳಿ ಜಾಲತಾಣದ ಶಾಲಾಲಾಗಿನ್ ಮೂಲಕ CCERF, CCEPF, CCERR, CCEPR, NSR ಮತ್ತು NSPR ವಿದ್ಯಾರ್ಥಿಗಳ ಮಾಹಿತಿಯನ್ನು ಅಪ್‌ಲೋಡ್ ಮಾಡುವ ಮುನ್ನ ಈ ಕೆಳಕಂಡ ಪೂರ್ವ ಸಿದ್ಧತೆಗಳನ್ನು ಮಾಡಿಕೊಳ್ಳತಕ್ಕದ್ದು.

- ಶಾಲಾ ಸಂಕೇತ ಪಡೆಯದ ಶಾಲೆಗಳು ಮಂಡಳಿಯು ನಿಗಧಿಪಡಿಸಿದ ದಿನಾಂಕದೊಳಗೆ ಕಡ್ಡಾಯವಾಗಿ ಶಾಲಾ ಸಂಕೇತ ಪಡೆಯುವುದು.
- 2022-23ನೇ ಸಾಲಿನ ಮಾನ್ಯತೆ ನವೀಕರಣವನ್ನು ಸಕ್ಷಮ ಪ್ರಾಧಿಕಾರದಿಂದ ಸಕಾಲದಲ್ಲಿ ಪಡೆಯುವುದು.
- ಶಾಲೆಯ ಹೆಸರು ಮತ್ತು ವಿಳಾಸ ಬದಲಾವಣೆಯಿದ್ದಲ್ಲಿ ಸೂಕ್ತ ದಾಖಲೆಗಳೊಂದಿಗೆ ನಿಗಧಿಪಡಿಸಿದ ದಿನಾಂಕದೊಳಗೆ ಕೂಡಲೇ ಮಂಡಳಿಗೆ ಪ್ರಸ್ತಾವನೆ ಸಲ್ಲಿಸುವುದು.
- ಕೇಂದ್ರ ಪಠ್ಯಕ್ರಮ ಸಿ.ಬಿ.ಎಸ್.ಇ, ಐ.ಸಿ.ಎಸ್.ಇ ಹಾಗೂ ಹೊರ ರಾಜ್ಯ ಪಠ್ಯಕ್ರಮಗಳಿಂದ ರಾಜ್ಯ ಪಠ್ಯಕ್ರಮಕ್ಕೆ ವಲಸೆ ಬರುವ ಅರ್ಹ ವಿದ್ಯಾರ್ಥಿಗಳು ಸಂಬಂಧಿಸಿದ ಜಿಲ್ಲಾ ಉಪ ನಿರ್ದೇಶಕರು (ಆಡಳಿತ)ರವರಿಗೆ ನೋಂದಣಿ ಶುಲ್ಕ ಪಾವತಿಸಿ ನಿಯಮಾನುಸಾರ ನೋಂದಾಯಿಸಿಕೊಳ್ಳುವುದು.
- ಖಾಸಗಿ ಅಭ್ಯರ್ಥಿಗಳನ್ನು ನೋಂದಣಿಮಾಡಿಕೊಳ್ಳಲು ಅಗತ್ಯವಿರುವ ದಾಖಲೆಗಳನ್ನು ಪಡೆದು ತಯಾರಿ ಮಾಡಿಕೊಳ್ಳುವುದು.
- ವಿದ್ಯಾರ್ಥಿಗಳ ಭಾವಚಿತ್ರ 60 ರಿಂದ 80 kb ಹಾಗೂ ಸಹಿಯನ್ನು 40 ರಿಂದ 50 kb JPEG ನಮೂನೆಯಲ್ಲಿ ಸಿದ್ದಪಡಿಸಿಕೊಳ್ಳುವುದು.
- ಬರಹಗಾರರ/ ಓದುಗಾರರ/ ಪ್ರಯೋಗ ಶಾಲಾ ಸಹಾಯಕರ ಸೌಲಭ್ಯ ಹೊರತುಪಡಿಸಿ ಉಳಿದ ಎಲ್ಲಾ ಸೌಲಭ್ಯಗಳನ್ನು ಪಡೆಯಲು ಮುಖ್ಯ ಶಿಕ್ಷಕರು ಅಗತ್ಯ ದಾಖಲೆಗಳೊಂದಿಗೆ ಸಂಬಂಧಿಸಿದ ಉಪನಿರ್ದೇಶಕರು (ಆಡಳಿತ)ರವರಿಗೆ ಪ್ರಸ್ತಾವನೆ ಸಲ್ಲಿಸಿ ಅನುಮತಿ ಪಡೆದುಕೊಳ್ಳುವುದು.
- 2002 ಮತ್ತು ಹಿಂದಿನ ವರ್ಷಗಳ ಪರೀಕ್ಷೆಯಲ್ಲಿ ಅನುತ್ತೀರ್ಣರಾದ ಪುನರಾವರ್ತಿತ ಅಭ್ಯರ್ಥಿಗಳ (NSR & NSPR) ಎಂ.ಎಸ್.ಎ ಶಾಲೆಯಲ್ಲಿ ಲಭ್ಯವಿಲ್ಲದಿದ್ದಲ್ಲಿ ಸಂಬಂಧಿಸಿದ ವಿಭಾಗೀಯ ಕಛೇರಿಯಿಂದ ಪಡೆದುಕೊಳ್ಳುವುದು.

ವಿದ್ಯಾರ್ಥಿಗಳ ಮಾಹಿತಿಯನ್ನು ಮಂಡಳಿಯ ಜಾಲತಾಣದ ಶಾಲಾ ಲಾಗಿನ್‌ನಲ್ಲಿ ಅಪ್‌ಲೋಡ್ ಮಾಡುವ ಮತ್ತು ಶುಲ್ಕ ಪಾವತಿಸುವ ದಿನಾಂಕಗಳ ಕುರಿತು ಮಂಡಳಿಯಿಂದ **ಪ್ರತ್ಯೇಕ ಸುತ್ತೋಲೆಯನ್ನು** ಸದ್ಯದಲ್ಲೇ ಹೊರಡಿಸಲಾಗುವುದು. ಈ ಸಂಬಂಧ ಸದರಿ ಅವಧಿಯೊಳಗೆ ಮೇಲ್ಕಂಡ ಎಲ್ಲಾ ಪೂರ್ವ ಸಿದ್ದತೆಗಳನ್ನು ಮಾಡಿಕೊಳ್ಳಲು ತಿಳಿಸಿದೆ.

## ಪರೀಕ್ಷಾ ಅರ್ಜಿಗಳ ಸಂಕೇತ ಮತ್ತು ಅರ್ಜಿ ಸಲ್ಲಿಸುವ ವಿಧಾನ :-

| ಕ್ರಮ ಸಂ. | ವಿದ್ಯಾರ್ಥಿಗಳ ವರ್ಗೀಕರಣ | ಸಂಕೇತ | ಅರ್ಜಿ ಸಲ್ಲಿಸುವ ವಿಧಾನ |
|---|---|---|---|
| 1 | ಶಾಲಾ ವಿದ್ಯಾರ್ಥಿಗಳು | ಸಿಸಿಇಆರ್‌ಎಫ್ , CCERF | ಮಂಡಳಿ ಜಾಲತಾಣದ ಶಾಲಾಲಾಗಿನ್ ಮೂಲಕ |
| 2 | ಖಾಸಗಿ ಅಭ್ಯರ್ಥಿಗಳು | ಸಿಸಿಇಪಿಎಫ್, CCEPF | |
| 3 | ಪುನರಾವರ್ತಿತ ಅಭ್ಯರ್ಥಿಗಳು | ಸಿಸಿಇಆರ್‌ಆರ್, CCERR | |
| | | ಎನ್‌ಎಸ್‌ಆರ್ – NSR (2003 ಮತ್ತು ನಂತರ ವರ್ಷದ ಪರೀಕ್ಷೆಯಲ್ಲಿ ಅನುತ್ತೀರ್ಣರಾದ ಅಭ್ಯರ್ಥಿಗಳು ) | |
| | | ಎನ್‌ಎಸ್‌ಆರ್ – NSR (2002 ಮತ್ತು ಹಿಂದಿನ ವರ್ಷದ ಪರೀಕ್ಷೆಯಲ್ಲಿ ಅನುತ್ತೀರ್ಣರಾದ ಅಭ್ಯರ್ಥಿಗಳು) | ಎಂ.ಎಸ್.ಎ ಮುಖಾಂತರ ಭೌತಿಕವಾಗಿ ಭರ್ತಿಮಾಡಿ ಮಂಡಳಿಗೆ ಸಲ್ಲಿಸುವುದು |
| 4 | ಖಾಸಗಿ ಪುನರಾವರ್ತಿತ ಅಭ್ಯರ್ಥಿಗಳು | ಸಿಸಿಇಪಿಆರ್ – CCEPR | ಮಂಡಳಿ ಜಾಲತಾಣದ ಶಾಲಾಲಾಗಿನ್ ಮೂಲಕ |
| | | ಎನ್‌ಎಸ್‌ಪಿಆರ್ - NSPR (2003 ಮತ್ತು ನಂತರ ವರ್ಷದ ಪರೀಕ್ಷೆಯಲ್ಲಿ ಅನುತ್ತೀರ್ಣರಾದ ಅಭ್ಯರ್ಥಿಗಳು ) | |
| | | ಎನ್‌ಎಸ್‌ಪಿಆರ್ - NSPR (2002 ಮತ್ತು ಹಿಂದಿನ ವರ್ಷದ ಪರೀಕ್ಷೆಯಲ್ಲಿ ಅನುತ್ತೀರ್ಣರಾದ ಅಭ್ಯರ್ಥಿಗಳು) | ಎಂ.ಎಸ್.ಎ ಮುಖಾಂತರ ಭೌತಿಕವಾಗಿ ಭರ್ತಿಮಾಡಿ ಮಂಡಳಿಗೆ ಸಲ್ಲಿಸುವುದು |

## IX. ಶಾಲಾ ಸಂಕೇತ:

**A. ಹೊಸ ಶಾಲಾ ಸಂಕೇತ ಪಡೆಯಲು :**

ಶಾಲಾ ಮುಖ್ಯಸ್ಥರು ವಿದ್ಯಾರ್ಥಿಗಳ ಪರೀಕ್ಷಾ ಅರ್ಜಿಗಳನ್ನು ಮಂಡಳಿಗೆ ಸಲ್ಲಿಸುವ ಮುನ್ನ ಮಂಡಳಿಯಿಂದ ಶಾಲಾ ಸಂಕೇತ ಪಡೆಯುವುದು ಕಡ್ಡಾಯ.

1. ಶಾಲಾ ಸಂಕೇತ ಪಡೆಯದ ಪ್ರೌಢಶಾಲೆಯನ್ನು ಪರೀಕ್ಷಾ ಮಂಡಳಿ ಮಾನ್ಯ ಮಾಡುವುದಿಲ್ಲ. ಈ ಶಾಲೆಗಳು ಮಾನ್ಯತೆ ಪಡೆಯದೇ ಇದ್ದಲ್ಲಿ / ಮಂಡಳಿಯಿಂದ ಶಾಲಾ ಸಂಕೇತ ಸಂಖ್ಯೆಯನ್ನು ಪಡೆಯದಿದ್ದಲ್ಲಿ, ಇಂತಹ ಶಾಲೆಗಳಿಂದ ಸಲ್ಲಿಕೆಯಾಗುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

2. ನೂತನ ಶಾಲಾ ಸಂಕೇತ ಪಡೆಯಲು ಅರ್ಜಿಗಳನ್ನು ಆನ್‌ಲೈನ್ ಮೂಲಕವೇ ಸಲ್ಲಿಸುವುದನ್ನು ಕಡ್ಡಾಯಗೊಳಿಸಲಾಗಿದೆ. ಹೆಚ್ಚಿನ ವಿವರಗಳಿಗಾಗಿ ಮಂಡಳಿಯಿಂದ ಈಗಾಗಲೇ ಹೊರಡಿಸಿರುವ ಸುತ್ತೋಲೆ ಸಂಖ್ಯೆ:ಸಿ1/ಎಸ್‌ಎಸ್‌ಎಲ್‌ಸಿ/ಶಾ.ಸಂ/45/2022–23 ದಿನಾಂಕ:25.07.2022ರ ಪ್ರತಿಯನ್ನು ಮಂಡಳಿಯ ಜಾಲತಾಣದಲ್ಲಿ ಪಡೆದು ಅದರಂತೆ ಕ್ರಮವಹಿಸುವುದು.

3. ಸರ್ಕಾರಿ ಪ್ರೌಢಶಾಲೆ / ಪದವಿ ಪೂರ್ವ ಕಾಲೇಜು (ಪ್ರೌಢಶಾಲಾ ವಿಭಾಗ) ಹಾಗೂ ಸರ್ಕಾರದ ಇತರೆ ಇಲಾಖೆಯಿಂದ ನಡೆಸಲ್ಪಡುವ ಶಾಲೆಗಳಾದ ಬಿಬಿಎಂಪಿ, ಮೊರಾರ್ಜಿ ದೇಸಾಯಿ, ಅಟಲ್ ಬಿಹಾರಿ ವಾಜಪೇಯಿ, ಏಕಲವ್ಯ ಮಾದರಿ ವಸತಿ ಶಾಲೆ, ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ, ಡಾ॥ ಬಿ ಆರ್ ಅಂಬೇಡ್ಕರ್ ವಸತಿ ಶಾಲೆ, ಶ್ರೀಮತಿ ಇಂದಿರಾ ಗಾಂಧಿ ವಸತಿ ಶಾಲೆ, ಮಾಸ್ತಿ ವೆಂಕಟೇಶ ಐಯ್ಯಂಗಾರ್ ವಸತಿ ಶಾಲೆ, ಸರ್ಕಾರಿ ಹಿಂದುಳಿದ ವರ್ಗಗಳ ಅಲ್ಪಸಂಖ್ಯಾತ ಶಾಲೆಗಳು, ಸರ್ಕಾರಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಶಾಲೆಗಳು ಮತ್ತು ನವೋದಯ ಶಾಲೆಗಳಾದಲ್ಲಿ ಶಾಲಾ ಸಂಕೇತಕ್ಕಾಗಿ ನಿಗದಿಪಡಿಸಿದ ರೂ.5000/– ಹಾಗೂ ಖಾಸಗಿ ಪ್ರೌಢಶಾಲೆಗಳಿಗೆ ಶಾಲಾ ಸಂಕೇತಕ್ಕಾಗಿ ನಿಗದಿಪಡಿಸಿದ ರೂ.10,000/– ಮೊತ್ತವನ್ನು **Online Challan Generation** ಮಾಡಿಕೊಂಡು **Offline** ಮೂಲಕ ಪಾವತಿಸಬಹುದು ಅಥವಾ **Online Payment / K2 payment** ಮೂಲಕವೂ ಸಹ ಪಾವತಿಸಬಹುದು.

**B. ಶಾಲೆಯ ಹೆಸರು & ವಿಳಾಸ ಬದಲಾವಣೆ ಮಾಡಲು :**

ಶಾಲೆಯ ಹೆಸರು & ವಿಳಾಸ ಬದಲಾವಣೆಯಾದಲ್ಲಿ ಬದಲಾದ ಶಾಲಾ ಹೆಸರು & ವಿಳಾಸದಲ್ಲಿ ಹೊಸ ಶಾಲಾ ಸಂಕೇತ ಪಡೆಯಬೇಕಾಗಿದೆ. ಶಾಲಾ ಸಂಕೇತ ಪಡೆಯಲು ಸರ್ಕಾರಿ /ಖಾಸಗಿ ಶಾಲೆಗಳಿಗೆ ನಿಗದಿಪಡಿಸಿರುವ ಶಾಲಾ ಸಂಕೇತ ಶುಲ್ಕದೊಂದಿಗೆ ಈ ಕೆಳಕಂಡ ದಾಖಲೆಗಳನ್ನು ಸಲ್ಲಿಸುವುದು.

- ➢ ಶಾಲಾ ಸಂಕೇತದ ಅರ್ಜಿ ನಮೂನೆ.
- ➢ ಶಾಲೆಯ ಹೆಸರು / ವಿಳಾಸ ಬದಲಾವಣೆಯ ಸರ್ಕಾರಿ ಆದೇಶದ ಪ್ರತಿ.
- ➢ ಪ್ರಸ್ತುತ ವರ್ಷದ ಶಾಲಾ ಮಾನ್ಯತೆ ನವೀಕರಣ ಪ್ರಮಾಣ ಪತ್ರದ ಪ್ರತಿ.
- ➢ ಎಸ್.ಎ.ಟಿ.ಎಸ್.ನ ಪ್ರತಿ.

ಈ ಮೇಲ್ಕಂಡ ಅಗತ್ಯ ದಾಖಲೆಗಳನ್ನು ಸಂಬಂಧಪಟ್ಟ ಜಿಲ್ಲಾ ಉಪ ನಿರ್ದೇಶಕರು(ಆಡಳಿತ) / ಕ್ಷೇತ್ರ ಶಿಕ್ಷಣಾಧಿಕಾರಿಗಳು ಇವರಿಂದ ಪ್ರತಿ ಪುಟವಾರು ದೃಢೀಕರಿಸಿ, ಉಪ ನಿರ್ದೇಶಕರು(ಆಡಳಿತ) / ಕ್ಷೇತ್ರ ಶಿಕ್ಷಣಾಧಿಕಾರಿಗಳು ಇವರ ಮೂಲಕ ಪ್ರಸ್ತಾವನೆಯನ್ನು ಸಲ್ಲಿಸುವುದು.

- ಶಾಲಾ ಸಂಕೇತದ ದ್ವಿತೀಯ ಪ್ರತಿಯನ್ನು (SECOND COPY) ಪಡೆಯಲು ರೂ.2,000/– (ಎರಡು ಸಾವಿರ ಮಾತ್ರ) ಪಾವತಿಸಬೇಕಾಗುತ್ತದೆ.
- ದಿನಾಂಕ: **30.09.2022** ರೊಳಗಾಗಿ ಶಾಲಾ ಸಂಕೇತ ಪಡೆಯುವುದು ಕಡ್ಡಾಯ.

## X. ವಿಭಿನ್ನ ಸಾಮರ್ಥ್ಯವುಳ್ಳ (Differently Abled) ಮಕ್ಕಳಿಗೆ ನೀಡುವ ಸೌಲಭ್ಯಗಳು ಮತ್ತು ವಿನಾಯಿತಿಗಳು:

ಭಾರತ ಸರ್ಕಾರದ Ministry of Social Justice and Empowerment Department of Disability Affairs ಸಂಸ್ಥೆಯ ಪತ್ರ ಸಂಖ್ಯೆ:F.No.16-110/2003-DDIII ದಿನಾಂಕ:26.02.2013 ಹಾಗೂ ಕರ್ನಾಟಕ ಸರ್ಕಾರ, ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆಯ ಸುತ್ತೋಲೆ ಸಂಖ್ಯೆ:ವಿಹಿನಾಸಿಇ/ ಅಧಿನಿಯಮ/07/2012–13, ದಿನಾಂಕ:20.05.2013 ರನ್ವಯ ಕೆಳಕಂಡ ಸೌಲಭ್ಯಗಳನ್ನು ಪಡೆದುಕೊಳ್ಳಲು ಅವಕಾಶ ಕಲ್ಪಿಸಿದೆ.

1. ಸರ್ಕಾರದ ಆದೇಶದ ಸಂಖ್ಯೆ:ಮಮಅ.65.ಪಿಹೆಚ್‌ಪಿ.2000, ಬೆಂಗಳೂರು ದಿನಾಂಕ:10.03.2000 ರನ್ವಯ, ಅಧಿಕೃತ ಶಾಲೆಗಳಲ್ಲಿ ಅಭ್ಯಾಸ ಮಾಡುತ್ತಿರುವ ಸ್ಪಾಸ್ಟಿಕ್/ ಕಿವುಡು/ ಮೂಗ ಮತ್ತು ಕಲಿಕಾ ನ್ಯೂನತೆ ಹಾಗೂ ಬುದ್ಧಿಮಾಂದ್ಯ ವಿದ್ಯಾರ್ಥಿಗಳು ಶಿಕ್ಷಣ ಮಾಧ್ಯಮದ ಭಾಷೆಯ ಒಂದನ್ನು ಮಾತ್ರ ತೆಗೆದುಕೊಳ್ಳಬಹುದು. ಉಳಿದ ಎರಡು ಭಾಷಾ ವಿಷಯಗಳಿಗೆ ವಿನಾಯಿತಿ ಇರುತ್ತದೆ. ಈ ಬಗ್ಗೆ ಸಂಬಂಧಿಸಿದ ಜಿಲ್ಲಾ ಉಪನಿರ್ದೇಶಕರು (ಆಡಳಿತ) ರವರಿಂದ ಅನುಮತಿ ಪಡೆದುಕೊಳ್ಳುವುದು. ನೇರವಾಗಿ ಮಂಡಳಿಗೆ ಪ್ರಸ್ತಾವನೆ ಸಲ್ಲಿಸಬಾರದು ಈ ವಿಷಯದಲ್ಲಿ ಅಂತಹ ವಿದ್ಯಾರ್ಥಿ ಹಾಗೂ ಪೋಷಕರಿಗೆ ಅನವಶ್ಯಕ ತೊಂದರೆ ನೀಡಬಾರದಾಗಿ ತಿಳಿಸಿದೆ.

2. ಸರ್ಕಾರದ ಸುತ್ತೋಲೆ ಸಂಖ್ಯೆ:ಇಡಿ.142.ಯೋಯೋಕ.2009, ದಿನಾಂಕ:16.07.2009 ರನ್ವಯ ಕಲಿಕಾ ನ್ಯೂನ್ಯತೆ ಹೊಂದಿರುವ ವಿದ್ಯಾರ್ಥಿಗಳು ನಿಮ್ಹಾನ್ಸ್/ ಅಖಿಲ ಭಾರತ ದೃಕ್–ಶ್ರವಣ ಸಂಸ್ಥೆ ಮೈಸೂರು/ ಸರ್ಕಾರಿ ಆಸ್ಪತ್ರೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಯಾವುದೇ ಮನ:ಶಾಸ್ತ್ರಜ್ಞರು/ ಕನಿಷ್ಠ ಎಂ.ಫಿಲ್. ವಿದ್ಯಾರ್ಹತೆ ಹೊಂದಿರುವ ಕ್ಲಿನಿಕಲ್ ಮನ:ಶಾಸ್ತ್ರಜ್ಞರು ನೀಡಿರುವ ಪ್ರಮಾಣ ಪತ್ರಕ್ಕೆ ಜಿಲ್ಲಾ ಸರ್ಜನ್ ಶ್ರೇಣಿಗಿಂತಲೂ ಕಡಿಮೆ ಇಲ್ಲದ ಸರ್ಕಾರಿ ವೈದ್ಯರಿಂದ ದೃಢೀಕರಣ ಅಥವಾ ಮಲ್ಲೇಶ್ವರಂ ಡಿಸ್‌ಲೆಕ್ಸಿಯಾ ಅಸೋಷಿಯೇಷನ್(ರಿ), ಬೆಂಗಳೂರು ಅಥವಾ ಭಾರತ ದೇಶದ ಯಾವುದೇ ಭಾಗದಿಂದ ಅಧಿಕೃತ ಜಿಲ್ಲಾ ಸರ್ಜನ್‌ಗಿಂತಲೂ ಕಡಿಮೆ ಇಲ್ಲದ ವೈದ್ಯರಿಂದ ಪಡೆದ ಪ್ರಮಾಣ ಪತ್ರವನ್ನು ಮುಖ್ಯ ಶಿಕ್ಷಕರು ತಮ್ಮ ಹಂತದಲ್ಲಿಯೇ ಸಂರಕ್ಷಿಸಿಡುವುದು ಕಡ್ಡಾಯ. ಈ ಅಧಿಸೂಚನೆಯ ನಿಗದಿತ ಅವಧಿಯ ನಂತರ ವಿನಾಯಿತಿ ಕೋರಿ ಬರುವ ಅರ್ಜಿಗಳನ್ನು ಪುರಸ್ಕರಿಸಲಾಗುವುದಿಲ್ಲ. ಈ ಬಗ್ಗೆ ವಿನಾಯಿತಿ ಪಡೆದುಕೊಳ್ಳಲು ಮುಖ್ಯಶಿಕ್ಷಕರು ಪೂರ್ವಭಾವಿ ಕ್ರಮವಹಿಸಿ ಜಿಲ್ಲಾ ಉಪನಿರ್ದೇಶಕರು (ಆಡಳಿತ)ರವರ ಅನುಮತಿ ಪಡೆದು ಅಂತಹ ವಿದ್ಯಾರ್ಥಿಗಳಿಗೆ ಸದರಿ ಸೌಲಭ್ಯ ಒದಗಿಸುವುದು ಮುಖ್ಯಶಿಕ್ಷಕರ ಆದ್ಯ ಕರ್ತವ್ಯವಾಗಿರುತ್ತದೆ. ಸದರಿ ಮಾಹಿತಿಯನ್ನು ಎಸ್‌ಎಟಿಎಸ್ ಜಾಲತಾಣದಲ್ಲಿ ಭರ್ತಿ ಮಾಡುವಾಗ ಈ ವಿಷಯವನ್ನು ಕ್ರಮಬದ್ಧವಾಗಿ ದಾಖಲಿಸುವುದು ಕಡ್ಡಾಯವಾಗಿರುತ್ತದೆ.

3. ಸರ್ಕಾರದ ಸುತ್ತೋಲೆ ಸಂಖ್ಯೆ:ಇಡಿ.142.ಯೋಯೋಕಾ.2008, ದಿ:21.02.2009ರ ಅನ್ವಯ, ರಾಜ್ಯದಲ್ಲಿ ಮಾನ್ಯತೆ ಪಡೆದ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಕಲಿಕಾ ನ್ಯೂನತೆ ಹೊಂದಿರುವ ಮಕ್ಕಳಿಗೆ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಈ ಕೆಳಕಂಡ ಸೌಲಭ್ಯವನ್ನು ಒದಗಿಸಲಾಗಿದೆ.
   - ಈ ಮಕ್ಕಳಿಗೆ ಪರೀಕ್ಷಾ ಸಂದರ್ಭದಲ್ಲಿ ಸರಳ ಕ್ಯಾಲುಕ್ಯೂಲೇಟರ್ ಉಪಯೋಗಿಸಲು ಅನುಮತಿಸಲಾಗಿದೆ.
   - ಈ ಮಕ್ಕಳಿಗೆ ಪ್ರಶ್ನೆಗಳನ್ನು ಓದಲು ಪೋಷಕರ ವೆಚ್ಚದಲ್ಲಿ ಸಹಾಯಕರನ್ನು ಪಡೆಯಲು ಅನುಮತಿಸಿದೆ.

4. ಭಾಷಾ ವಿನಾಯಿತಿಗಳ ಪ್ರಸ್ತಾವನೆಗಳನ್ನು ಜಿಲ್ಲಾ ಉಪನಿರ್ದೇಶಕರು ಕೂಲಂಕುಷವಾಗಿ ಪರಿಶೀಲಿಸಿ ವಿನಾಯಿತಿ ನೀಡುವ ಭಾಷಾ ವಿಷಯ ಮತ್ತು ವಿಷಯ ಸಂಕೇತಗಳನ್ನು ವಿವರಿಸಿರಬೇಕು. ದೈಹಿಕ ವಿಕಲಚೇತನ ವಿದ್ಯಾರ್ಥಿಗಳಿಗೆ (Physically challenged) ಭಾಷಾ ವಿನಾಯಿತಿ ನೀಡಲು ಅವಕಾಶವಿರುವುದಿಲ್ಲ. ಇದನ್ನು ಹೊರತುಪಡಿಸಿ ಉಳಿದಂತೆ ನೀಡುವ ಸೌಲಭ್ಯಗಳನ್ನು ವಿವರಿಸಿದ್ದು, ಅದರಂತೆ ಕ್ರಮವಹಿಸುವುದು.

**ಸರ್ಕಾರದ ಆದೇಶ ಸಂಖ್ಯೆ:ಇಪಿ 62 ಎಸ್‌ಎಲ್‌ಬಿ 2021 ದಿನಾಂಕ:15.03.2021ರಂತೆ ಮೇಲ್ಕಂಡ ಕ್ರಮ ಸಂಖ್ಯೆ:1, 2 ಮತ್ತು 3ರ ಸರ್ಕಾರದ ಆದೇಶದ ಅಂಶಗಳನ್ನು ಯಥಾವತ್ತಾಗಿ ಮುಂದುವರೆಸುತ್ತಾ, ಕೆಳಕಂಡಂತೆ ಇನ್ನೂ ಹೆಚ್ಚಿನ ಸೌಲಭ್ಯ/ವಿನಾಯಿತಿಗಳನ್ನು ನೀಡಿದೆ.**

| ಕ್ರಸ | ವಿಷಯ | ವಿಶೇಷ ಸೌಲಭ್ಯಗಳು /ವಿನಾಯಿತಿಗಳ ವಿವರಗಳು |
|---|---|---|
| 1 | Issuing Authority of Medical Certificate<br><br>ವೈದ್ಯಕೀಯ ಪ್ರಮಾಣ ಪತ್ರವನ್ನು ನೀಡುವ ಪ್ರಾಧಿಕಾರ | ಈ ಕೆಳಕಂಡ ಸಂಸ್ಥೆಗಳು ನೀಡುವ ವೈದ್ಯಕೀಯ ಪ್ರಮಾಣ ಪತ್ರಗಳನ್ನು ವಿಭಿನ್ನ ಸಾಮರ್ಥ್ಯವುಳ್ಳ ವಿದ್ಯಾರ್ಥಿಗಳಿಗೆ ವಿನಾಯಿತಿ ನೀಡಲು ಪರಿಗಣಿಸಲಾಗುವುದು.<br>1. ರಾಜ್ಯ ಸರ್ಕಾರ ಅಥವಾ ಕೇಂದ್ರ ಸರ್ಕಾರದ ವ್ಯಾಪ್ತಿಗೆ ಒಳಪಡುವ ಸರ್ಕಾರಿ ಆಸ್ಪತ್ರೆಗಳ ಮುಖ್ಯ ವೈದ್ಯಾಧಿಕಾರಿ/ಸಿವಿಲ್ ಸರ್ಜನ್/ ವೈದ್ಯಕೀಯ ಅಧೀಕ್ಷಕರು ಇವರಿಂದ ದೃಢೀಕರಿಸಲ್ಪಟ್ಟ ವೈದ್ಯಕೀಯ ಪ್ರಮಾಣ ಪತ್ರ.<br>2. ರಾಷ್ಟ್ರಮಟ್ಟದಲ್ಲಿ ಮಾನ್ಯತೆ ಪಡೆದ ಸಂಸ್ಥೆಗಳಾದ ರಾಷ್ಟ್ರೀಯ ಅಖಿಲ ಭಾರತ ಅಂಧರ ಸಂಘ, ಸ್ಪಾಸ್ಟಿಕ್ ಸೊಸೈಟಿ ಆಫ್ ಇಂಡಿಯಾ ಇತ್ಯಾಧಿ.<br>3. Rehabilitation council of India/ಕೇಂದ್ರ ಸರ್ಕಾರ/ಆಯಾ ರಾಜ್ಯ ಸರ್ಕಾರದಲ್ಲಿ ನೋಂದಾಯಿಸಲ್ಪಟ್ಟ ಸರ್ಕಾರೇತರ ಸಂಸ್ಥೆಗಳು/ವೃತ್ತಿ ನಿರತರು ನೀಡುವ ಪ್ರಮಾಣ ಪತ್ರ.<br><br>ಈ ಅಧಿಸೂಚನೆಯಲ್ಲಿರುವ ಅನುಬಂಧ 1 ರಲ್ಲಿ ವೈದ್ಯಕೀಯ ಪ್ರಮಾಣ ಪತ್ರದ ನಮೂನೆಯನ್ನು ನೀಡಲಾಗಿದೆ. |
| 2 | Facility of Scribe and compensatory time<br><br>ಬರಹಗಾರರ ಸೌಲಭ್ಯ ಮತ್ತು ಹೆಚ್ಚುವರಿ ಸಮಯ | • ವಿಶೇಷ ಚೇತನರ ಹಕ್ಕುಗಳ ಅಧಿನಿಯಮ 2016 ರನ್ವಯ ವಿವಿಧ ಪ್ರಕಾರದ ವಿಭಿನ್ನ ಸಾಮರ್ಥ್ಯವುಳ್ಳ ವಿದ್ಯಾರ್ಥಿಗಳಿಗೆ ಬರಹಗಾರರ ಸೌಲಭ್ಯ ಅಥವಾ ಹೆಚ್ಚುವರಿ ಸಮಯದ ಅಥವಾ ಎರಡನ್ನೂ ಪಡೆಯುವ ಅವಕಾಶವಿದೆ.<br>• ಮೂರು ಗಂಟೆಯ ಪ್ರಶ್ನೆಪತ್ರಿಕೆಗೆ ಹೆಚ್ಚುವರಿ ಸಮಯ 60 ನಿಮಿಷ.<br>• ಎರಡೂವರೆ ಗಂಟೆಯ ಪ್ರಶ್ನೆಪತ್ರಿಕೆಗೆ ಹೆಚ್ಚುವರಿ ಸಮಯ 50 ನಿಮಿಷ.<br>• ಎರಡು ಗಂಟೆಯ ಪ್ರಶ್ನೆಪತ್ರಿಕೆಗೆ ಹೆಚ್ಚುವರಿ ಸಮಯ 40 ನಿಮಿಷ.<br>• ಒಂದೂವರೆ ಗಂಟೆಯ ಪ್ರಶ್ನೆಪತ್ರಿಕೆಗೆ ಹೆಚ್ಚುವರಿ ಸಮಯ 30 ನಿಮಿಷ. |

| | | |
|---|---|---|
| 3 | Appointment of Scribe and related instructions<br><br>ಬರಹಗಾರರ ನೇಮಕಕ್ಕೆ ಸಂಬಂಧಿಸಿದ ಸೂಚನೆಗಳು | 1. ವಿಕಲಚೇತನ ಮಕ್ಕಳು ತಮಗೆ ಬೇಕಾದ ಸ್ವಂತ ಓದುಗಾರರ/ ಬರಹಗಾರರ ಆಯ್ಕೆಯನ್ನು ಮಾಡಿ ಕೊಳ್ಳಬಹುದು/ಅಥವಾ ಪರೀಕ್ಷಾ ಕೇಂದ್ರಗಳ ಮುಖ್ಯಸ್ಥರ ಮೂಲಕ ಮಾಡಿಕೊಳ್ಳಬಹುದು.<br>2. ಒಂದು ವೇಳೆ ವಿಕಲಚೇತನ ವಿದ್ಯಾರ್ಥಿಗಳಿಗೆ ಬರಹಗಾರರ ಆಯ್ಕೆಯನ್ನು ಪರೀಕ್ಷಾ ಕೇಂದ್ರದ ಅಧೀಕ್ಷಕರು ಮಾಡಿಕೊಟ್ಟಲ್ಲಿ ಬರಹಗಾರರ ವಿದ್ಯಾರ್ಹತೆಯು ಪರೀಕ್ಷಾರ್ಥಿಯ ವಿದ್ಯಾರ್ಹತೆಗಿಂತ ಒಂದು ಹಂತ ಕಡಿಮೆಯಿರತಕ್ಕದ್ದು.<br>3. ಒಂದು ವೇಳೆ ಪರೀಕ್ಷಾರ್ಥಿಯು ಬರಹಗಾರರನ್ನು ತಾನೇ ನೇಮಿಸಿಕೊಂಡಿದ್ದಲ್ಲಿ, ನೇಮಕಗೊಂಡ ಬರಹಗಾರರ ವಿದ್ಯಾರ್ಹತೆಯು ಪರೀಕ್ಷಾರ್ಥಿಯ ವಿದ್ಯಾರ್ಹತೆಗಿಂತ ಒಂದು ಹಂತ ಕಡಿಮೆಯಿರತಕ್ಕದ್ದು ಹಾಗೂ ಸ್ವಂತವಾಗಿ ಬರಹಗಾರರ/ ಓದುಗಾರರ ನೇಮಕವನ್ನು ಮಾಡಿಕೊಂಡ ವಿಕಲಚೇತನ ವಿದ್ಯಾರ್ಥಿಗಳು ಅದರ ಸಂಪೂರ್ಣ ಮಾಹಿತಿಯನ್ನು ಅನುಬಂಧ-2 ರಲ್ಲಿರುವಂತೆ ಪರೀಕ್ಷೆಗೆ ಮೊದಲೇ ಸಲ್ಲಿಸುವುದು.<br>4. ತುರ್ತು ಸಂದರ್ಭಗಳಲ್ಲಿ ಮಾತ್ರ ಬರಹಗಾರರನ್ನು/ ಓದುಗಾರರನ್ನು ಬದಲಾಯಿಸುವ ಅವಕಾಶ ವಿದ್ಯಾರ್ಥಿಗಳಿಗಿರುತ್ತದೆ. ಪರೀಕ್ಷಾರ್ಥಿಗಳು ಬರಹಗಾರರನ್ನು/ ಓದುಗಾರರನ್ನು ವಿಷಯಗಳಿಗೆ ತಕ್ಕಂತೆ ಬದಲಾವಣೆ ಮಾಡಲು ಅವಕಾಶವಿರುತ್ತದೆ (ವಿಶೇಷವಾಗಿ ಭಾಷೆಗಳಿಗೆ) ಒಟ್ಟಾರೆ ಒಂದು ವಿಷಯಕ್ಕೆ ಒಬ್ಬನೇ ಬರಹಗಾರರ/ಓದುಗಾರರನ್ನು ನೇಮಿಸಿಕೊಳ್ಳಲು ಅವಕಾಶವಿದೆ.<br>5. ಪರೀಕ್ಷಾ ಕೇಂದ್ರದ ಅಧೀಕ್ಷಕರು, ವಿಭಿನ್ನ ಸಾಮರ್ಥ್ಯವುಳ್ಳ ವಿದ್ಯಾರ್ಥಿಗಳು ಪರೀಕ್ಷೆಯನ್ನು ಬರಹಗಾರರ ಜೊತೆ ಸುಗಮವಾಗಿ ಬರೆಯಲು ಸೂಕ್ತವಾದ ಪ್ರತ್ಯೇಕ ಕೊಠಡಿಯಲ್ಲಿ ವ್ಯವಸ್ಥೆ ಮಾಡಿ, ಪ್ರತ್ಯೇಕ ಕೊಠಡಿ ಮೇಲ್ವಿಚಾರಕರನ್ನು ನೇಮಕ ಮಾಡುವುದು. |
| 4 | Other General instructions/facilities<br><br>ಇತರೆ ಸಾಮಾನ್ಯ ಸೂಚನೆಗಳು/ ಸೌಲಭ್ಯಗಳು | 1. ಪರೀಕ್ಷಾ ಕೇಂದ್ರಗಳಲ್ಲಿ ವಿಶೇಷ ಚೇತನ ಮಕ್ಕಳಿಗೆ ಸೂಕ್ತ ಆಸನ ವ್ಯವಸ್ಥೆಯನ್ನು ನೆಲಮಹಡಿಯಲ್ಲಿಯೇ ವ್ಯವಸ್ಥೆಗೊಳಿಸುವುದು.<br>2. ದೃಷ್ಟಿ ಮಾಂದ್ಯ ಶಾಲೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಶಿಕ್ಷಕರನ್ನು ಕೊಠಡಿ ಮೇಲ್ವಿಚಾರಕರಾಗಿ Visually Impaired ವಿದ್ಯಾರ್ಥಿಗಳಿರುವ ಕೊಠಡಿಗೆ ನಿಯೋಜಿಸುವುದು ಹಾಗೂ ಬೇರೆ ವಿಷಯ ಶಿಕ್ಷಕರನ್ನು ಪರೀಕ್ಷಾ ದಿನದಂದು ನೇಮಿಸಲು ಕ್ರಮ ವಹಿಸುವುದು.<br>3. ಉತ್ತರ ಪತ್ರಿಕೆಯ ಮುಖಪುಟದಲ್ಲಿ ಹಸಿರು ಸ್ಟಿಕ್ಕರ್ ಅಂಟಿಸುವುದು.<br>4. ದೃಷ್ಟಿ ದೋಷವುಳ್ಳ ವಿದ್ಯಾರ್ಥಿಗಳಿಗೆ ಪೋರ್ಟಬಲ್ ವಿಡಿಯೋ ವರ್ಧಕ Video Magnifier ಮತ್ತು Magnifier Glass ಗಳನ್ನು ಬಳಸಲು ಅವಕಾಶ ಕಲ್ಪಿಸಬಹುದು.<br>5. ವಿಭಿನ್ನ ಸಾಮರ್ಥ್ಯ ಹೊಂದಿದ ವಿದ್ಯಾರ್ಥಿಯು ಬರಹಗಾರರ ಸೌಲಭ್ಯ ಪಡೆಯದೇ ಕೇವಲ ಓದುಗಾರರ ಸೌಲಭ್ಯವನ್ನು ಇಚ್ಛಿಸಿದಲ್ಲಿ ಪಡೆಯಬಹುದಾಗಿದೆ. ಆದರೆ ಅಂತಹ ಓದುಗಾರರು ಕೇವಲ ಪ್ರಶ್ನೆ ಪತ್ರಿಕೆಯನ್ನು ಓದಲು ಸೀಮಿತವಾಗಿರತಕ್ಕದ್ದು.<br>6. ವಿಭಿನ್ನ ಸಾಮರ್ಥ್ಯವುಳ್ಳ ವಿದ್ಯಾರ್ಥಿಗಳಿಗೆ ಕನಿಷ್ಠ ಹಾಜರಾತಿಯಿಂದ ವಿನಾಯಿತಿ ನೀಡಬಹುದು. ವಿದ್ಯಾರ್ಥಿಯು ಹಾಜರಾತಿಯಲ್ಲಿ ವಿನಾಯಿತಿ ಪಡೆಯಲು ಸಕ್ಷಮ ಪ್ರಾಧಿಕಾರದಿಂದ ಪಡೆದ ವೈದ್ಯಕೀಯ ಪ್ರಮಾಣ ಪತ್ರವನ್ನು ಮುಖ್ಯೋಪಾಧ್ಯಾಯರು ಪರಿಶೀಲಿಸಿ ಶಾಲೆಯಲ್ಲಿ ಸಂರಕ್ಷಿಸಿಡುವುದು. |

| | | |
|---|---|---|
| 5 | Fee<br>ಶುಲ್ಕ | ವಿಭಿನ್ನ ಸಾಮರ್ಥ್ಯವುಳ್ಳ (Differently Abled) ಮಕ್ಕಳಿಗೆ ಮುಖ್ಯ ಹಾಗೂ ಪೂರಕ ಪರೀಕ್ಷಾ ಶುಲ್ಕದಿಂದ ವಿನಾಯಿತಿ ನೀಡಲಾಗಿದೆ. |
| 6 | Exemption from language<br>ಭಾಷಾ ವಿನಾಯಿತಿ | ಸ್ಪಾಸ್ಟಿಕ್, ಕಿವುಡ ಮೂಗ, ಮಸ್ಕುಲರ್ ಡಿಸ್ಟ್ರೋಫಿ, ಕಲಿಕಾ ನ್ಯೂನತೆ, ಅಂಧ ವಿದ್ಯಾರ್ಥಿಗಳು/ ದೃಷ್ಟಿಮಾಂದ್ಯ ವಿದ್ಯಾರ್ಥಿ/ ಕ್ಷೀಣ ದೃಷ್ಠಿ ಹಾಗೂ ಬುದ್ಧಿಮಾಂದ್ಯ ವಿದ್ಯಾರ್ಥಿಗಳಿಗೆ ಶಿಕ್ಷಣ ಮಾಧ್ಯಮದ ಒಂದು ಭಾಷೆಯನ್ನು ಮಾತ್ರ ಅಭ್ಯಾಸ ಮಾಡಬಹುದು. ಉಳಿದ ಎರಡು ಭಾಷೆಗಳಿಗೆ ವಿನಾಯಿತಿ ನೀಡಿದೆ. |
| 7 | Flexibility in choosing subjects<br>ವಿಷಯಗಳ ಆಯ್ಕೆಯಲ್ಲಿ ಸಡಿಲತೆ | ಕಲಿಕಾ ನ್ಯೂನ್ಯತೆ/ ಡಿಸ್‌ಲೆಕ್ಸಿಯಾ ಮತ್ತು ಅಂಧ ವಿದ್ಯಾರ್ಥಿಗಳು/ ದೃಷ್ಟಿಮಾಂದ್ಯ ವಿದ್ಯಾರ್ಥಿ/ ಕ್ಷೀಣ ದೃಷ್ಠಿ ಹಾಗೂ ಬುದ್ಧಿಮಾಂದ್ಯ ವಿದ್ಯಾರ್ಥಿಗಳಿಗೆ ಗಣಿತ ಹಾಗೂ ವಿಜ್ಞಾನ ವಿಷಯಗಳ ಬದಲು ಸಮಾಜಶಾಸ್ತ್ರ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ಕರ್ನಾಟಕ ಸಂಗೀತ ಅಥವಾ ಹಿಂದೂಸ್ಥಾನಿ ಸಂಗೀತ ವಿಷಯಗಳಲ್ಲಿ ಯಾವುದಾದರೂ ಎರಡು ವಿಷಯಗಳನ್ನು ಸಮಾಜ ವಿಜ್ಞಾನದ ಜೊತೆಗೆ ಆಯ್ಕೆಮಾಡಿಕೊಳ್ಳಬಹುದು. ಹೆಚ್ಚುವರಿ ಸಮಯ ನೀಡುವ ಸೌಲಭ್ಯ ನೀಡಿದೆ. |
| 8 | Alternate questions/separate Questions<br>ಪರ್ಯಾಯ ಪ್ರಶ್ನೆಗಳು/ ಪ್ರತ್ಯೇಕ ಪ್ರಶ್ನೆಗಳು | • ದೃಷ್ಟಿಮಾಂದ್ಯ ವಿದ್ಯಾರ್ಥಿಗಳಿಗೆ ಪರ್ಯಾಯ ಪ್ರಕಾರದ ಪ್ರಶ್ನೆಗಳನ್ನು ಒದಗಿಸುವುದು.<br>• ದೊಡ್ಡ ಗಾತ್ರದ ಅಕ್ಷರಗಳ ಪ್ರಶ್ನೆಪತ್ರಿಕೆಗೆ ಬದಲಾಗಿ, ಭೂತಗನ್ನಡಿಯ / ಪೋರ್ಟಬಲ್ ವಿಡಿಯೋ ವರ್ಧಕಗಳನ್ನು ಬಳಸಲು ಅನುಮತಿಸಿದೆ. |
| 9 | ವಿಶೇಷ ಸೂಚನೆಗಳು | • ವಿಕಲಚೇತನರ ಹಕ್ಕುಗಳ ಕಾಯ್ದೆ 2016ರಲ್ಲಿ ನಿರ್ದಿಷ್ಟಪಡಿಸಿದ ಅಂಗವೈಕಲ್ಯಗಳ ಬಗ್ಗೆ ಅನುಬಂಧ-3ರಲ್ಲಿ ವಿವರಿಸಲಾಗಿದೆ.<br>• ವಿಕಲ ಚೇತನ ಮಕ್ಕಳಿಗೆ ಬರಹಗಾರರ/ ಓದುಗಾರರ/ ಪ್ರಯೋಗ ಶಾಲಾ ಸಹಾಯಕರ ಸೌಲಭ್ಯ ಪಡೆಯಲು ಮುಖ್ಯ ಶಿಕ್ಷಕರು ವಿದ್ಯಾರ್ಥಿಯ ಪರೀಕ್ಷಾ ಪ್ರವೇಶ ಪತ್ರ ಮತ್ತು ಅಗತ್ಯ ದಾಖಲೆಗಳೊಂದಿಗೆ ಸಂಬಂಧಿಸಿದ ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರಿಗೆ ಮನವಿ ಸಲ್ಲಿಸಿ ಅನುಮತಿ ಪಡೆಯತಕ್ಕದ್ದು.<br>• ಬರಹಗಾರರ/ ಓದುಗಾರರ/ ಪ್ರಯೋಗ ಶಾಲಾ ಸಹಾಯಕರ ಸೌಲಭ್ಯ ಹೊರತುಪಡಿಸಿ ಉಳಿದ ಎಲ್ಲಾ ಸೌಲಭ್ಯಗಳನ್ನು ಪಡೆಯಲು ಮುಖ್ಯ ಶಿಕ್ಷಕರು ಅಗತ್ಯ ದಾಖಲೆಗಳೊಂದಿಗೆ ಸಂಬಂಧಿಸಿದ ಉಪನಿರ್ದೇಶಕರು (ಆಡಳಿತ)ರವರಿಗೆ ಪ್ರಸ್ತಾವನೆ ಸಲ್ಲಿಸಿ ಅನುಮತಿ ಪಡೆಯುವುದು.<br>• ವಿಭಿನ್ನ ಸಾಮರ್ಥ್ಯವುಳ್ಳ (Differently Abled) ಮಕ್ಕಳ ಉತ್ತರ ಪತ್ರಿಕೆಗಳ ಮೇಲೆ ಹಸಿರು ಸ್ಟಿಕ್ಕರ್ ಅಂಟಿಸುವುದು ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರ ಜವಾಬ್ದಾರಿಯಾಗಿರುತ್ತದೆ.<br>• ಅನುಬಂಧ-1,2 ಮತ್ತು 3ನ್ನು ಈ ಅಧಿಸೂಚನೆಯೊಂದಿಗೆ ಅನುಬಂಧಿಸಿದೆ. |

ಪರೀಕ್ಷಾ ಸಮಯದಲ್ಲಿ ಸೆರೆಬ್ರಲ್‌ಪಾಲ್ಸಿ, ಆಟಿಸಂ, ಪಾರ್ಶ್ವವಾಯು, ಕುಷ್ಠರೋಗ ಹಾಗೂ ವಿವಿಧ ಇತರೆ ನ್ಯೂನ್ಯತೆಯಿರುವ ವಿದ್ಯಾರ್ಥಿ, ಸೌಲಭ್ಯ ಪಡೆಯಲು ಅಪೇಕ್ಷಿಸಿದರೆ ಸೂಕ್ತ ವೈದ್ಯಕೀಯ ದಾಖಲೆಗಳನ್ನು ಪರಿಶೀಲಿಸಿ, ನಿಯಮಾನುಸಾರ ಹೆಚ್ಚುವರಿ ಸಮಯ, ಬರಹಗಾರರ, ಓದುಗಾರರ ಸೌಲಭ್ಯ ನೀಡುವ ಅಧಿಕಾರ ಪರೀಕ್ಷಾ ಕೇಂದ್ರದ ಮುಖ್ಯ ಅಧೀಕ್ಷಕರಿಗಿರುತ್ತದೆ.

**ವಿಶೇಷ ಸೂಚನೆ:- ವಿಭಿನ್ನ ಸಾಮರ್ಥ್ಯವುಳ್ಳ ವಿದ್ಯಾರ್ಥಿಗಳು ಒಮ್ಮೆ ಮೇಲ್ಕಂಡ ಸೌಲಭ್ಯಗಳು ಮತ್ತು ವಿನಾಯಿತಿಗಳನ್ನು ಪಡೆದು ಪರೀಕ್ಷೆಗೆ ಹಾಜರಾಗಿ ಫಲಿತಾಂಶ ಪ್ರಕಟವಾದ ನಂತರ, ಮಂಡಳಿಯ ದಾಖಲೆ / ಅಂಕಪಟ್ಟಿಯಲ್ಲಿ ದೈಹಿಕ ಸ್ಥಿತಿಯನ್ನು (Physical condition) ಬದಲಾಯಿಸಲು ಅವಕಾಶವಿರುವುದಿಲ್ಲ.**

# XI. ಭಾಷಾ ಸಂಯೋಜನೆ:

1. ಅಭ್ಯರ್ಥಿಗಳು ತೆಗೆದುಕೊಳ್ಳಬೇಕಾದ ಪ್ರಥಮ, ದ್ವಿತೀಯ ಮತ್ತು ತೃತೀಯ ಭಾಷೆಗಳ ಸಂಯೋಜನೆ ಬಗ್ಗೆ ಪರಿಪೂರ್ಣ ವಿವರಣೆಗಳನ್ನು 1999–2000 ರಿಂದ ಜಾರಿಗೊಂಡ ಪರಿಷ್ಕೃತ ಪಠ್ಯವಸ್ತುವಿನಲ್ಲಿ ವಿವರಿಸಲಾಗಿದೆ. ಆ ಕೋಷ್ಠಕದಂತೆ ಭಾಷಾ ಸಂಯೋಜನೆಯನ್ನು ರಾಜ್ಯದ ಭಾಷಾ ನೀತಿಯಂತೆ ಕಡ್ಡಾಯವಾಗಿ ತೆಗೆದುಕೊಂಡಿರಬೇಕು. ಆಯ್ಕೆ ಮಾಡಿಕೊಂಡಿರುವ ಭಾಷಾ ಸಂಯೋಜನೆ ಶಾಲೆಯಲ್ಲಿ ಬೋಧಿಸುತ್ತಿರುವ ಪಠ್ಯಕ್ರಮಕ್ಕೆ ಪೂರಕವಾಗಿರಬೇಕು. ಇದಕ್ಕೆ ಯಾವುದೇ ವಿನಾಯಿತಿ ನೀಡುವ ಪ್ರಶ್ನೆ ಬರುವುದಿಲ್ಲ. (ಭಾಷಾ ಸಂಯೋಜನೆ ವಿವರಗಳನ್ನು ಅನುಬಂಧ–4 ರಲ್ಲಿ ವಿವರಿಸಲಾಗಿದೆ.) **ಈ ಭಾಷಾ ಸಂಯೋಜನೆಯನ್ನು ಮುಖ್ಯಶಿಕ್ಷಕರು ಅತಿ ಎಚ್ಚರಿಕೆಯಿಂದ ಸಂಯೋಜನೆ ಮಾಡಿ ಮಂಡಳಿಯ ಜಾಲತಾಣದ ಶಾಲಾ ಲಾಗಿನ್‌ನಲ್ಲಿ ನಮೂದು ಮಾಡುವುದು. ಈ ರೀತಿ ನಿಯಮಬದ್ಧವಾಗಿ ಮಾಡದೇ ಇರುವ ಮುಖ್ಯಶಿಕ್ಷಕರ ವಿರುದ್ಧ ಸೂಕ್ತಕ್ರಮ ಜರುಗಿಸಲಾಗುವುದು.**

2. **"ಪರೀಕ್ಷಾ ಮಂಡಳಿಯಿಂದ ಪ್ರವೇಶ ಪತ್ರಗಳನ್ನು ವಿತರಿಸಿದ ನಂತರ ವಿದ್ಯಾರ್ಥಿಯ ಭಾಷಾ ಸಂಯೋಜನೆಯಲ್ಲಾಗಲಿ ಅಥವಾ ಮಾಧ್ಯಮದಲ್ಲಾಗಲಿ, ಶಾಲಾ ಹಂತದಲ್ಲಿ ಅಥವಾ ಪರೀಕ್ಷಾ ಕೇಂದ್ರದಲ್ಲಿ ಬದಲಾವಣೆ ಮಾಡಲು ಅವಕಾಶವಿಲ್ಲ".** ಆದರೆ ಹಿಂದಿನ ವರ್ಷಗಳಲ್ಲಿ ಕೆಲವು ಶಾಲಾ ಶಿಕ್ಷಕರು ಹಾಗೂ ಪರೀಕ್ಷಾ ಕೇಂದ್ರದ ಮುಖ್ಯಸ್ಥರು ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯ ಅನುಮತಿ ಪಡೆಯದೇ ಭಾಷಾ ವಿಷಯಗಳನ್ನು ಮತ್ತು ಮಾಧ್ಯಮವನ್ನು ಅವರ ಹಂತದಲ್ಲೇ ಬದಲಾವಣೆ ಮಾಡಿರುವ ಪ್ರಕರಣಗಳು ಕಂಡುಬಂದಿದೆ. ಈ ಕ್ರಮ ಸರಿಯಲ್ಲ ಆದ್ದರಿಂದ ಪರೀಕ್ಷಾ ಮಂಡಳಿಯಿಂದ ಒಮ್ಮೆ ಪ್ರವೇಶಪತ್ರ ವಿತರಣೆಯಾದ ನಂತರ ಶಾಲಾ ಶಿಕ್ಷಕರು ಅಥವಾ ಪರೀಕ್ಷಾ ಕೇಂದ್ರದ ಅಧೀಕ್ಷಕರು ತಮ್ಮ ಹಂತದಲ್ಲೇ ಯಾವುದಾದರೂ ಬದಲಾವಣೆ ಮಾಡಿದ್ದಲ್ಲಿ ಅಂತಹ ಶಾಲಾ ಶಿಕ್ಷಕರು ಹಾಗೂ ಕೇಂದ್ರದ ಮುಖ್ಯಸ್ಥರ ವಿರುದ್ಧ ನಿಯಮದಂತೆ ಶಿಸ್ತುಕ್ರಮ ಜರುಗಿಸಲಾಗುವುದು ಮತ್ತು ಸಂಬಂಧಪಟ್ಟ ವಿದ್ಯಾರ್ಥಿಯ ಪರೀಕ್ಷಾ ಫಲಿತಾಂಶವನ್ನು ತಡೆಹಿಡಿಯಲಾಗುವುದು.

3. ಕ್ಲಸ್ಟರ್ ಪರೀಕ್ಷಾ ಕೇಂದ್ರಗಳ ವಿಧಾನವು ಈ ವರ್ಷವೂ ಮುಂದುವರಿಯುತ್ತದೆ.

# XII. ಮಕ್ಕಳ ಹಾಜರಾತಿ:–

ಮಂಡಳಿಯ ಕಾಯ್ದೆ–1966 ನಿಯಮ–37 ರನ್ವಯ, ವಿದ್ಯಾರ್ಥಿಗಳು ಎಸ್.ಎಸ್.ಎಲ್.ಸಿ ಪರೀಕ್ಷೆಗೆ ಕುಳಿತುಕೊಳ್ಳಲು ಶಾಲೆಯು ಕಾರ್ಯ ನಿರ್ವಹಿಸಲು ನಿಗದಿಪಡಿಸಿರುವ ದಿನಗಳಿಗೆ ಅನುಸಾರ ಕನಿಷ್ಠ ಶೇ.75ರಷ್ಟು ಹಾಜರಾತಿ ಕಡ್ಡಾಯವಾಗಿರುತ್ತದೆ.

ಆದರೆ, ಕೋವಿಡ್–19ರ ಹಿನ್ನೆಲೆಯಲ್ಲಿ 2020–21 ಮತ್ತು 2021–22ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ಹಾಜರಾಗುವ ಶಾಲಾ ವಿದ್ಯಾರ್ಥಿಗಳಿಗೆ ಕನಿಷ್ಠ ಹಾಜರಾತಿಯಿಂದ ವಿನಾಯಿತಿ ನೀಡಿ ಪರೀಕ್ಷೆಗೆ ಹಾಜರಾಗಲು ಅನುಮತಿ ನೀಡಲಾಗಿತ್ತು.

ಪ್ರಸ್ತುತ 2022–23ನೇ ಶೈಕ್ಷಣಿಕ ವರ್ಷಕ್ಕೆ ದಿನಾಂಕ:16.05.2022ರಿಂದಲೇ ಪೂರ್ಣ ಪ್ರಮಾಣದಲ್ಲಿ ಶಾಲೆಗಳು ಭೌತಿಕವಾಗಿ ಪ್ರಾರಂಭಿಸಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಈ ಕಛೇರಿ ಸುತ್ತೋಲೆ ಸಂಖ್ಯೆ:ಎ8/ಎಸ್‌ಎಸ್‌ಎಲ್‌ಸಿ/ಹಾ.ಕ–23/10/2022–23 ದಿನಾಂಕ:30.06.2022ರಲ್ಲಿ ಮಂಡಳಿಯ ಕಾಯ್ದೆ–1966 ನಿಯಮ–37 ರನ್ವಯ, 2022–23ನೇ ಸಾಲಿನಿಂದ ಶಾಲಾ ವಿದ್ಯಾರ್ಥಿಗಳಾಗಿ ಎಸ್.ಎಸ್.ಎಲ್.ಸಿ ಪರೀಕ್ಷೆಗೆ ಕುಳಿತುಕೊಳ್ಳಲು ಶಾಲೆಯು ಕಾರ್ಯ ನಿರ್ವಹಿಸಲು ನಿಗದಿಪಡಿಸಿರುವ ದಿನಗಳಿಗೆ ಅನುಸಾರ ಕನಿಷ್ಠ ಶೇ.75ರಷ್ಟು ಹಾಜರಾತಿ ಕಡ್ಡಾಯಗೊಳಿಸಿರುವುದನ್ನು ಯಥಾ ರೀತಿ ಮುಂದುವರೆಸಿದೆ.

ಮಂಡಳಿಯ ಕಾಯ್ದೆ–1966 ನಿಯಮ–37 ರನ್ವಯ, ವಿದ್ಯಾರ್ಥಿಗಳು ಪರೀಕ್ಷೆಗೆ ಕುಳಿತುಕೊಳ್ಳಲು 2022–23ನೇ ಸಾಲಿನಲ್ಲಿ ಶಾಲೆಯು ಕಾರ್ಯ ನಿರ್ವಹಿಸಲು ನಿಗದಿಪಡಿಸಿರುವ ದಿನಗಳಿಗೆ ಅನುಸಾರ ಕನಿಷ್ಠ ಶೇ.75ರಷ್ಟು ಹಾಜರಾತಿ ಕಡ್ಡಾಯ. ಪರೀಕ್ಷಾ ಮಂಡಳಿಯ ನಿಯಮ–1966 ಚಾಪ್ಟರ್–VI ನಿಯಮ–37(2)(i) ರಂತೆ 15 ದಿನಗಳವರೆಗೆ ಹಾಜರಾತಿ ವಿನಾಯಿತಿ ನೀಡಲು ಸಂಬಂಧಪಟ್ಟ ಶಾಲಾ ಮುಖ್ಯೋಪಾಧ್ಯಾಯರುಗಳು ಸಕ್ಷಮ ಪ್ರಾಧಿಕಾರಿಗಳಾಗಿರುತ್ತಾರೆ. ಮಂಡಳಿಯ ನಿಯಮ–1966 ಚಾಪ್ಟರ್–VI ನಿಯಮ37(2)(ii) ರಂತೆ 15 ದಿನಗಳಿಗೂ ಮೇಲ್ಪಟ್ಟು 30 ದಿನಗಳವರೆಗೆ ಹಾಜರಾತಿ

ವಿನಾಯಿತಿ ಪ್ರಸ್ತಾವನೆಯನ್ನು ಮಂಡಳಿಗೆ ಸಲ್ಲಿಸಿ ಅನುಮತಿ ಪಡೆಯಬೇಕಾಗಿರುತ್ತದೆ. 30ಕ್ಕೂ ಹೆಚ್ಚು ದಿನಗಳ ಹಾಜರಾತಿ ಕೊರತೆ ಇದ್ದಲ್ಲಿ ಪರೀಕ್ಷೆಗೆ ಕುಳಿತುಕೊಳ್ಳಲು ಅವಕಾಶವಿರುವುದಿಲ್ಲ. ಅಂತಹ ಪ್ರವೇಶ ಪತ್ರಗಳನ್ನು ಮಂಡಳಿಗೆ ಹಿಂದಿರುಗಿಸುವುದು ಮುಖ್ಯ ಶಿಕ್ಷಕರ ಕರ್ತವ್ಯವಾಗಿರುತ್ತದೆ.

ವೈದ್ಯಕೀಯ ಪ್ರಮಾಣಪತ್ರದ ಆಧಾರದ ಮೇಲೆ 30 ದಿನಗಳಿಗೂ ಮೀರಿದ ಅವಧಿಗೆ ಹಾಜರಾತಿ ವಿನಾಯಿತಿ ನೀಡುವ ಪ್ರಸ್ತಾವನೆಗಳು ಬಂದಿರುವುದನ್ನು ಮಂಡಳಿ ಗಮನಿಸಿದೆ. ಆದರೆ ಯಾವುದೇ ಸಂದರ್ಭದಲ್ಲಿಯೂ 30 ದಿನಗಳಿಗೆ ಮೀರಿದ ಹಾಜರಾತಿ ಕೊರತೆಯ ಅವಧಿಯನ್ನು ಮನ್ನಾ ಮಾಡಲು ಅವಕಾಶವಿರುವುದಿಲ್ಲವೆಂದು ಮತ್ತೊಮ್ಮೆ ಸ್ಪಷ್ಟಪಡಿಸಲಾಗಿದೆ. ಆದ್ದರಿಂದ ಮುಖ್ಯ ಶಿಕ್ಷಕರು ಸಹ ಇದನ್ನು ಗಮನದಲ್ಲಿಟ್ಟುಕೊಂಡು ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಈ ಮೂಲಕ ತಿಳಿಸಲಾಗಿದೆ.

ಇಂತಹ ಪ್ರಸ್ತಾವನೆಗಳನ್ನು ಶಾಲಾ ಮುಖ್ಯಶಿಕ್ಷಕರು ಮಂಡಳಿಗೆ ಸಲ್ಲಿಸಬಾರದಾಗಿ ತಿಳಿಸಿದೆ. ನಿಯಮ ಪ್ರಕಾರ ಹಾಜರಾತಿ ಕೊರತೆ ಇರುವ ವಿದ್ಯಾರ್ಥಿಗಳಿಗೆ ಪರೀಕ್ಷೆ ತೆಗೆದುಕೊಳ್ಳಲು ಅವಕಾಶವಿರುವುದಿಲ್ಲ. ಈ ಬಗ್ಗೆ ನಿಯಮ ಮೀರಿ ಅನುಮತಿ ನೀಡಲು ಯಾರಿಗೂ ಅಧಿಕಾರವಿರುವುದಿಲ್ಲ. ಮಂಡಳಿಗೆ ಪ್ರವೇಶ ಪತ್ರಗಳನ್ನು ಹಾಜರಾತಿ ಕೊರತೆಯಿಂದ ಹಿಂದಿರುಗಿಸಿರುವ ಪ್ರಕರಣಗಳಲ್ಲಿ ಕೆಲವು ಮುಖ್ಯ ಶಿಕ್ಷಕರು ಸ್ಥಳೀಯ ಒತ್ತಡಗಳಿಗೆ ಮಣಿದು ಮತ್ತೊಂದು ಪ್ರತಿಯ ಮೇಲೆ ಪರೀಕ್ಷೆ ತೆಗೆದುಕೊಳ್ಳಲು ಅನುಮತಿಸಿರುವ ಪ್ರಕರಣಗಳು ಈ ಹಿಂದೆ ಕಂಡುಬಂದಿದ್ದು, ಅಂತಹ ಮುಖ್ಯ ಶಿಕ್ಷಕರ ಮೇಲೆ ಶಿಸ್ತುಪ್ರಕರಣ ಹೂಡಲಾಗಿರುತ್ತದೆ. ಆದ್ದರಿಂದ ಇಂತಹ ಪ್ರಕರಣಗಳು ಮರುಕಳಿಸದಂತೆ ಮುಖ್ಯ ಶಿಕ್ಷಕರು ಎಚ್ಚರಿಕೆ ವಹಿಸುವುದು.

2023ರ ಮಾರ್ಚ್/ಏಪ್ರಿಲ್ ಮಾಹೆಯ ಎಸ್.ಎಸ್.ಎಲ್.ಸಿ ಪರೀಕ್ಷೆ ಪ್ರಾರಂಭ ದಿನಾಂಕದವರೆಗೆ ಹಾಜರಾತಿಯ ಲೆಕ್ಕಾಚಾರ ಮಾಡಿಕೊಳ್ಳಬಹುದಾಗಿದೆ.

## XIII. ಆಂತರಿಕ ಮೌಲ್ಯಮಾಪನದ ಅಂಕಗಳ ನಮೂದು:-

1. ಆಂತರಿಕ ಮೌಲ್ಯಮಾಪನಕ್ಕೆ ಸಂಬಂಧಿಸಿದಂತೆ ಪ್ರಥಮ ಭಾಷೆಗೆ 25 ಅಂಕಗಳಿಗೆ ಹಾಗೂ ಉಳಿದ ಐದು ವಿಷಯಗಳಿಗೆ 20 ಅಂಕಗಳಿಗೆ ಪರಿವರ್ತಿಸಿ ಅಂಕಗಳನ್ನು ಜಾಲತಾಣದ ಮುಖಾಂತರ ಭರ್ತಿ ಮಾಡಲಾಗಿದೆಯೇ ಎಂಬುದನ್ನು ಆಯಾ ವಿಷಯದ ಶಿಕ್ಷಕರು ಹಾಗೂ ಮುಖ್ಯ ಶಿಕ್ಷಕರು ದೃಢೀಕರಿಸಿಕೊಳ್ಳುವುದು.

2. ಆಂತರಿಕ ಮೌಲ್ಯಮಾಪನದ ಅಂಕಗಳನ್ನು ಒಮ್ಮೆ ಜಾಲತಾಣದ ಮುಖಾಂತರ ಸಲ್ಲಿಸಿದ ನಂತರ ಪರಿಷ್ಕರಿಸಲು ಅವಕಾಶವಿರುವುದಿಲ್ಲ. ಒಂದು ವೇಳೆ ತಪ್ಪಾಗಿ ನಮೂದಿಸಿದಲ್ಲಿ ಮುಂದಿನ ಆಗುಹೋಗುಗಳಿಗೆ ಸಂಬಂಧಿಸಿದ ಶಾಲಾ ಮುಖ್ಯ ಶಿಕ್ಷಕರೇ ನೇರ ಹೊಣೆಗಾರರಾಗುತ್ತಾರೆ.

3. ಎಲ್ಲಾ ಆರು ವಿಷಯಗಳ ಆಂತರಿಕ ಮೌಲ್ಯಮಾಪನದ ಅಂಕಗಳನ್ನು ಕಡ್ಡಾಯವಾಗಿ ನಮೂದಿಸಿರಬೇಕು. ಭಾಗಶಃ ವಿಷಯಗಳಿಗೆ ಆಂತರಿಕ ಮೌಲ್ಯಮಾಪನದ ಅಂಕಗಳನ್ನು ನಮೂದಿಸಿ ದೃಢೀಕರಿಸುವುದನ್ನು ಪರಿಗಣಿಸಲಾಗುವುದಿಲ್ಲ. (ಉದಾ: 06 ವಿಷಯಗಳ ಪೈಕಿ 03 ಅಥವಾ 04 ವಿಷಯಗಳಿಗೆ ನಮೂದಿಸುವುದು) ಅಂದರೆ ಓರ್ವ ವಿದ್ಯಾರ್ಥಿ ಆರೂ ವಿಷಯಗಳಲ್ಲೂ ಗಳಿಸಿದ ಆಂತರಿಕ ಮೌಲ್ಯಮಾಪನದ ಅಂಕಗಳನ್ನು ಮತ್ತು ಭಾಗ-ಬಿ ವಿಷಯಗಳಲ್ಲಿ ಗಳಿಸಿದ ಗ್ರೇಡ್‌ಗಳನ್ನು ಜಾಲತಾಣದ ಮೂಲಕ ನಮೂದಿಸುವುದು ಕಡ್ಡಾಯ.

4. ವಿದ್ಯಾರ್ಥಿಯು ಶೇ.75 ರಷ್ಟು ಹಾಜರಾತಿ ಪಡೆಯುವುದು ಕಡ್ಡಾಯ. ಹಾಜರಾತಿ ಕೊರತೆ ಇರುವ ವಿದ್ಯಾರ್ಥಿಯು ಆಂತರಿಕ ಮೌಲ್ಯಮಾಪನ ಮತ್ತು ಮಂಡಳಿಯು ನಡೆಸುವ ಬಾಹ್ಯ ಪರೀಕ್ಷೆಗೆ ಹಾಜರಾಗಲು ಅರ್ಹರಿರುವುದಿಲ್ಲ. ಉದಾ:ಸಿ.ಸಿ.ಇ. ಪದ್ಧತಿಯಲ್ಲಿನ ರೂಪಣಾತ್ಮಕ ಮೌಲ್ಯಮಾಪನದಲ್ಲಿ ಎಫ್.ಎ.-1, ಎಫ್.ಎ.-2 ಮೌಲ್ಯಮಾಪನ ಪರೀಕ್ಷೆಗಳಿಗೆ ಹಾಜರಾಗಿದ್ದು, ಉಳಿದ ಅವಧಿಗೆ ಗೈರು ಹಾಜರಾಗಿ ಹಾಜರಾತಿ ಕೊರತೆ ಇದ್ದಲ್ಲಿ, ಎಫ್.ಎ.-1, ಮತ್ತು ಎಫ್.ಎ.-2 ಮೌಲ್ಯಮಾಪನಗಳಲ್ಲಿ ಗಳಿಸಿದ ಅಂಕಗಳನ್ನು ಆಂತರಿಕ ಮೌಲ್ಯಮಾಪನಕ್ಕೆ ಪರಿಗಣಿಸುವಂತಿಲ್ಲ.

5. FA1 ಮತ್ತು FA2 ಪರೀಕ್ಷೆಗೆ ಹಾಜರಾಗಿ, ಉಳಿದಂತೆ FA3 ಮತ್ತು FA4 ಪರೀಕ್ಷೆಗೆ ಗೈರುಹಾಜರಾಗಿದ್ದು, ವಿದ್ಯಾರ್ಥಿಯ ಹಾಜರಾತಿ ಶೇ.75 ಅಥವಾ ಅದಕ್ಕಿಂತ ಹೆಚ್ಚು ಇದ್ದು, ಶಾಲೆಗೆ ಅಂತಿಮ ದಿನಗಳಲ್ಲಿ ಹಾಜರಾಗದೇ ಇದ್ದಲ್ಲಿ ಅನಿವಾರ್ಯವಾಗಿ 02 ಆಂತರಿಕ ಮೌಲ್ಯಮಾಪನದ ಅಂಕಗಳನ್ನು ಪರಿಗಣಿಸಿ ಪೂರ್ಣ ಪ್ರಮಾಣದಲ್ಲಿ 200 ಅಂಕಗಳಿಗೆ ಪರಿಮಾಣಿಸಿ ಮಂಡಳಿ ಜಾಲತಾಣದ ಶಾಲಾಲಾಗಿನ್‌ನಲ್ಲಿ ಅಪ್‌ಲೋಡ್ ಮಾಡುವುದು.

6. FA1, FA2, FA3, ಹಾಗೂ FA4, ರೂಪಣಾತ್ಮಕ ಮೌಲ್ಯಮಾಪನಗಳಲ್ಲಿ ಯಾವುದಾದರು ಒಂದು ಅಥವಾ ಎರಡು(FA1, FA2, FA3, FA4) ಮೌಲ್ಯಮಾಪನಗಳಲ್ಲಿ ಗೈರುಹಾಜರಾಗಿದ್ದು, ವಿದ್ಯಾರ್ಥಿಯ ಹಾಜರಾತಿ ಶೇ.75 ಅಥವಾ ಅದಕ್ಕಿಂತ ಹೆಚ್ಚು ಇದ್ದಲ್ಲಿ, ವಿದ್ಯಾರ್ಥಿಯು ಶಾಲೆಗೆ ಹಾಜರಾದ ದಿನಗಳಲ್ಲಿ ಗೈರು ಹಾಜರಾದ ಚಟುವಟಿಕೆಗಳನ್ನು ವಿದ್ಯಾರ್ಥಿಗಳಿಗೆ ನೀಡಿ ಮೌಲ್ಯಮಾಪನ ಮಾಡಿ ಅಂಕಗಳನ್ನು ನೀಡುವುದು.

7. ರೂಪಣಾತ್ಮಕ ಮೌಲ್ಯಮಾಪನದ ಚಟುವಟಿಕೆಗಳಿಗೆ(FA-1 ರಿಂದ FA-4 ರವರೆಗೆ) ಹಾಜರಾತಿ ಕೊರತೆಯಿಂದ ಗೈರುಹಾಜರಾಗಿದ್ದಲ್ಲಿ, ಅಂತಹ ವಿದ್ಯಾರ್ಥಿಗಳು ಮಂಡಳಿ ನಡೆಸುವ ಬಾಹ್ಯ ಪರೀಕ್ಷೆಗೆ ಕುಳಿತುಕೊಳ್ಳಲು ಅರ್ಹರಿರುವುದಿಲ್ಲ.

8. ವಿದ್ಯಾರ್ಥಿಗಳ ಆಂತರಿಕ ಮೌಲ್ಯಮಾಪನದ ಅಂಕಗಳನ್ನು ಆನ್‌ಲೈನ್ ಮುಖಾಂತರ ನಮೂದು ಮಾಡುವ ಕುರಿತು ಪ್ರತ್ಯೇಕ ಸುತ್ತೋಲೆಯನ್ನು ಹೊರಡಿಸಲಾಗುವುದು.

## XIV. ಸತತ 6 ಪ್ರಯತ್ನಗಳು:–

1. ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯ ಅಧಿಸೂಚನೆ ಸಂಖ್ಯೆ:ಎ8/ಪು.ಆ.ಪ್ರ/13/2010–11, ದಿನಾಂಕ:18.03.2011 ರನ್ವಯ ಏಪ್ರಿಲ್–2011ರ ನಂತರ ಪರೀಕ್ಷೆ ತೆಗೆದುಕೊಂಡ ಶಾಲಾ ಹಾಗೂ ಪುನರಾವರ್ತಿತ ವಿದ್ಯಾರ್ಥಿಗಳು 6 ಸತತ ಪರೀಕ್ಷೆಗಳಲ್ಲಿ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ತೇರ್ಗಡೆ ಹೊಂದಬೇಕು. ಇಲ್ಲವಾದಲ್ಲಿ ನಂತರದ ಪ್ರಯತ್ನದಲ್ಲಿ ಖಾಸಗಿ ಅಭ್ಯರ್ಥಿಯಾಗಿ ಎಲ್ಲಾ ವಿಷಯಗಳಲ್ಲಿಯೂ ಹೊಸದಾಗಿ ಪರೀಕ್ಷೆ ತೆಗೆದುಕೊಳ್ಳಬೇಕು. ವಿದ್ಯಾರ್ಥಿಗೆ ಸರ್ಕಾರ ಒದಗಿಸಿರುವ 06 ಸತತ ಪರೀಕ್ಷೆಗಳಲ್ಲಿ ವಿದ್ಯಾರ್ಥಿಯು ಸಕಾರಣಗಳಿಂದ ಯಾವುದಾದರೂ ಪರೀಕ್ಷೆ ತೆಗೆದುಕೊಳ್ಳದೆ ಇದ್ದಲ್ಲಿ ಆ ಪರೀಕ್ಷೆಯನ್ನು ಕೂಡ ಒಂದು ಪ್ರಯತ್ನ (Attempt) ಎಂದು ಗಣನೆಗೆ ತೆಗೆದುಕೊಳ್ಳಲಾಗುವುದು. ಜೂನ್–2020 ರ ಮುಖ್ಯ ಪರೀಕ್ಷೆ ತೆಗೆದುಕೊಂಡ ವಿದ್ಯಾರ್ಥಿಗಳಿಗೆ ಜೂನ್ 2022ರ ಪೂರಕ ಪರೀಕ್ಷೆಯು 6ನೇ ಪ್ರಯತ್ನವಾಗಿರುತ್ತದೆ.

2. ಏಪ್ರಿಲ್–2011 ಕ್ಕಿಂತ ಪೂರ್ವದ ಅವಧಿಗಳಲ್ಲಿ ನಡೆದ ಪರೀಕ್ಷೆಗಳಲ್ಲಿ ಅನುತ್ತೀರ್ಣರಾಗಿರುವ ವಿದ್ಯಾರ್ಥಿಗಳು ಪುನಃ ಪರೀಕ್ಷೆಗೆ ಕುಳಿತುಕೊಳ್ಳುವಲ್ಲಿ ಹಲವಾರು ಮುಖ್ಯಶಿಕ್ಷಕರುಗಳಲ್ಲಿ ಇನ್ನೂ ಗೊಂದಲಗಳಿರುವುದನ್ನು ಮಂಡಳಿ ಗಮನಿಸಿದೆ. ಇಂತಹ ಅಭ್ಯರ್ಥಿಗಳು 2011ರ ನಂತರ ಪರೀಕ್ಷೆಗೆ ಕುಳಿತ ಅವಧಿಯಿಂದ ಸತತ 06 ಪ್ರಯತ್ನಗಳ ವ್ಯಾಪ್ತಿಗೆ ಒಳಪಡುತ್ತಾರೆ.

**ಉದಾಹರಣೆ:–**

- ಏಪ್ರಿಲ್ 2008ರಲ್ಲಿ ಕುಳಿತಿದ್ದ ಓರ್ವ ಅಭ್ಯರ್ಥಿ ಏಪ್ರಿಲ್–2011ರ ಮುಖ್ಯ ಪರೀಕ್ಷೆಯಲ್ಲಿ ಕುಳಿತಿದ್ದಲ್ಲಿ ಜೂನ್ 2013ರ ಪೂರಕ ಪರೀಕ್ಷೆಯು ಅಂತಿಮ ಪ್ರಯತ್ನದ ಅವಧಿಯಾಗಿರುತ್ತದೆ.
- ಇದೇ ವಿದ್ಯಾರ್ಥಿ ಜೂನ್–2020ರ ಮುಖ್ಯ ಪರೀಕ್ಷೆಯಲ್ಲಿ ಕುಳಿತಿದ್ದಲ್ಲಿ ಜೂನ್–2022ರ ಪೂರಕ ಪರೀಕ್ಷೆಯ ಅವಧಿಯವರೆಗೂ ಕುಳಿತುಕೊಳ್ಳಲು ಅವಕಾಶವಿರುತ್ತದೆ.

| ಕ್ರಮ ಸಂಖ್ಯೆ | ಸತತ 6 ಪ್ರಯತ್ನಗಳನ್ನು ಪೂರೈಸಿರುವ ವಿವರಗಳು | |
|---|---|---|
| 01 | ಏಪ್ರಿಲ್–2011ರಲ್ಲಿ ಕುಳಿತ ವಿದ್ಯಾರ್ಥಿಗಳಿಗೆ | ಜೂನ್–2013ರ ಪೂರಕ ಪರೀಕ್ಷೆ ಅಂತಿಮ ಪ್ರಯತ್ನ (ಅವಧಿ ಮುಗಿದಿರುತ್ತದೆ) |
| 02 | ಜೂನ್–2011ರಲ್ಲಿ ಕುಳಿತ ವಿದ್ಯಾರ್ಥಿಗಳಿಗೆ | ಏಪ್ರಿಲ್–2014ರ ಪರೀಕ್ಷೆ ಅಂತಿಮ ಪ್ರಯತ್ನ (ಅವಧಿ ಮುಗಿದಿರುತ್ತದೆ) |
| 03 | ಏಪ್ರಿಲ್–2012ರಲ್ಲಿ ಕುಳಿತ ವಿದ್ಯಾರ್ಥಿಗಳಿಗೆ | ಜೂನ್–2014ರ ಪೂರಕ ಪರೀಕ್ಷೆ ಅಂತಿಮ ಪ್ರಯತ್ನ (ಅವಧಿ ಮುಗಿದಿರುತ್ತದೆ) |
| 04 | ಜೂನ್–2012ರಲ್ಲಿ ಕುಳಿತ ವಿದ್ಯಾರ್ಥಿಗಳಿಗೆ | ಏಪ್ರಿಲ್–2015ರ ಪರೀಕ್ಷೆ ಅಂತಿಮ ಪ್ರಯತ್ನ (ಅವಧಿ ಮುಗಿದಿರುತ್ತದೆ) |
| 05 | ಏಪ್ರಿಲ್–2013ರಲ್ಲಿ ಕುಳಿತ ವಿದ್ಯಾರ್ಥಿಗಳಿಗೆ | ಜೂನ್–2015ರ ಪೂರಕ ಪರೀಕ್ಷೆ ಅಂತಿಮ ಪ್ರಯತ್ನ (ಅವಧಿ ಮುಗಿದಿರುತ್ತದೆ) |

| | | |
|---|---|---|
| 06 | ಜೂನ್-2013ರಲ್ಲಿ ಕುಳಿತ ವಿದ್ಯಾರ್ಥಿಗಳಿಗೆ | ಏಪ್ರಿಲ್-2016ರ ಪರೀಕ್ಷೆ ಅಂತಿಮ ಪ್ರಯತ್ನ (ಅವಧಿ ಮುಗಿದಿರುತ್ತದೆ) |
| 07 | ಏಪ್ರಿಲ್-2014ರಲ್ಲಿ ಕುಳಿತ ವಿದ್ಯಾರ್ಥಿಗಳಿಗೆ | ಜೂನ್-2016ರ ಪೂರಕ ಪರೀಕ್ಷೆ ಅಂತಿಮ ಪ್ರಯತ್ನ (ಅವಧಿ ಮುಗಿದಿರುತ್ತದೆ) |
| 08 | ಜೂನ್-2014ರಲ್ಲಿ ಕುಳಿತ ವಿದ್ಯಾರ್ಥಿಗಳಿಗೆ | ಏಪ್ರಿಲ್-2017ರ ಪರೀಕ್ಷೆ ಅಂತಿಮ ಪ್ರಯತ್ನ (ಅವಧಿ ಮುಗಿದಿರುತ್ತದೆ) |
| 09 | ಏಪ್ರಿಲ್-2015ರಲ್ಲಿ ಕುಳಿತ ವಿದ್ಯಾರ್ಥಿಗಳಿಗೆ | ಜೂನ್-2017ರ ಪೂರಕ ಪರೀಕ್ಷೆ ಅಂತಿಮ ಪ್ರಯತ್ನ (ಅವಧಿ ಮುಗಿದಿರುತ್ತದೆ) |
| 10 | ಜೂನ್-2015ರಲ್ಲಿ ಕುಳಿತ ವಿದ್ಯಾರ್ಥಿಗಳಿಗೆ | ಏಪ್ರಿಲ್-2018ರ ಪರೀಕ್ಷೆ ಅಂತಿಮ ಪ್ರಯತ್ನ (ಅವಧಿ ಮುಗಿದಿರುತ್ತದೆ) |
| 11 | ಏಪ್ರಿಲ್-2016ರಲ್ಲಿ ಕುಳಿತ ವಿದ್ಯಾರ್ಥಿಗಳಿಗೆ | ಜೂನ್-2018ರ ಪೂರಕ ಪರೀಕ್ಷೆ ಅಂತಿಮ ಪ್ರಯತ್ನ (ಅವಧಿ ಮುಗಿದಿರುತ್ತದೆ) |
| 12 | ಜೂನ್-2016ರಲ್ಲಿ ಕುಳಿತ ವಿದ್ಯಾರ್ಥಿಗಳಿಗೆ | ಏಪ್ರಿಲ್-2019ರ ಪರೀಕ್ಷೆ ಅಂತಿಮ ಪ್ರಯತ್ನ (ಅವಧಿ ಮುಗಿದಿರುತ್ತದೆ) |
| 13 | ಏಪ್ರಿಲ್-2017ರಲ್ಲಿ ಕುಳಿತ ವಿದ್ಯಾರ್ಥಿಗಳಿಗೆ | ಜೂನ್-2019ರ ಪೂರಕ ಪರೀಕ್ಷೆ ಅಂತಿಮ ಪ್ರಯತ್ನ (ಅವಧಿ ಮುಗಿದಿರುತ್ತದೆ) |
| 14 | ಜೂನ್-2017ರಲ್ಲಿ ಕುಳಿತ ವಿದ್ಯಾರ್ಥಿಗಳಿಗೆ | ಜೂನ್/ಜುಲೈ-2020ರ ಮುಖ್ಯ ಪರೀಕ್ಷೆ ಅಂತಿಮ ಪ್ರಯತ್ನ (ಅವಧಿ ಮುಗಿದಿರುತ್ತದೆ) |
| 15 | ಏಪ್ರಿಲ್-2018ರಲ್ಲಿ ಕುಳಿತ ವಿದ್ಯಾರ್ಥಿಗಳಿಗೆ | ಸೆಪ್ಟೆಂಬರ್-2020ರ ಪೂರಕ ಪರೀಕ್ಷೆ ಅಂತಿಮ ಪ್ರಯತ್ನ (ಅವಧಿ ಮುಗಿದಿರುತ್ತದೆ) |
| 16 | ಜೂನ್-2018ರಲ್ಲಿ ಕುಳಿತ ವಿದ್ಯಾರ್ಥಿಗಳಿಗೆ | ಜೂನ್/ಜುಲೈ-2021ರ ಮುಖ್ಯ ಪರೀಕ್ಷೆ ಅಂತಿಮ ಪ್ರಯತ್ನ (ಅವಧಿ ಮುಗಿದಿರುತ್ತದೆ) |
| 17 | ಏಪ್ರಿಲ್-2019ರಲ್ಲಿ ಕುಳಿತ ವಿದ್ಯಾರ್ಥಿಗಳಿಗೆ | ಸೆಪ್ಟೆಂಬರ್-2021ರ ಪೂರಕ ಪರೀಕ್ಷೆ ಅಂತಿಮ ಪ್ರಯತ್ನ (ಅವಧಿ ಮುಗಿದಿರುತ್ತದೆ) |
| 18 | ಜೂನ್-2019ರ ಪೂರಕ ಪರೀಕ್ಷೆಗೆ ಕುಳಿತ ವಿದ್ಯಾರ್ಥಿಗಳಿಗೆ | ಏಪ್ರಿಲ್-2022ರ ಮುಖ್ಯ ಪರೀಕ್ಷೆ ಅಂತಿಮ ಪ್ರಯತ್ನ (ಅವಧಿ ಮುಗಿದಿರುತ್ತದೆ) |
| 19 | ಜೂನ್-2020ರ ಮುಖ್ಯ ಪರೀಕ್ಷೆಗೆ ಕುಳಿತ ವಿದ್ಯಾರ್ಥಿಗಳಿಗೆ | ಜೂನ್-2022ರ ಪೂರಕ ಪರೀಕ್ಷೆ ಅಂತಿಮ ಪ್ರಯತ್ನ (ಅವಧಿ ಮುಗಿದಿರುತ್ತದೆ) |
| 20 | ಸೆಪ್ಟೆಂಬರ್-2020ರ ಪೂರಕ ಪರೀಕ್ಷೆಗೆ ಕುಳಿತ ವಿದ್ಯಾರ್ಥಿಗಳಿಗೆ | ಏಪ್ರಿಲ್-2023ರ ಮುಖ್ಯ ಪರೀಕ್ಷೆ ಅಂತಿಮ ಪ್ರಯತ್ನ (ಅವಧಿ ಮುಗಿಯುತ್ತದೆ) |
| 21 | ಜೂನ್-2021ರ ಮುಖ್ಯ ಪರೀಕ್ಷೆಗೆ ನೋಂದಣಿ ಮಾಡಿರುವ ವಿದ್ಯಾರ್ಥಿಗಳಿಗೆ | • ಜೂನ್-2021ರಲ್ಲಿ ನಡೆದ ಮುಖ್ಯ ಪರೀಕ್ಷೆಗೆ ಹಾಜರಾದ ಎಲ್ಲಾ ವಿದ್ಯಾರ್ಥಿಗಳು ಉತ್ತೀರ್ಣರಾಗಿರುತ್ತಾರೆ.<br>• ಸರ್ಕಾರದ ಆದೇಶದನ್ವಯ ಪರೀಕ್ಷೆಗೆ ನೋಂದಾಯಿಸಿಕೊಂಡು ಕೋವಿಡ್-19 ಅಥವಾ ಇತರೆ ಅನಾರೋಗ್ಯ ಕಾರಣದಿಂದಾಗಿ ಈ ಪರೀಕ್ಷೆಗೆ ಗೈರುಹಾಜರಾಗಿದ್ದ ಶಾಲಾ ಮತ್ತು ಖಾಸಗಿ ಅಭ್ಯರ್ಥಿಗಳಿಗೆ (CCERF & CCEPF) ಸೆಪ್ಟಂಬರ್-2021ರ ಪೂರಕ ಪರೀಕ್ಷೆಯಲ್ಲಿ ಇದನ್ನು "ಪ್ರಥಮ ಅವಕಾಶ" ಎಂದು ಪರಿಗಣಿಸಲಾಗಿದೆ.<br>• ಸರ್ಕಾರದ ಆದೇಶದನ್ವಯ ಪರೀಕ್ಷೆಗೆ ನೋಂದಾಯಿಸಿಕೊಂಡು ಕೋವಿಡ್-19 ಅಥವಾ ಇತರೆ ಅನಾರೋಗ್ಯ ಕಾರಣದಿಂದಾಗಿ ಈ ಪರೀಕ್ಷೆಗೆ ಗೈರುಹಾಜರಾಗಿದ್ದ ಪುನರಾವರ್ತಿತ ಅಭ್ಯರ್ಥಿಗಳಿಗೆ 06 ಪ್ರಯತ್ನಗಳ ಲೆಕ್ಕಾಚಾರದಿಂದ ಈ ಪರೀಕ್ಷೆಯ ಒಂದು ಪ್ರಯತ್ನವನ್ನು ಕೈಬಿಡಲಾಗಿದೆ. |

| | | |
|---|---|---|
| 22 | ಸೆಪ್ಟಂಬರ್–2021ರ ಪೂರಕ ಪರೀಕ್ಷೆಗೆ ಕುಳಿತ ವಿದ್ಯಾರ್ಥಿಗಳಿಗೆ | ಏಪ್ರಿಲ್–2024ರ ಮುಖ್ಯ ಪರೀಕ್ಷೆ ಅಂತಿಮ ಪ್ರಯತ್ನ (ಅವಧಿ ಮುಗಿಯುತ್ತದೆ) |
| 23 | ಏಪ್ರಿಲ್–2022ರಲ್ಲಿ ಕುಳಿತ ವಿದ್ಯಾರ್ಥಿಗಳಿಗೆ | ಜೂನ್–2024ರ ಪೂರಕ ಪರೀಕ್ಷೆ ಅಂತಿಮ ಪ್ರಯತ್ನ (ಅವಧಿ ಮುಗಿಯುತ್ತದೆ) |
| 24 | ಜೂನ್–2022ರ ಪೂರಕ ಪರೀಕ್ಷೆಗೆ ಕುಳಿತ ವಿದ್ಯಾರ್ಥಿಗಳಿಗೆ | ಏಪ್ರಿಲ್–2025ರ ಮುಖ್ಯ ಪರೀಕ್ಷೆ ಅಂತಿಮ ಪ್ರಯತ್ನ (ಅವಧಿ ಮುಗಿಯುತ್ತದೆ) |

ಮೇಲ್ಕಂಡ ಕ್ರಮ ಸಂಖ್ಯೆ: 01 ರಿಂದ 19ರ ವರೆಗಿನ ಅವಧಿಯ ಅಭ್ಯರ್ಥಿಗಳಿಗೆ ಅಂತಿಮ ಪ್ರಯತ್ನ ಮುಗಿದಿರುತ್ತದೆ.

**ವಿಶೇಷ ಸೂಚನೆ:–** ಮೇಲೆ ವಿವರಿಸಿದಂತೆ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಕುಳಿತ ವಿದ್ಯಾರ್ಥಿಗಳು ಸತತ 06 ಪ್ರಯತ್ನಗಳ ಅವಧಿಯ ಪರೀಕ್ಷೆಯಲ್ಲಿ ಅನುತ್ತೀರ್ಣನಾಗಿದ್ದರೆ, ಇಂತಹ ವಿದ್ಯಾರ್ಥಿಯು ತೇರ್ಗಡೆ ಹೊಂದಿದ್ದ ವಿಷಯಗಳನ್ನು ಸಹ ಪರಿಗಣಿಸಲಾಗುವುದಿಲ್ಲ. ಈ ವಿದ್ಯಾರ್ಥಿಗಳು ಮಾರ್ಚ್/ಏಪ್ರಿಲ್–2023ರ ಮುಖ್ಯ ಪರೀಕ್ಷೆಗೆ ಹೊಸದಾಗಿ ಎಲ್ಲಾ 06 ವಿಷಯಗಳನ್ನು ತೆಗೆದುಕೊಳ್ಳಬೇಕು ಹಾಗೂ ಖಾಸಗಿ ಅಭ್ಯರ್ಥಿಯಾಗಿ ಪರೀಕ್ಷೆಗೆ ಕುಳಿತುಕೊಳ್ಳಬೇಕಾಗುತ್ತದೆ. ಖಾಸಗಿ ವಿದ್ಯಾರ್ಥಿ ಪರೀಕ್ಷೆಗೆ ಕುಳಿತುಕೊಳ್ಳಲು ವಿಧಿಸಿರುವ ಷರತ್ತುಗಳನ್ನು ಪಾಲಿಸಬೇಕು.

## XV. 2011ಕ್ಕೂ ಹಿಂದಿನ ವರ್ಷಗಳಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ನೋಂದಾಯಿಸಿ ಅನುತ್ತೀರ್ಣರಾದ ಎಲ್ಲಾ ವಿಧದ ಪುನರಾವರ್ತಿತ ಅಭ್ಯರ್ಥಿಗಳಿಗೆ (NSR & NSPR) ಅಂತಿಮವಾಗಿ ಪರೀಕ್ಷೆಗೆ ನೋಂದಾಯಿಸಲು ಅವಧಿ ನಿಗದಿಪಡಿಸಿರುವ ಬಗ್ಗೆ:–

2011ಕ್ಕೂ ಹಿಂದಿನ ವರ್ಷಗಳಲ್ಲಿ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಅನುತ್ತೀರ್ಣರಾದ ಎಲ್ಲಾ ವಿಧದ ಪುನರಾವರ್ತಿತ (NSR & NSPR) ಅಭ್ಯರ್ಥಿಗಳು ಅನುತ್ತೀರ್ಣವಾಗಿ ಬಾಕಿ ಇರುವ ವಿಷಯಗಳಿಗೆ 2022ರ ವರ್ಷದ ಮುಖ್ಯ ಪರೀಕ್ಷೆಯಿಂದ ಸತತ ಆರು ಪ್ರಯತ್ನಗಳ ಅವಕಾಶ ನೀಡಿ 2024ರ ಪೂರಕ ಪರೀಕ್ಷೆವರೆಗೆ ಪರೀಕ್ಷೆ ತೆಗೆದುಕೊಂಡು ಉತ್ತೀರ್ಣರಾಗಲು ಅವಕಾಶ ಕಲ್ಪಿಸಲಾಗಿದೆ. ಈ ಅವಕಾಶದ ನಂತರವೂ ಅನುತ್ತೀರ್ಣರಾಗುವ ಅಭ್ಯರ್ಥಿಗಳು 2025ರ ಎಸ್.ಎಸ್.ಎಲ್.ಸಿ ಮುಖ್ಯ ಪರೀಕ್ಷೆಯಿಂದ ನಿಯಮಾನುಸಾರ ಹೊಸದಾಗಿ ಖಾಸಗಿ ಅಭ್ಯರ್ಥಿಯಾಗಿ ನೋಂದಾಯಿಸಿಕೊಂಡು ಎಲ್ಲಾ ವಿಷಯಗಳ ಪರೀಕ್ಷೆಯನ್ನು ತೆಗೆದುಕೊಳ್ಳತಕ್ಕದೆಂದು ಸರ್ಕಾರದ ಆದೇಶ ಸಂಖ್ಯೆ:ಇಪಿ 177 ಎಸ್‌ಎಲ್‌ಬಿ 2021 ದಿನಾಂಕ:06.12.2021ರಲ್ಲಿ ಆದೇಶಿಸಲಾಗಿದೆ. ಸದರಿ ಸರ್ಕಾರದ ಆದೇಶವನ್ನು ಮಂಡಳಿಯ ಜಾಲತಾಣದಲ್ಲಿ ಅಪ್‌ಲೋಡ್ ಮಾಡಲಾಗಿರುತ್ತದೆ. ಈ ಕುರಿತು ತಮ್ಮ ಸ್ಥಳೀಯ ಹಂತದಲ್ಲಿ ವ್ಯಾಪಕ ಪ್ರಚಾರ ನೀಡಿ ಸಂಬಂಧಪಟ್ಟ ಎಲ್ಲಾ ಅಭ್ಯರ್ಥಿಗಳ ಮತ್ತು ಪೋಷಕರ ಗಮನಕ್ಕೆ ತರುವುದು.

## XVI. ಫಲಿತಾಂಶ ಉತ್ತಮ ಪಡಿಸಿಕೊಳ್ಳುವಿಕೆ:–

1. ಮಂಡಳಿಯ ಕಾಯ್ದೆ ಅನುಬಂಧ–3ರ ನಿಯಮ 22ರನ್ವಯ ಎಸ್.ಎಸ್.ಎಲ್.ಸಿ ಪರೀಕ್ಷೆಗೆ ಹಾಜರಾಗಿ ನಿರೀಕ್ಷಿಸಿದ್ದ ಫಲಿತಾಂಶ ಬಾರದಿದ್ದ ಸಂದರ್ಭಗಳಲ್ಲಿ, ಫಲಿತಾಂಶವನ್ನು ಉತ್ತಮಪಡಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಈ ಸೌಲಭ್ಯ ಬಯಸುವ ವಿದ್ಯಾರ್ಥಿಗಳು ಎಸ್.ಎಸ್.ಎಲ್.ಸಿ ಪರೀಕ್ಷೆಯನ್ನು ಮೊದಲನೇ ಬಾರಿ ಎಲ್ಲಾ ವಿಷಯಗಳಲ್ಲಿ ತೇರ್ಗಡೆಹೊಂದಿದ್ದು, ತೇರ್ಗಡೆಯಾದ 02 ವರ್ಷಗಳ ಅವಧಿಯಲ್ಲಿ ಯಾವುದಾದರೂ ಒಂದು ವಿಷಯ ಅಥವಾ ಎಲ್ಲಾ ವಿಷಯಗಳಲ್ಲಿ ಫಲಿತಾಂಶ ಉತ್ತಮಪಡಿಸಿಕೊಳ್ಳಬಹುದಾಗಿದೆ. ತೇರ್ಗಡೆಯಾದ ವಿದ್ಯಾರ್ಥಿಗಳು ಮರು ಪ್ರಯತ್ನದಲ್ಲಿ ಮೊದಲನೆ ಪ್ರಯತ್ನದಲ್ಲಿನ ಅಂಕಗಳಿಗಿಂತ ಕಡಿಮೆ ಅಂಕಗಳಿಸಿದಲ್ಲಿ ಮೊದಲನೆ ಪ್ರಯತ್ನದಲ್ಲಿ ಗಳಿಸಿರುವ ಅಂಕಗಳನ್ನು ಉಳಿಸಿಕೊಳ್ಳಬಹುದಾಗಿದೆ.

2. ಅನುಸರಿಸಬೇಕಾದ ಕ್ರಮಗಳು:–
   - ಈ ಅಧಿಸೂಚನೆಯಲ್ಲಿರುವ ಅನುಬಂಧ–8 ರಲ್ಲಿರುವಂತೆ ಮುಖ್ಯಶಿಕ್ಷಕರ ಮುಖಾಂತರ ಮಂಡಳಿಗೆ ಮೂಲ ಅಂಕಪಟ್ಟಿಯೊಂದಿಗೆ ನಿಗದಿತ ಸಮಯದೊಳಗೆ ಅರ್ಜಿ ಸಲ್ಲಿಸಿ ಅನುಮತಿ ಪಡೆಯಬೇಕು.
   - ಮಂಡಳಿಯಿಂದ ಅನುಮತಿ ಪಡೆದು ನಿಗದಿತ ಸಮಯದೊಳಗೆ ಪರೀಕ್ಷಾ ಶುಲ್ಕ ಪಾವತಿಸಬೇಕು.

- ಹಿಂದೆ ವ್ಯಾಸಂಗ ಮಾಡಿದ ಶಾಲೆಯಿಂದಲೇ ಪರೀಕ್ಷಾ ಶುಲ್ಕ ಪಾವತಿಸಬೇಕು ಆ ಶಾಲೆಗೆ ನಿಗದಿಪಡಿಸಿದ ಪರೀಕ್ಷಾ ಕೇಂದ್ರದಲ್ಲಿಯೇ ಪರೀಕ್ಷೆಗೆ ಕುಳಿತುಕೊಳ್ಳಬೇಕು. ಪರೀಕ್ಷಾ ಕೇಂದ್ರ ಬದಲಾವಣೆಗೆ ಅವಕಾಶವಿರುವುದಿಲ್ಲ.
- ತಾನು ಯಾವುದೇ ಉನ್ನತ ವ್ಯಾಸಂಗವನ್ನು ಮುಂದುವರೆಸಿಲ್ಲ ಎಂಬ ಬಗ್ಗೆ ಮುಚ್ಚಳಿಕೆ ಪತ್ರ ಸಲ್ಲಿಸುವುದು.
- ಪ್ರಯತ್ನ ಪರೀಕ್ಷೆಯಲ್ಲಿ ಫಲಿತಾಂಶ ಉತ್ತಮವಾಗದಿದ್ದ ಪಕ್ಷದಲ್ಲಿ ಹಿಂದಿನ ಫಲಿತಾಂಶವನ್ನೇ ಪರಿಗಣಿಸಲಾಗುವುದು.
- ಅನುಮತಿ ಪತ್ರದೊಂದಿಗೆ ಪರೀಕ್ಷಾ ಶುಲ್ಕವನ್ನು ನಿಗದಿತ ಅವಧಿಯೊಳಗೆ ಮಂಡಳಿಗೆ ಸಲ್ಲಿಸುವುದು.

## XVII. ಕಿರಿಯ ತಾಂತ್ರಿಕ ಶಾಲೆಗಳು (Junior Technical Schools):-

1. ರಾಜ್ಯದ ಕೆಲವು ಅಧಿಕೃತ ಕಿರಿಯ ತಾಂತ್ರಿಕ ಶಾಲೆಗಳಲ್ಲಿ 10ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಸಾಮಾನ್ಯ ವಿಷಯಗಳ ಜೊತೆಗೆ 02 ತಾಂತ್ರಿಕ ವಿಷಯಗಳನ್ನು ಅಭ್ಯಾಸ ಮಾಡಿ ಪರೀಕ್ಷೆ ತೆಗೆದುಕೊಳ್ಳಬೇಕಾಗುತ್ತದೆ. 02 ತಾಂತ್ರಿಕ ವಿಷಯಗಳಲ್ಲಿ ಒಂದು ತಾತ್ವಿಕ (Theory) ಮತ್ತೊಂದು ಪ್ರಾಯೋಗಿಕ (Practical) ಪರೀಕ್ಷೆ ವಿಷಯವಾಗಿರುತ್ತದೆ. ಪರೀಕ್ಷೆಗೆ ಆಯ್ಕೆ ಮಾಡಿಕೊಳ್ಳಬೇಕಾಗಿರುವ ತಾಂತ್ರಿಕ ವಿಷಯಗಳ ವಿವರ ಕೆಳಕಂಡಂತಿದೆ.

| ಕ್ರಸಂ | ವಿಷಯ (Theory) | ವಿಷಯ ಸಂಕೇತ |
|---|---|---|
| 1 | Elements of Mechanical and Electrical Engineering -2 | 71 |
| 2 | Engineering Graphics-2 | 72 |
| 3 | Elements of Electronics | 73 |
| 4 | Elements of Computer Science | 74 |
| | Practicals | |
| 5 | Craft Technology | 77 |
| 6 | Electronics lab | 75 |
| 7 | Computer lab | 76 |

Elements of Mechanical and Electrical Engineering-2 ವಿಷಯ ಆಯ್ಕೆ ಮಾಡಿಕೊಂಡ ವಿದ್ಯಾರ್ಥಿ Engineering Graphics-2 ವಿಷಯವನ್ನು ಕಡ್ಡಾಯವಾಗಿ ತೆಗೆದುಕೊಳ್ಳಬೇಕಾಗುತ್ತದೆ ಹಾಗೂ ಪ್ರಾಯೋಗಿಕ ಪರೀಕ್ಷೆಗೆ Craft Technology ವಿಷಯವನ್ನು ಆಯ್ಕೆಮಾಡಿಕೊಂಡು ಪರೀಕ್ಷೆ ಬರೆಯುವುದು.

Elements of Electronics ಅಥವಾ Elements of Computer Science ವಿಷಯಗಳ ಪೈಕಿ ಯಾವುದಾದರೊಂದು ವಿಷಯವನ್ನು ತಾತ್ವಿಕ (Theory) ವಿಷಯವಾಗಿ ಆಯ್ಕೆ ಮಾಡಿಕೊಳ್ಳಬಹುದಾಗಿದೆ.ಆಯ್ಕೆ ಮಾಡಿಕೊಳ್ಳುವ ವಿಷಯಗಳು ಶಾಲೆಯಲ್ಲಿ ಬೋಧನೆ ಮಾಡುವ ಪಠ್ಯಕ್ರಮಕ್ಕೆ ಅನುಗುಣವಾಗಿರಬೇಕು ಹಾಗೂ ಪ್ರಾಯೋಗಿಕ ಪರೀಕ್ಷೆಗೆ Elements of Electronics ತಾತ್ವಿಕ (Theory) ವಿಷಯ ಆಯ್ಕೆ ಮಾಡಿಕೊಂಡಿದ್ದಲ್ಲಿ ಪ್ರಾಯೋಗಿಕ (Practical) ಪರೀಕ್ಷೆಯಲ್ಲಿ Electronics lab ಆಯ್ಕೆಮಾಡಿಕೊಂಡು ಪರೀಕ್ಷೆ ಬರೆಯುವುದು ಮತ್ತು Elements of Computer Science ತಾತ್ವಿಕ (Theory) ವಿಷಯ ಆಯ್ಕೆ ಮಾಡಿಕೊಂಡಿದ್ದಲ್ಲಿ ಪ್ರಾಯೋಗಿಕ (Practical) ಪರೀಕ್ಷೆಯಲ್ಲಿ Computer lab ಆಯ್ಕೆಮಾಡಿಕೊಂಡು ಪರೀಕ್ಷೆ ಬರೆಯುವುದು.

## XVIII. ಎನ್.ಎಸ್.ಕ್ಯೂ.ಎಫ್ ವಿಷಯದ ಕುರಿತು:-

ಎನ್.ಎಸ್.ಕ್ಯೂ.ಎಫ್. ಯೋಜನೆಯಡಿಯಲ್ಲಿ ತೃತೀಯ ಭಾಷೆಗೆ ವಿನಾಯಿತಿ ನೀಡಿ ವೃತ್ತಿಶಿಕ್ಷಣದ ವಿಷಯಗಳಾದ ಮಾಹಿತಿ ತಂತ್ರಜ್ಞಾನ, ರಿಟೇಲ್, ಆಟೋಮೊಟೀವ್, ಹೆಲ್ತ್ ಕೇರ್ ಹಾಗೂ ಬ್ಯೂಟಿ ಮತ್ತು ವೆಲ್‌ನೆಸ್ ಇವುಗಳಲ್ಲಿ ಯಾವುದಾದರೂ ಒಂದನ್ನು ಆಯ್ಕೆ ಮಾಡಿಕೊಂಡು ರಾಜ್ಯದ 150 ಸಂಯುಕ್ತ ಪದವಿ ಪೂರ್ವ ಕಾಲೇಜು (ಪ್ರೌಢಶಾಲಾ ವಿಭಾಗ)ಗಳಿಂದ ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗುವುದು.

10ನೇ ತರಗತಿಯಲ್ಲಿ ವೃತ್ತಿ ಶಿಕ್ಷಣ ವಿಷಯವನ್ನು ಆಯ್ಕೆ ಮಾಡಿಕೊಂಡ ವಿದ್ಯಾರ್ಥಿಗಳು ತೃತೀಯ ಭಾಷೆಯ ಬದಲು ಮಾಹಿತಿ ತಂತ್ರಜ್ಞಾನ, ರಿಟೇಲ್, ಆಟೋಮೊಟೀವ್, ಹೆಲ್ತ್ ಕೇರ್ ಹಾಗೂ ಬ್ಯೂಟಿ ಮತ್ತು ವೆಲ್‌ನೆಸ್ ಇವುಗಳಲ್ಲಿ ಹಾಗೂ ಕಾಲಕಾಲಕ್ಕೆ ಅಳವಡಿಸುವ ಒಂದು ಸೆಕ್ಟಾರ್‌ನ್ನು ಆಯ್ಕೆ ಮಾಡಿಕೊಳ್ಳಬಹುದಾಗಿದೆ. ವೃತ್ತಿ ಶಿಕ್ಷಣ ವಿಷಯವನ್ನು ಆಯ್ಕೆ ಮಾಡಿಕೊಂಡ ಅಭ್ಯರ್ಥಿಗಳಿಗೆ ತಾತ್ವಿಕ (Theory) ಪರೀಕ್ಷೆಯನ್ನು ಸಂಬಂಧಿಸಿದ ಪರೀಕ್ಷಾ ಮಂಡಳಿಯು ಹಾಗೂ ಪ್ರಾಯೋಗಿಕ ಪರೀಕ್ಷೆಯನ್ನು ಸೆಕ್ಟರ್ ಸ್ಕಿಲ್ ಕೌನ್ಸಿಲ್ ಸಂಸ್ಥೆಗಳ ಮೂಲಕ ನಡೆಸಲಾಗುವುದು.

ಎನ್.ಎಸ್.ಕ್ಯೂ.ಎಫ್ ವಿದ್ಯಾರ್ಥಿಗಳಿಗೆ ಸಂಬಂಧಿಸಿದಂತೆ ಪ್ರತ್ಯೇಕ ವಿವರವಾದ ಸುತ್ತೋಲೆಯನ್ನು ಮಂಡಳಿಯಿಂದ ಕಳುಹಿಸಲಾಗುವುದು.

## XIX. ಎಸ್‌ಎಸ್‌ಎಲ್‌ಸಿ ಪರೀಕ್ಷಾ ಪ್ರಶ್ನೆಪತ್ರಿಕೆ ಸ್ವರೂಪ ಮತ್ತು ಕಠಿಣತೆ ಮಟ್ಟದ ಕುರಿತು.

2022-23ನೇ ಶೈಕ್ಷಣಿಕ ವರ್ಷಕ್ಕೆ ದಿನಾಂಕ:16.05.2022ರಿಂದಲೇ ಪೂರ್ಣ ಪ್ರಮಾಣದಲ್ಲಿ ಶಾಲೆಗಳು ಭೌತಿಕವಾಗಿ ಪ್ರಾರಂಭಿಸಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಮಂಡಳಿಯ ಕಾಯ್ದೆ-1966 ನಿಯಮ-37 ರನ್ವಯ, 2022-23ನೇ ಸಾಲಿನಿಂದ ಶಾಲಾ ವಿದ್ಯಾರ್ಥಿಗಳಾಗಿ ಎಸ್.ಎಸ್.ಎಲ್.ಸಿ ಪರೀಕ್ಷೆಗೆ ಕುಳಿತುಕೊಳ್ಳಲು ಶಾಲೆಯು ಕಾರ್ಯ ನಿರ್ವಹಿಸಲು ನಿಗದಿಪಡಿಸಿರುವ ದಿನಗಳಿಗೆ ಅನುಸಾರ ಕನಿಷ್ಠ ಶೇ.75ರಷ್ಟು ಹಾಜರಾತಿ ಕಡ್ಡಾಯಗೊಳಿಸಿರುವುದನ್ನು ಯಥಾ ರೀತಿ ಮುಂದುವರೆಸಲಾಗಿರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ 2019-20ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯ ಪ್ರಶ್ನೆಪತ್ರಿಕೆ ಸ್ವರೂಪ ಮತ್ತು ಕಠಿಣತೆಯ ಮಟ್ಟವನ್ನು ಯಾವುದೇ ಬದಲಾವಣೆ ಮಾಡದೇ ಪ್ರಸಕ್ತ 2022-23ನೇ ಸಾಲಿನಿಂದ ಅದೇ ರೀತಿ ಮುಂದುವರೆಸಿದೆ.

## XX. ಪರೀಕ್ಷೆಗೆ ಸಂಬಂಧಿಸಿದಂತೆ ಉಪನಿರ್ದೇಶಕರು (ಆಡಳಿತ) ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಗಳು ತೆಗೆದುಕೊಳ್ಳಬೇಕಾದ ಸೂಕ್ತ ಕ್ರಮಗಳು:

1. ಕರ್ನಾಟಕ ಶಿಕ್ಷಣ ಕಾಯ್ದೆ 1983 ಸೆಕ್ಷನ್ 31ರ ಪ್ರಕಾರ ಪ್ರತಿಯೊಂದು ಪ್ರೌಢಶಾಲೆಯು ಬೋಧಿಸುವ ಮಾಧ್ಯಮಗಳಿಗನುಗುಣವಾಗಿ ಇಲಾಖೆಯ ಸಕ್ಷಮ ಪ್ರಾಧಿಕಾರದ ಅನುಮತಿ ಪಡೆಯುವುದು ಕಡ್ಡಾಯ. ಸಕ್ಷಮ ಪ್ರಾಧಿಕಾರವು ಅನುಮತಿ ನೀಡಿರುವ ಮಾಧ್ಯಮದಲ್ಲಿ ಮಾತ್ರ ಅಯಾ ಶಾಲೆಯ ರೆಗ್ಯೂಲರ್ ಶಾಲಾ ಮಕ್ಕಳನ್ನು ಎಸ್.ಎಸ್.ಎಲ್.ಸಿ ಪರೀಕ್ಷೆಗೆ ನೋಂದಾಯಿಸಲು ಅವಕಾಶವಿರುತ್ತದೆ.
2. ಕೆಲವು ಪ್ರೌಢಶಾಲೆಗಳು ಮಾನ್ಯತೆಯನ್ನು ಮತ್ತು ಬೋಧನಾ ಮಾಧ್ಯಮದ ಬಗ್ಗೆ ಇಲಾಖೆಯಿಂದ ಪೂರ್ವಾನುಮತಿ ಪಡೆಯದೆ ಮಂಡಳಿಗೆ ಪ್ರಸ್ತಾವನೆಗಳನ್ನು ಸಲ್ಲಿಸಿರುವುದನ್ನು ಗಮನಿಸಲಾಗಿದೆ. ಇಂತಹ ಪ್ರಸ್ತಾವನೆಗಳನ್ನು ಮಂಡಳಿಯು ಪುರಸ್ಕರಿಸುವುದಿಲ್ಲ. ಇದರಿಂದಾಗಿ ವಿದ್ಯಾರ್ಥಿಗಳ ಶೈಕ್ಷಣಿಕ ಚಟುವಟಿಕೆಗಳ ಮೇಲೆ ಗಂಭೀರ ಪರಿಣಾಮ ಬೀರುವುದಲ್ಲದೆ ಪೋಷಕರಿಗೆ ಗೊಂದಲದ ಸನ್ನಿವೇಶಗಳುಂಟಾಗುತ್ತವೆ. ಇದನ್ನು ತಪ್ಪಿಸಲು ಆಡಳಿತ ಮಂಡಳಿಗಳು ತಮ್ಮ ಶಾಲೆಯ ನಾಮಫಲಕಗಳಲ್ಲಿ ಇಲಾಖೆಯಿಂದ ಅನುಮತಿ ಪಡೆದ ಮಾಧ್ಯಮಗಳ ವಿವರಗಳನ್ನು ಕಡ್ಡಾಯವಾಗಿ ನಮೂದಿಸಬೇಕಾಗುತ್ತದೆ. ಈ ಬಗ್ಗೆ ಉಪನಿರ್ದೇಶಕರು (ಆಡಳಿತ) ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಗಳು ಸೂಕ್ತಕ್ರಮ ಕೈಗೊಳ್ಳುವುದು.
3. ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ)ರವರು ತಮ್ಮ ಜಿಲ್ಲಾ ವ್ಯಾಪ್ತಿಗೆ ಒಳಪಡುವ ಖಾಸಗಿ ಅನುದಾನಿತ ಮತ್ತು ಅನುದಾನರಹಿತ ಪ್ರೌಢ ಶಾಲೆಗಳು 2022-23ನೇ ಸಾಲಿಗೆ ಮಾನ್ಯತೆ ನವೀಕರಣ ಹೊಂದಿರುವ ಮತ್ತು ನವೀಕರಣ ಹೊಂದದ ಶಾಲೆಗಳ ಪಟ್ಟಿಯನ್ನು ದೃಢೀಕರಿಸಿ ದಿನಾಂಕ:**30.09.2022** ರೊಳಗೆ ಮಂಡಳಿಯ ಅಯಾ ಪರಿಶೀಲನಾ ಶಾಖೆ ವಿಳಾಸಕ್ಕೆ ಸಲ್ಲಿಸಲು ತಿಳಿಸಿದೆ. ಈ ಮಾಹಿತಿ ನೀಡದೆ ಒಂದು ವೇಳೆ ಮಾನ್ಯತೆ ನವೀಕರಣ ಹೊಂದದ ಶಾಲೆಯಿಂದ ವಿದ್ಯಾರ್ಥಿಗಳು ಪರೀಕ್ಷೆ ತೆಗೆದುಕೊಳ್ಳುವಲ್ಲಿ ವ್ಯತ್ಯಯ ಉಂಟಾದಲ್ಲಿ ಅಯಾ ಉಪನಿರ್ದೇಶಕರು (ಆಡಳಿತ) ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಗಳನ್ನು ನೇರ ಹೊಣೆಗಾರರನ್ನಾಗಿ ಮಾಡಲಾಗುವುದು.
4. ಅನಧಿಕೃತ ಶಾಲೆಗಳ ವಿವರಗಳನ್ನು ಸ್ಪಷ್ಟವಾಗಿ ವಿವರಿಸಿ ವರದಿ ಮಾಡಬೇಕು. ಯಾವುದೇ ಕಾರಣಗಳಿಂದ ಅನಧಿಕೃತ ಶಾಲೆಗಳಿಂದ ಪ್ರಸ್ತಾವನೆ ಸಲ್ಲಿಸದಂತೆ ಕ್ರಮವಹಿಸಬೇಕು. ಕಳೆದ ಸಾಲಿನಲ್ಲಿ ಕೆಲವು ಅನಧಿಕೃತ ಶಾಲೆಗಳಿಂದ ಪ್ರಸ್ತಾವನೆಗಳು ಬಂದಿದ್ದು, ಮಂಡಳಿ ಇದನ್ನು ಗಂಭೀರವಾಗಿ ಪರಿಗಣಿಸಿ ಸಂಬಂಧಿಸಿದವರ ಮೇಲೆ ಶಿಸ್ತು ಕ್ರಮ ಜರುಗಿಸಲು ಕ್ರಮಕೈಗೊಳ್ಳಲಾಗಿದೆ. ಇಂತಹ ಕ್ರಮಗಳನ್ನು ತಡೆಗಟ್ಟುವುದು ಅನಿವಾರ್ಯ ಹಾಗೂ ಕಡ್ಡಾಯ. ಆದ್ದರಿಂದ ಶೈಕ್ಷಣಿಕ ವರ್ಷದ ಪ್ರಾರಂಭದಲ್ಲಿಯೇ ಇಂತಹ ಅನಧಿಕೃತ ಶಾಲೆಗಳನ್ನು ಗುರುತಿಸಿ, ಬರುವಂತಹ ಪ್ರಸ್ತಾವನೆಗಳನ್ನು ತಡೆಗಟ್ಟಲು ಕ್ರಮವಹಿಸಬೇಕು.
5. ಆಯಾಯ ಕ್ಷೇತ್ರಶಿಕ್ಷಣಾಧಿಕಾರಿಗಳ ವ್ಯಾಪ್ತಿಯಲ್ಲಿ ಸಕ್ಷಮ ಪ್ರಾಧಿಕಾರಿಗಳಿಂದ ಶಾಲೆಗಳನ್ನು ಮುಚ್ಚಿಸಲು ಆದೇಶ ನೀಡಿದ್ದಲ್ಲಿ ಹಾಗೂ ವಿದ್ಯಾರ್ಥಿಗಳು ಇಲ್ಲದೇ ಶಾಲೆಯನ್ನು ಮುಚ್ಚಿದ್ದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳು ಶಾಲಾ ಸಂಕೇತವನ್ನು ರದ್ದುಪಡಿಸಲು ಕಡ್ಡಾಯವಾಗಿ ಶಿಫಾರಸ್ಸು ಮಾಡತಕ್ಕದ್ದು.
6. ಕೇಂದ್ರ ಪಠ್ಯಕ್ರಮ ಸಿ.ಬಿ.ಎಸ್.ಇ, ಐ.ಸಿ.ಎಸ್.ಇ ಹಾಗೂ ಹೊರ ರಾಜ್ಯ ಪಠ್ಯಕ್ರಮಗಳಿಂದ ರಾಜ್ಯ ಪಠ್ಯಕ್ರಮಕ್ಕೆ ವಲಸೆ ಬರುವ ಅರ್ಹ ವಿದ್ಯಾರ್ಥಿಗಳು ಪಾವತಿಸಿದ ನೋಂದಣಿ ಶುಲ್ಕದ ಮೂಲ NEFT ಚಲನ್‌ಗಳನ್ನು ಸಂಬಂಧಿಸಿದ ಜಿಲ್ಲಾ ಉಪ ನಿರ್ದೇಶಕರು (ಆಡಳಿತ)ರವರು ಪಠ್ಯಕ್ರಮ ಬದಲಾವಣೆಗಾಗಿ ಶುಲ್ಕಪಾವತಿಸಲು ನಿಗದಿಪಡಿಸದ ಅಂತಿಮ ದಿನಾಂಕದ ನಂತರ ಒಂದು ವಾರದೊಳಗೆ ಮಂಡಳಿಯ ಅಯಾ ಪರಿಶೀಲನಾ ಶಾಖೆಗೆ ಸಲ್ಲಿಸತಕ್ಕದ್ದು.
7. ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳು ಪರೀಕ್ಷೆ ಪ್ರಾರಂಭವಾಗುವ ಮೊದಲೇ ಬಿ.ಇ.ಓ. ಲಾಗಿನ್‌ನಲ್ಲಿ ನೀಡಲಾಗುವ ಆಯಾಯ ತಾಲ್ಲೂಕಿನಲ್ಲಿನ ಪರೀಕ್ಷಾ ಕೇಂದ್ರಗಳ ಎ.ಎಂ.ಎಲ್. ಮತ್ತು ಸಿ.ಎನ್.ಆರ್.ಗಳನ್ನು ಡೌನ್‌ಲೋಡ್ ಮಾಡಿ, ಪ್ರಿಂಟ್ ತೆಗೆದುಕೊಂಡು ಸಂಬಂಧಿಸಿದ ಪರೀಕ್ಷಾ ಕೇಂದ್ರದ ಮುಖ್ಯಸ್ಥರಿಗೆ ವಿತರಿಸತಕ್ಕದ್ದು.
8. ಪರೀಕ್ಷೆ ನಡೆಯುವ ದಿನಗಳಂದು ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳು ತಮ್ಮ ತಾಲ್ಲೂಕು ವ್ಯಾಪ್ತಿಯಲ್ಲಿ ಬರುವ ಪರೀಕ್ಷಾ ಕೇಂದ್ರಗಳ ಅಭ್ಯರ್ಥಿವಾರು ಹಾಜರಾತಿಯ ವಿವರವನ್ನು ಮಂಡಳಿ ಜಾಲತಾಣದ ಬಿ.ಇ.ಓ ಲಾಗಿನ್‌ನಲ್ಲಿ ಆಯಾ ಪರೀಕ್ಷಾ ದಿನವೇ ಮಧ್ಯಾಹ್ನ 12.00 ಘಂಟೆಯೊಳಗೆ ತಪ್ಪದೇ ನಮೂದಿಸತಕ್ಕದ್ದು.
9. **ಕ್ಷೇತ್ರ ಶಿಕ್ಷಣಾಧಿಕಾರಿಗಳು ತಮ್ಮ ವ್ಯಾಪ್ತಿಯ ಎಲ್ಲಾ ಪ್ರೌಢ ಶಾಲೆಗಳು 10ನೇ ತರಗತಿ ಎಸ್.ಎ.ಟಿ.ಎಸ್ ನಲ್ಲಿರುವ ದಾಖಲಾತಿಯಂತೆ ಅರ್ಹ ವಿದ್ಯಾರ್ಥಿಗಳು ಪರೀಕ್ಷೆಗೆ ನೋಂದಣಿಯಾಗಿರುವ ಬಗ್ಗೆ ದೃಢಪಡಿಸಿಕೊಳ್ಳುವುದು.**

## XXI. ಶಾಲಾ ಮುಖ್ಯೋಪಾಧ್ಯಾಯರ ಜವಾಬ್ದಾರಿಗಳು ಮತ್ತು ಪರೀಕ್ಷಾ ಅರ್ಜಿಗಳನ್ನು ಸಲ್ಲಿಸಲು ಪಾಲಿಸಬೇಕಾದ ಸೂಚನೆಗಳು:-

1. 2023ರ ಮಾರ್ಚ್/ಏಪ್ರಿಲ್ ಮಾಹೆಯಲ್ಲಿ ನಡೆಯಲಿರುವ ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ಹಾಜರಾಗುವ CCERF, CCEPF, CCERR, CCEPR ಹಾಗೂ 2003 ರಿಂದ 2010ರವರೆಗೆ ಪರೀಕ್ಷೆಯಲ್ಲಿ ಅನುತ್ತೀರ್ಣರಾದ NSR ಮತ್ತು NSPR ವಿದ್ಯಾರ್ಥಿಗಳ ನೋಂದಣಿ ಮಾಹಿತಿಯನ್ನು ಮಂಡಳಿ ಜಾಲತಾಣದ ಶಾಲಾಲಾಗಿನ್ ಮುಖಾಂತರ ಅಪ್‌ಲೋಡ್ ಮಾಡುವುದು. 2002 ಮತ್ತು ಹಿಂದಿನ NSR/NSPR ಅಭ್ಯರ್ಥಿಗಳ ನೋಂದಣಿಯನ್ನು ಎಂಎಸ್‌ಎ ಮುಖಾಂತರ ಪ್ರಸ್ತಾವನೆಯನ್ನು ಮಂಡಳಿಗೆ ಕಳುಹಿಸುವುದು ಕಡ್ಡಾಯವಾಗಿರುತ್ತದೆ.

2. 2002 ಮತ್ತು ಹಿಂದಿನ ವರ್ಷಗಳ ಪರೀಕ್ಷೆಯಲ್ಲಿ ಅನುತ್ತೀರ್ಣರಾದ ಪುನರಾವರ್ತಿತ ಅಭ್ಯರ್ಥಿಗಳಿಗೆ (NSR/NSPR) ಎಂ.ಎಸ್.ಎ. ಗಳನ್ನು ಕಡ್ಡಾಯವಾಗಿ ಸಲ್ಲಿಸಬೇಕು. ಎಂ.ಎಸ್.ಎ. ಲಭ್ಯವಿಲ್ಲದಿದ್ದಲ್ಲಿ, ನಿಗದಿತ ಶುಲ್ಕವನ್ನು ಸಕ್ಷಮ ಪ್ರಾಧಿಕಾರವಾದ ವಿಭಾಗೀಯ ಪ್ರಾದೇಶಿಕ ಪರೀಕ್ಷಾ ಮಂಡಳಿಗಳಿಗೆ ಪಾವತಿಸಿ ಎಂ.ಎಸ್.ಎ. ಪ್ರತಿಯನ್ನು ಪಡೆದು ನಿಗದಿತ ದಿನಾಂಕದೊಳಗೆ ಸಲ್ಲಿಸುವುದು ಕಡ್ಡಾಯ. ಶಾಲಾ ಸಂಕೇತ ಬದಲಾದ ಎಂ.ಎಸ್.ಎಗಳಲ್ಲಿ ಶಾಲಾ ಸಂಕೇತ ಬದಲಾವಣೆಯಾಗಿರುವ ಬಗ್ಗೆ ಅಗತ್ಯ ದಾಖಲೆಗಳೊಂದಿಗೆ ಬದಲಾದ ಶಾಲಾ ಸಂಕೇತವನ್ನು ಮುಖ್ಯಶಿಕ್ಷಕರು ಸಹಿ ಮತ್ತು ಮೊಹರಿನೊಂದಿಗೆ ದೃಢೀಕರಿಸಿ ಸಲ್ಲಿಸುವುದು ಕಡ್ಡಾಯವಾಗಿದೆ.

3. 2002 ಮತ್ತು ಹಿಂದಿನ ವರ್ಷಗಳ ಪರೀಕ್ಷೆಯಲ್ಲಿ ಅನುತ್ತೀರ್ಣರಾದ ಪುನರಾವರ್ತಿತ ಅಭ್ಯರ್ಥಿಗಳ ಛಾಯಾಪ್ರತಿಯ ಎಂ.ಎಸ್.ಎ. ಮತ್ತು ವಿಭಾಗೀಯ ಕಾರ್ಯದರ್ಶಿಗಳ ಸಹಿ ಇಲ್ಲದ ಕೈಬರಹದ ಎಂ.ಎಸ್.ಎ.ಗಳನ್ನು ತಿರಸ್ಕರಿಸಲಾಗುವುದು.

4. ದಿನಾಂಕ:01.03.2023 ರಂದು 15 ವರ್ಷ ವಯೋಮಿತಿ ಪೂರೈಸುವ ಅಭ್ಯರ್ಥಿಗಳು ಖಾಸಗಿ ಅಭ್ಯರ್ಥಿಗಳಾಗಿ ಪರೀಕ್ಷೆಗೆ ಕುಳಿತುಕೊಳ್ಳಬಹುದು. ಇವರುಗಳು ನಿಗದಿತ ನೋಂದಣಿ ಶುಲ್ಕ ನೀಡಿ ನೋಂದಣಿ ಮಾಡಿಸಿಕೊಂಡಿರಬೇಕು.

5. ಕರ್ನಾಟಕ ಶಿಕ್ಷಣ ಕಾಯ್ದೆ-1983ರ ಪ್ರಕಾರ ರಾಜ್ಯದ ಪ್ರತಿಯೊಂದು ಖಾಸಗಿ ಅನುದಾನಿತ/ ಅನುದಾನ ರಹಿತ ಪ್ರೌಢಶಾಲೆಗಳು ಬೋಧಿಸುವ ಮಾಧ್ಯಮಗಳಿಗನುಗುಣವಾಗಿ ಇಲಾಖೆಯ ಸಕ್ಷಮ ಪ್ರಾಧಿಕಾರದ ಅನುಮತಿ/ಮಾನ್ಯತೆ ಪಡೆಯುವುದು ಕಡ್ಡಾಯ.

6. ಪ್ರಸ್ತುತ ರಾಜ್ಯದ ಕೆಲವು ಖಾಸಗಿ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಲ್ಲಿ ಹಲವಾರು ವಿದ್ಯಾರ್ಥಿಗಳ ಶೈಕ್ಷಣಿಕ ಗುಣಮಟ್ಟ ನಿರೀಕ್ಷಿತ ಮಟ್ಟದಲ್ಲಿ ಇಲ್ಲದಿರುವುದನ್ನು ಗಮನಿಸಿ ಮತ್ತು ಅನುತ್ತೀರ್ಣರಾಗುತ್ತಾರೆಂಬ ಪೂರ್ವಾಗ್ರಹ ಪೀಡಿತರಾಗಿ ಹಾಗೂ ಶಾಲೆಯ ಒಟ್ಟಾರೆ ಶೇಕಡಾ 100ರಷ್ಟು ಫಲಿತಾಂಶ ಪಡೆಯಬೇಕೆಂಬ ಹೆಬ್ಬಯಕೆಯಿಂದ, ಕೆಲವು ಶಾಲಾ ವಿದ್ಯಾರ್ಥಿಗಳನ್ನು ಖಾಸಗಿ ವಿದ್ಯಾರ್ಥಿಗಳಾಗಿ ಪರಿಗಣಿಸಿ ಪ್ರಸ್ತಾವನೆ ಸಲ್ಲಿಸುತ್ತಿರುವುದು ಮಂಡಳಿಯ ಗಮನಕ್ಕೆ ಬಂದಿರುತ್ತದೆ. ಆದ್ದರಿಂದ ಶಾಲಾ ವಿದ್ಯಾರ್ಥಿಯನ್ನು ಯಾವುದೇ ಕಾರಣಗಳಿಂದಾಗಿ ವರ್ಗಾವಣೆ ಪ್ರಮಾಣ ಪತ್ರ ನೀಡಿ ಖಾಸಗಿ ಅಭ್ಯರ್ಥಿಯಾಗಿ ಎಸ್.ಎಸ್.ಎಲ್.ಸಿ ಪರೀಕ್ಷೆಗೆ ಕುಳಿತುಕೊಳ್ಳಲು ಅವಕಾಶವಿರುವುದಿಲ್ಲ. ಇಂತಹ ಪ್ರಕರಣಗಳು ಮರುಕಳಿಸಿದಲ್ಲಿ ಕರ್ನಾಟಕ ಶಿಕ್ಷಣ ಕಾಯ್ದೆ- 1983ರ ನಿಯಮ-39 ರನ್ವಯ ಮಾನ್ಯತೆಯನ್ನು ಹಿಂಪಡೆಯಲು ಸೂಕ್ತ ಕ್ರಮಜರುಗಿಸಲಾಗುವುದು ಹಾಗೂ ಸಂಬಂಧಿಸಿದ ಶಾಲೆಗಳ ಶಾಲಾ ಸಂಕೇತವನ್ನು ಸಹ ರದ್ದುಪಡಿಸಲು ಕ್ರಮವಹಿಸಲಾಗುವುದು.

7. ಶಾಲಾ ವಿದ್ಯಾರ್ಥಿಗಳಿಗೆ ಶಾಲೆಗಳಲ್ಲಿ ಬೋಧನೆ ಮಾಡುವ ವಿಷಯ ಮತ್ತು ಮಾಧ್ಯಮವನ್ನು ಮಾತ್ರ ಪರೀಕ್ಷೆಗೆ ಆಯ್ಕೆ ಮಾಡಿಕೊಳ್ಳತಕ್ಕದ್ದು.

8. CCERF, CCEPF, CCERR, CCEPR, NSR ಮತ್ತು NSPR ವಿದ್ಯಾರ್ಥಿಗಳ ವಿವರಗಳನ್ನು ಮಂಡಳಿ ಜಾಲತಾಣದ ಶಾಲಾ ಲಾಗಿನ್ ಮೂಲಕ್ ಆನ್‌ಲೈನ್‌ನಲ್ಲಿ ನಿಗದಿಪಡಿಸಿದ ಅಂತಿಮ ದಿನಾಂಕದೊಳಗೆ ನೋಂದಾಯಿಸಲು ಕ್ರಮವಹಿಸುವುದು. ಈ ದಿನಾಂಕದ ನಂತರ ವಿದ್ಯಾರ್ಥಿಗಳ ನೋಂದಣಿಗೆ ಅವಕಾಶವಿರುವುದಿಲ್ಲ. ಆದ್ದರಿಂದ ಸಂಬಂಧಪಟ್ಟ ಶಾಲಾ ಮುಖ್ಯೋಪಾಧ್ಯಾಯರು ನಿಗದಿತ ದಿನಾಂಕದೊಳಗೆ ಆನ್‌ಲೈನ್‌ನಲ್ಲಿ ನೋಂದಾಯಿಸಲು ಕ್ರಮಕೈಗೊಳ್ಳುವುದು ಹಾಗೂ 2002 ಮತ್ತು ಹಿಂದಿನ ವರ್ಷಗಳ ಪರೀಕ್ಷೆಯಲ್ಲಿ ಅನುತ್ತೀರ್ಣ ಅಭ್ಯರ್ಥಿಗಳ ಎಂಎಸ್‌ಎಗಳನ್ನು ಅಂಚೆಮುಖಾಂತರ ಮಂಡಳಿಗೆ ರವಾನಿಸುವುದು.



8 8/1749 b4

**ವಿಶೇಷ ಸೂಚನೆ:**

**CCERF,CCEPF,CCERR, CCEPR, NSR & NSPR ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕವನ್ನು ಪಾವತಿಸಲು ಮಂಡಳಿ ಜಾಲತಾಣದಲ್ಲಿ ಚಲನ್ ಜನರೇಟ್ ಮಾಡಿಕೊಂಡು ರಾಷ್ಟ್ರೀಕೃತ ಬ್ಯಾಂಕ್‌ನಲ್ಲೇ ಜಮಾ ಮಾಡಬೇಕು. ಯಾವುದೇ ಕಾರಣಕ್ಕೂ ಈ ಅಭ್ಯರ್ಥಿಗಳ ಪರೀಕ್ಷಾ ಶುಲ್ಕವನ್ನು ಬ್ಯಾಂಕ್ ಹುಂಡಿ ಅಥವಾ ಮಂಡಳಿಯ NEFT ಚಲನ್ ಮೂಲಕ ಪಾವತಿಸಬಾರದು.**

9. ಖಾಸಗಿ ಅಭ್ಯರ್ಥಿಗಳ ಪರೀಕ್ಷಾ ಅರ್ಜಿಯ ಜೊತೆಗೆ ನೋಂದಣಿ ಪ್ರಮಾಣ ಪತ್ರವನ್ನು ಶಾಲೆಯಲ್ಲಿ ಸಂರಕ್ಷಿಸಿಡಲು ಕ್ರಮವಹಿಸುವುದು. ಸಕಾರಣದಿಂದ ತಿರಸ್ಕರಿಸುವ ಅರ್ಜಿಗಳ ಪರೀಕ್ಷಾ ಶುಲ್ಕವನ್ನು ಹಿಂದಿರುಗಿಸುವುದಿಲ್ಲ. ಶುಲ್ಕ ವಿನಾಯಿತಿ ಪಡೆಯುವ ಖಾಸಗಿ ಅಭ್ಯರ್ಥಿಗಳು **ಜಾತಿ ಪ್ರಮಾಣ ಪತ್ರ / ವರ್ಗಾವಣೆ ಪ್ರಮಾಣ ಪತ್ರ (ಟಿ.ಸಿ.) ಮತ್ತು ಇನ್ನಿತರ ದಾಖಲೆಗಳನ್ನು ಮುಖ್ಯಶಿಕ್ಷಕರು ಅಭ್ಯರ್ಥಿಗಳಿಂದ ಪಡೆದು ಶಾಲೆಯಲ್ಲಿ ಸಂರಕ್ಷಿಸಿ ಇಡತಕ್ಕದ್ದು ಹಾಗೂ ಇವುಗಳನ್ನು ಮುಂದಿನ ತಪಾಸಣಾ ಸಮಯದಲ್ಲಿ ಹಾಜರುಪಡಿಸುವುದು.**

10. 2002 ಮತ್ತು ಹಿಂದಿನ ವರ್ಷದಲ್ಲಿ ಪರೀಕ್ಷೆ ಬರೆದು ಅನುತ್ತೀರ್ಣರಾದ ಪುನರಾವರ್ತಿತ ಅಭ್ಯರ್ಥಿಗಳ ಎಂ.ಎಸ್.ಎ ಗಳಲ್ಲಿ ನಿಗದಿತ ಸ್ಥಳದಲ್ಲಿ ಅಭ್ಯರ್ಥಿಯ ಭಾವಚಿತ್ರವನ್ನು ಅಂಟಿಸಿ ನಿಗದಿತ ಸ್ಥಳದಲ್ಲಿ ಅಭ್ಯರ್ಥಿಯ ಸಹಿ ಪಡೆಯಬೇಕು. **<u>ಎಂಎಸ್‌ಎಯ ಹಿಂಬದಿಯಲ್ಲಿ ಅಂಟಿಸಿರುವ ಒಂದು ಭಾವಚಿತ್ರದ ಮೇಲೆ ಮಾತ್ರ ಮುಖ್ಯೋಪಾಧ್ಯಾಯರ ರುಜು ಹಾಗೂ ಶಾಲೆಯ ಮೊಹರು ಹಾಕತಕ್ಕದ್ದು.</u>**

11. ಪುನರಾವರ್ತಿತ ವಿದ್ಯಾರ್ಥಿಗಳಿಗೆ ಶಾಲಾ ಬದಲಾವಣೆಗೆ ಅವಕಾಶವಿಲ್ಲ. ವಿದ್ಯಾರ್ಥಿಗಳು ಪುನ: ಪರೀಕ್ಷೆ ಬರೆಯಲು ಬಯಸಿದಲ್ಲಿ ವ್ಯಾಸಂಗ ಮಾಡಿದ ಶಾಲೆಯ ಮೂಲಕವೇ ಪರೀಕ್ಷೆ ತೆಗೆದುಕೊಳ್ಳಲು ಮುಖ್ಯಶಿಕ್ಷಕರು ಅವಕಾಶ ಕಲ್ಪಿಸಬೇಕು. ಒಂದು ವೇಳೆ ಇಂತಹ ವಿದ್ಯಾರ್ಥಿಗಳ ವರ್ಗಾವಣೆ ಪತ್ರ ತೆಗೆದುಕೊಂಡು ಹೋಗಿದ್ದರೂ ಸಹ, ನಿಯಮಾನುಸಾರ ಅದೇ ಶಾಲೆಯ ಮೂಲಕ ಪರೀಕ್ಷೆ ಬರೆಯಲು ಅವಕಾಶ ಕಲ್ಪಿಸುವುದು.

12. **<u>ಸರ್ಕಾರದಿಂದ ಮಾನ್ಯತೆ ಪಡೆದು ಅಧಿಕೃತ ಶಾಲೆಗಳಾಗಿ ಮಂಡಳಿಯಿಂದ ಶಾಲಾ ಸಂಕೇತ ಪಡೆದಿರುವ ಸರ್ಕಾರಿ/ಅನುದಾನಿತ/ಅನುದಾನ ರಹಿತ/ಸರ್ಕಾರದ ಇತರೆ ಇಲಾಖೆಯಿಂದ ನಡೆಸಲ್ಪಡುವ ಪ್ರೌಢಶಾಲೆಗಳ ಎಲ್ಲಾ ವಿಷಯವಾರು ಶಿಕ್ಷಕರು ಕಡ್ಡಾಯವಾಗಿ ಮಂಡಳಿಯಲ್ಲಿ ಮೌಲ್ಯಮಾಪನಕ್ಕೆ ನೋಂದಣಿ ಮಾಡಿಸತಕ್ಕದ್ದು.</u>**

ಈ ಬಗ್ಗೆ ಮಂಡಳಿಯ ಜಾಲತಾಣದಲ್ಲಿ ವ್ಯವಸ್ಥೆ ಮಾಡಲಾಗುವುದು ಹಾಗೂ ಈ ಕುರಿತು ಪ್ರತ್ಯೇಕ ಸುತ್ತೋಲೆ ನೀಡಲಾಗುವುದು. ನಿಮ್ಮ ಶಾಲೆಗಳಿಗೆ ಸಂಬಂಧಿಸಿದಂತೆ, ಮುಖ್ಯ ಶಿಕ್ಷಕರುಗಳನ್ನೊಳಗೊಂಡಂತೆ ಎಲ್ಲಾ ಶಿಕ್ಷಕರುಗಳ ವಿವರಗಳನ್ನು ಆನ್‌ಲೈನ್‌ನಲ್ಲಿ ದಾಖಲಿಸುವುದು ಮುಖ್ಯ ಶಿಕ್ಷಕರ ಕರ್ತವ್ಯವಾಗಿರುತ್ತದೆ. ಸದರಿ ಮಾಹಿತಿಯನ್ನು ಮಂಡಳಿಯ ಜಾಲತಾಣದಲ್ಲಿ ದಾಖಲಿಸತಕ್ಕದ್ದು. ಮಾರ್ಚ್/ಏಪ್ರಿಲ್ 2023ರ ಎಸ್.ಎಸ್.ಎಲ್.ಸಿ. ಪರೀಕ್ಷೆಯ ಮೌಲ್ಯಮಾಪನ ಕಾರ್ಯಕ್ಕೆ ಮಂಡಳಿಯಲ್ಲಿ ಶಾಲಾ ಸಂಕೇತ ಪಡೆದು ನೋಂದಣಿಯಾಗಿರುವ ಶಾಲೆಗಳು, ಮೌಲ್ಯಮಾಪನಕ್ಕೆ ನೋಂದಣಿ ಮಾಡಿಸದೇ ಇರುವ ಪ್ರೌಢಶಾಲೆಗಳು ಕಡ್ಡಾಯವಾಗಿ ನಿಗದಿತ ಅರ್ಹತೆ ಹೊಂದಿರುವ ಎಲ್ಲಾ ಅರ್ಹ ಶಿಕ್ಷಕರನ್ನು ಮಂಡಳಿಯಲ್ಲಿ ನೋಂದಣಿ ಮಾಡಿಸುವುದು ಕಡ್ಡಾಯ. ಮೌಲ್ಯಮಾಪನದ ನೋಂದಣಿಗೆ ಪದವಿ ಹಾಗೂ ಬಿ.ಇಡಿ., ವಿದ್ಯಾರ್ಹತೆ ಹೊಂದಿರುವವರು ಅರ್ಹತೆ ಹೊಂದಿರುತ್ತಾರೆ. ಕರ್ನಾಟಕ ಶಿಕ್ಷಣ ಕಾಯ್ದೆ–28 ಹಾಗೂ 122ರನ್ವಯ ಹಾಗೂ ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ ನಿಯಮ (ತಿದ್ದುಪಡಿ) 2012ರನ್ವಯ ಪ್ರತಿಯೊಬ್ಬ ಶಿಕ್ಷಕರು ಮೌಲ್ಯಮಾಪನ ಕಾರ್ಯಕ್ಕೆ ಹಾಜರಾಗುವುದು ಕಡ್ಡಾಯ. ಮೌಲ್ಯಮಾಪನ ಕರ್ತವ್ಯಕ್ಕೆ ಹಾಜರಾಗದಿದ್ದಲ್ಲಿ ಶಿಸ್ತುಕ್ರಮ ಜರುಗಿಸಲು ಅವಕಾಶವಿದೆ.

13. **ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರು ಪ್ರೌಢಶಾಲೆಗೆ ಬಡ್ತಿ ಹೊಂದಿದ ದಿನಾಂಕವನ್ನು ಜೇಷ್ಠತೆಗಾಗಿ ಪರಿಗಣಿಸಿ ಮೌಲ್ಯಮಾಪನಕ್ಕೆ ನೋಂದಣಿ ಮಾಡಿಸುವುದು.** ಪ್ರಾಥಮಿಕ ಶಾಲಾ ಶಿಕ್ಷಕರಾಗಿ ಸೇವೆಗೆ ಸೇರಿದ ದಿನಾಂಕವನ್ನು ಮೌಲ್ಯಮಾಪನದ ನೋಂದಣಿಗೆ ಪರಿಗಣಿಸತಕ್ಕದ್ದಲ್ಲ.

14. **ಪ್ರಥಮ ಭಾಷೆ ಆಂಗ್ಲ ಹಾಗೂ ಆಂಗ್ಲ ಮಾಧ್ಯಮದ ಸಮಾಜ ವಿಜ್ಞಾನ ವಿಷಯವನ್ನು ಬೋಧಿಸುತ್ತಿರುವ ಸರ್ಕಾರಿ/ಅನುದಾನಿತ/ಅನುದಾನರಹಿತ ಶಾಲಾ ಅರ್ಹ ಶಿಕ್ಷಕರು ಕಡ್ಡಾಯವಾಗಿ ಮಂಡಳಿಯಲ್ಲಿ ನೋಂದಣಿ ಮಾಡಿಸುವುದು ಹಾಗೂ ಸಂಬಂಧಿಸಿದ ಮುಖ್ಯಶಿಕ್ಷಕರು ಪ್ರಥಮ ಭಾಷೆ ಆಂಗ್ಲ ವಿಷಯದ ಹಾಗೂ ಆಂಗ್ಲ ಮಾಧ್ಯಮದ ಸಮಾಜ ವಿಜ್ಞಾನ ವಿಷಯದ ಅರ್ಹ ಶಿಕ್ಷಕರನ್ನು ಕಡ್ಡಾಯವಾಗಿ ನೋಂದಣಿ ಮಾಡಲು ಅಗತ್ಯಕ್ರಮವಹಿಸುವುದು.**

15. ಶಾಲಾ ಮುಖ್ಯ ಶಿಕ್ಷಕರು ಆನ್‌ಲೈನ್‌ನಲ್ಲಿ ಮೌಲ್ಯಮಾಪನಕ್ಕಾಗಿ ಶಿಕ್ಷಕರ ಸೇವಾ ವಿವರದ ಮಾಹಿತಿಯನ್ನು ಸ್ಪಷ್ಟವಾಗಿ ನಮೂದಿಸುವುದು. ಬೋಧನೆ ಮಾಡುವ ವಿಷಯದ, ವಿಷಯ ಸಂಕೇತವನ್ನು ಸ್ಪಷ್ಟವಾಗಿ ನಮೂದಿಸುವುದು. ಕೋರ್ ವಿಷಯಗಳಲ್ಲಿ ನೋಂದಣಿಯಾಗುವ ಶಿಕ್ಷಕರು ಯಾವ ಮಾಧ್ಯಮದಲ್ಲಿ ಮೌಲ್ಯಮಾಪನ ಮಾಡಲಾಗುವುದು ಎಂದು ಸ್ಪಷ್ಟವಾಗಿ ನಮೂದಿಸುವುದು. (ವಿಷಯ ಸಂಕೇತದ ವಿವರಗಳನ್ನು ಅನುಬಂಧ–5 ರಲ್ಲಿ ನೀಡಿದೆ).

16. ಸರ್ಕಾರದ ಆದೇಶ ಸಂಖ್ಯೆ:ಆಇ/47/ಟಿಎಆರ್/2014, ಬೆಂಗಳೂರು ದಿನಾಂಕ:22.12.2014 ರನ್ವಯ, ಸಹಾಯಧನ/ಪ್ರೋತ್ಸಾಹಧನ/ಗೌರವಧನ ಮುಂತಾದವುಗಳನ್ನು RTGS / NEFT ಮುಖಾಂತರ ನೇರವಾಗಿ ಫಲಾನುಭವಿಗಳಿಗೆ ರಾಷ್ಟ್ರೀಕೃತ ಬ್ಯಾಂಕ್ ಖಾತೆಗಳ ಮೂಲಕ ವಿತರಿಸುವಂತೆ ನಿರ್ದೇಶಿಸಿರುವ ಹಿನ್ನೆಲೆಯಲ್ಲಿ 2023ನೇ ಸಾಲಿನ ಮಾರ್ಚ್/ಏಪ್ರಿಲ್ ಮಾಹೆಯ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಕುಳಿತುಕೊಳ್ಳುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ Aadhar linked ಬ್ಯಾಂಕ್ ಖಾತೆ ಸಂಖ್ಯೆ, ಬ್ಯಾಂಕ್ ಹೆಸರು, ವಿಳಾಸ, ಐ.ಎಫ್.ಎಸ್.ಸಿ ಕೋಡ್ ಮುಂತಾದ ವಿವರಗಳನ್ನು ರಾಜ್ಯದ ಎಲ್ಲಾ ಶಾಲೆಗಳ ಮುಖ್ಯೋಪಾಧ್ಯಾಯರು ಶಾಲಾ ಲಾಗಿನ್‌ನಲ್ಲಿ ಪರೀಕ್ಷೆಗೆ ನೋಂದಾಯಿಸುವಾಗ ಜಾಲತಾಣದಲ್ಲಿ ನಿಖರವಾಗಿ ತಪ್ಪಿಲ್ಲದೆ ದಾಖಲಿಸುವುದು.

17. **ಶಾಲಾ ವಿದ್ಯಾರ್ಥಿಗಳಿಗೆ ಸಂಬಂಧಪಟ್ಟಂತೆ ಎಸ್.ಎ.ಟಿ.ಎಸ್ ನಲ್ಲಿ 2022–23ನೇ ಸಾಲಿಗೆ 10ನೇ ತರಗತಿಗೆ ದಾಖಲಾಗಿರುವ ಎಲ್ಲಾ ಅರ್ಹ ವಿದ್ಯಾರ್ಥಿಗಳನ್ನು ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ನೋಂದಾಯಿಸುವುದು, ವ್ಯತ್ಯಾಸವಿದ್ದಲ್ಲಿ ಸಂಬಂಧಿಸಿದ ಶಾಲಾ ಮುಖ್ಯ ಶಿಕ್ಷಕರನ್ನು ಜವಾಬ್ದಾರರನ್ನಾಗಿ ಮಾಡಲಾಗುವುದು. ಕ್ಷೇತ್ರ ಶಿಕ್ಷಣಾಧಿಕಾರಿಗಳು ತಮ್ಮ ವ್ಯಾಪ್ತಿಯ ಎಲ್ಲಾ ಪ್ರೌಢ ಶಾಲೆಗಳು 10ನೇ ತರಗತಿ ಎಸ್.ಎ.ಟಿ.ಎಸ್ ನಲ್ಲಿರುವ ದಾಖಲಾತಿಯಂತೆ ಅರ್ಹ ವಿದ್ಯಾರ್ಥಿಗಳು ಪರೀಕ್ಷೆಗೆ ನೋಂದಣಿಯಾಗಿರುವ ಬಗ್ಗೆ ದೃಢಪಡಿಸಿಕೊಳ್ಳುವುದು.**

18. ಸದರಿ ಅಧಿಸೂಚನೆಯ ಎಲ್ಲಾ ಅಂಶಗಳನ್ನು ಕಡ್ಡಾಯವಾಗಿ ಓದಿ ಮನನ ಮಾಡಿಕೊಂಡು ಅಗತ್ಯಕ್ರಮ ವಹಿಸುವುದು.

19. **ವಿಶೇಷ ಸೂಚನೆ:–**

| |
|---|
| 1. **ಮಾನ್ಯ ಅಧ್ಯಕ್ಷರು, ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ, ಬೆಂಗಳೂರುರವರ ಪತ್ರದ ಸಂಖ್ಯೆ:ಕರಾಮಹರಆ/ಎಸ್‌ಎಸ್‌ಎಲ್‌ಸಿ ಪರೀಕ್ಷೆ/09/2020–21/393 ದಿನಾಂಕ:24.09.2020ರಲ್ಲಿ ನಿರ್ದೇಶಿಸಿರುವಂತೆ ಯಾವುದೇ ವಿದ್ಯಾರ್ಥಿಗಳು ಪರೀಕ್ಷೆಯಿಂದ ವಂಚಿತರಾಗದಂತೆ ಅಗತ್ಯ ಕ್ರಮವಹಿಸಬೇಕಾಗಿರುತ್ತದೆ. ಆದ್ದರಿಂದ ಎಲ್ಲಾ ಪ್ರೌಢ ಶಾಲೆಗಳ ಮುಖ್ಯ ಶಿಕ್ಷಕರಿಗೆ ತಿಳಿಸುವುದೇನೆಂದರೆ ತಮ್ಮ ಶಾಲೆಗೆ ಸಂಬಂಧಿಸಿದ ಅರ್ಹ ಶಾಲಾ ವಿದ್ಯಾರ್ಥಿಗಳು/ಪುನರಾವರ್ತಿತ ವಿದ್ಯಾರ್ಥಿಗಳಿಗೆ ಮತ್ತು ಅವರ ಪೋಷಕರುಗಳಿಗೆ ಸಕಾಲದಲ್ಲಿ ಅಗತ್ಯ ಮಾಹಿತಿಗಳನ್ನು ನೀಡಿ ನಿಗದಿಪಡಿಸಿದ ಅವಧಿಯೊಳಗೆ ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ನಿಗದಿತ ಶುಲ್ಕ ಪಡೆದು ನೋಂದಾಯಿಸಲು ಸೂಕ್ತ ಕ್ರಮವಹಿಸಲು ಸೂಚಿಸಿದೆ.** |
| 2. **ವಿದ್ಯಾರ್ಥಿಗಳ ಪ್ರವೇಶ ಪತ್ರ ಮತ್ತು ಮೂಲ ಅಂಕಪಟ್ಟಿಯನ್ನು ರವಾನಿಸಿದ ನಂತರ ವಿದ್ಯಾರ್ಥಿ/ತಂದೆ/ತಾಯಿಯ ಹೆಸರು/ಇನಿಶಿಯಲ್ ಮತ್ತು ಜನ್ಮದಿನಾಂಕ ಇವುಗಳ ತಿದ್ದುಪಡಿಗಾಗಿ ಮಂಡಳಿಗೆ ಪ್ರಸ್ತಾವನೆಗಳು ಹೆಚ್ಚಿನ ಸಂಖ್ಯೆಯಲ್ಲಿ ಸ್ವೀಕೃತಿಯಾಗುತ್ತಿದೆ. ಈ ಸಂಬಂಧ ಶಾಲಾ ಮುಖ್ಯೋಪಾಧ್ಯಾಯರು ಎಸ್.ಎ.ಟಿ.ಎಸ್ ನಲ್ಲಿ ವಿದ್ಯಾರ್ಥಿಯ ವಿವರಗಳನ್ನು ನಮೂದು ಮಾಡುವ ಸಂದರ್ಭದಲ್ಲಿಯೇ ಸರಿಯಾಗಿ ತಪ್ಪಿಲ್ಲದೆ ನಮೂದು ಮಾಡತಕ್ಕದ್ದು.** |

20. **2023ರ ಮಾರ್ಚ್/ಏಪ್ರಿಲ್ ಮಾಹೆಯ ಎಸ್.ಎಸ್.ಎಲ್.ಸಿ ಮುಖ್ಯ ಪರೀಕ್ಷೆಗೆ ಕೆಳಕಂಡ ದಾಖಲೆಗಳನ್ನು ಶಾಲಾ ಮುಖ್ಯೋಪಾಧ್ಯಾಯರು ಸಲ್ಲಿಸುವುದು ಕಡ್ಡಾಯ:–**

1. ಮುಖಪುಟ (Covering Letter)
2. ರಾಜ್ಯ ಪಠ್ಯಕ್ರಮಕ್ಕೆ ವಲಸೆ ಬಂದಂತಹ ವಿದ್ಯಾರ್ಥಿಗಳ ನೋಂದಣಿ ಶುಲ್ಕ ಪಾವತಿಸಿದ ಮಂಡಳಿ ಮೂಲ ನೆಫ್ಟ್ ಚಲನ್ ಮತ್ತು ಈ ಅಧಿಸೂಚನೆಯಲ್ಲಿರುವ ಅನುಬಂಧ–6 ರಂತೆ.
3. 2002 ಮತ್ತು ಹಿಂದಿನ ವರ್ಷಗಳ ಪರೀಕ್ಷೆಯಲ್ಲಿ ಅನುತ್ತೀರ್ಣರಾಗಿ ಮಾರ್ಚ್/ಏಪ್ರಿಲ್–2023ರ ಪರೀಕ್ಷೆಗೆ ನೋಂದಾಯಿಸಿದ NSR/NSPR ಅಭ್ಯರ್ಥಿಗಳ ಎಂಎಸ್ಎ ಮತ್ತು ನಾಮಿನಲ್ ರೋಲ್ ಹಾಗೂ ಶುಲ್ಕ ಪಾವತಿಸಿದ ಮಂಡಳಿಯ ಮೂಲ ನೆಫ್ಟ್ ಚಲನ್ ಸಲ್ಲಿಸುವುದು.

**ಮಾರ್ಚ್/ಏಪ್ರಿಲ್ 2023ರ ಎಸ್.ಎಸ್.ಎಲ್.ಸಿ ಮುಖ್ಯ ಪರೀಕ್ಷೆಗೆ ಕ್ರಮ ಸಂಖ್ಯೆ:20ರಲ್ಲಿ ನಮೂದಿಸಿರುವ ದಾಖಲೆಗಳನ್ನು ಮಂಡಳಿಯ ಕೆಳಗಿನ ಅಧಿಕಾರಿಗಳಿಗೆ ತಲುಪಿಸಬೇಕು.**

| ಕ್ರ ಸ | ಶಾಖೆ | ಪರಿಶೀಲನಾ ಅಧಿಕಾರಿಗಳು ಶ್ರೀಮತಿ: ಶ್ರೀ | ಜಿಲ್ಲೆ | ದೂರವಾಣಿ ಸಂಖ್ಯೆ | ಕಛೇರಿಯ ಸ್ಥಿರ ದೂರವಾಣಿ |
|---|---|---|---|---|---|
| 1 | ಎಫ್ | ಅಯೂಬ್ ಪಾಷ ಎನ್ ಎಂ<br>ಸಹಾಯಕ ನಿರ್ದೇಶಕರು | ಬೆಂಗಳೂರು ದಕ್ಷಿಣ / ಹಾವೇರಿ/ ಶಿವಮೊಗ್ಗ | 9480021609 | 08023345579 |
| 2 | ಜಿ | ನರೇಂದ್ರ ಕುಮಾರ್ ಬಿ<br>ಸಹಾಯಕ ನಿರ್ದೇಶಕರು | ಬೆಂಗಳೂರು ಉತ್ತರ / ಚಿಕ್ಕಬಳ್ಳಾಪುರ / ಕೋಲಾರ | 9900190492 | |
| 3 | ಹೆಚ್ | ಎಂ.ಎನ್.ಶ್ರೀನಿವಾಸ್<br>ಸಹಾಯಕ ನಿರ್ದೇಶಕರು | ಚಿತ್ರದುರ್ಗ / ದಾವಣಗೆರೆ/ ಬೆಂಗಳೂರು ಗ್ರಾಮಾಂತರ/ ರಾಮನಗರ | 9449052591 | |
| 4 | ಐ | ವೀನಾಕುಮಾರಿ ಡಿ ಟಿ<br>ಸಹಾಯಕ ನಿರ್ದೇಶಕರು | ಚಾಮರಾಜನಗರ/ಮಂಡ್ಯ/ ತುಮಕೂರು/ ಮಧುಗಿರಿ | 9945025039 | |
| 5 | ಜೆ | ಭಾಗ್ಯವತಮ್ಮ<br>ಸಹಾಯಕ ನಿರ್ದೇಶಕರು | ಮೈಸೂರು/ ಹಾಸನ / ಚಿಕ್ಕಮಗಳೂರು/ ಕೊಡಗು | 9449812887 | |
| 6 | ಕೆ | ಗಾಯಿತ್ರಿದೇವಿ<br>ಹಿರಿಯ ಸಹಾಯಕ ನಿರ್ದೇಶಕರು | ಗದಗ/ ಕೊಪ್ಪಳ/ ಬಿಜಾಪುರ/ ಬಾಗಲಕೋಟೆ | 9986090437 | |
| 7 | ಎಲ್ | ಜಯರಾಮುಡು<br>ಸಹಾಯಕ ನಿರ್ದೇಶಕರು | ಧಾರವಾಡ/ ಚಿಕ್ಕೋಡಿ/ ಬೆಳಗಾವಿ | 9449674952 | |
| 8 | ಎಂ | ಗಿರೀಶ್. ಸಿ.ಜಿ<br>ಹಿರಿಯ ಸಹಾಯಕ ನಿರ್ದೇಶಕರು | ಮಂಗಳೂರು/ ಉಡುಪಿ/ ಕಾರವಾರ/ಶಿರಸಿ/ ರಾಯಚೂರು | 9448542295 | |
| 9 | ಎನ್ | ಸಿ ವಿ ನಟರಾಜ<br>ಹಿರಿಯ ಸಹಾಯಕ ನಿರ್ದೇಶಕರು | ಗುಲ್ಬರ್ಗಾ/ ಯಾದಗಿರಿ/ ಬೀದರ್/ ಬಳ್ಳಾರಿ | 7892937084 | |

ನಿರ್ದೇಶಕರು (ಪರೀಕ್ಷೆಗಳು) : 080–23349434 ಕಾರ್ಯದರ್ಶಿಗಳು : 080–23445579
ಉಪನಿರ್ದೇಶಕರು (ಆಡಳಿತ) : 080–23562267 ಲೆಕ್ಕಾಧಿಕಾರಿಗಳು : 080–23561271

ಹೆಚ್ಚಿನ ವಿವರಗಳಿಗಾಗಿ ಈ ಕೆಳಕಂಡ ಮಂಡಳಿಯ ಜಾಲತಾಣದಲ್ಲಿ ನೋಡುವುದು.

https://sslc.karnataka.gov.in

ಮಂಡಳಿಯ ಇತರೆ ಯಾವುದೇ ಕುಂದುಕೊರತೆಗಳಿಗೆ ಸಂಬಂಧಿಸಿದಂತೆ ದೂರುಗಳನ್ನು ಈ ಕೆಳಕಂಡ ಈಮೇಲ್ ವಿಳಾಸಕ್ಕೆ ಸಲ್ಲಿಸುವುದು

kseebgrievance@gmail.com

ದೂರವಾಣಿ ಸಂಖ್ಯೆ:080–23562264

(ಹೆಚ್.ಎನ್.ಗೋಪಾಲಕೃಷ್ಣ)
ನಿರ್ದೇಶಕರು (ಪರೀಕ್ಷೆಗಳು)

**ಪ್ರತಿಯನ್ನು ಈ ಕೆಳಕಂಡವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.**

1. ರಾಜ್ಯದ ಎಲ್ಲಾ ಸರ್ಕಾರಿ ಹಾಗೂ ಅಂಗೀಕೃತ ಪ್ರೌಢ ಶಾಲೆ/ಸಂಯುಕ್ತ ಪದವಿ ಪೂರ್ವ ಕಾಲೇಜು ಮುಖ್ಯಸ್ಥರುಗಳಿಗೆ (ಪರಿಶೀಲನಾ ಶಾಖೆಗಳ ಮೂಲಕ)

2. ರಾಜ್ಯದ ಎಲ್ಲಾ ವಿಭಾಗೀಯ ಕಾರ್ಯದರ್ಶಿಗಳು ಹಾಗೂ ಪದನಿಮಿತ್ತ ಸಹ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಇವರಿಗೆ ಮುಂದಿನ ಕ್ರಮಕ್ಕಾಗಿ (ಪರಿಶೀಲನಾ ಶಾಖೆಗಳ ಮೂಲಕ)
3. ರಾಜ್ಯದ ಎಲ್ಲಾ ಜಿಲ್ಲಾ ಉಪ ನಿರ್ದೇಶಕರು(ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ ಮತ್ತು ಉಪ ನಿರ್ದೇಶಕರ ಕಚೇರಿಯಲ್ಲಿ ನಾಮಾಂಕಿತರಾದ ಎಸ್.ಎಸ್.ಎಲ್.ಸಿ. ಪರೀಕ್ಷಾ ನೋಡಲ್ ಅಧಿಕಾರಿಯವರ ಮುಂದಿನ ಸೂಕ್ತ ಕ್ರಮಕ್ಕಾಗಿ. (ಪರಿಶೀಲನಾ ಶಾಖೆಗಳ ಮೂಲಕ)
4. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು ಸಾರ್ವಜನಿಕ ಶಿಕ್ಷಣ ಇಲಾಖೆ ಇವರ ಮುಂದಿನ ಸೂಕ್ತ ಕ್ರಮಕ್ಕಾಗಿ. (ಪರಿಶೀಲನಾ ಶಾಖೆಗಳ ಮೂಲಕ)
5. ಮಂಡಳಿಯ ಬಿ, ಸಿ ಮತ್ತು ಲೆಕ್ಕಪತ್ರಶಾಖೆ ಶಾಖಾಧಿಕಾರಿಗಳಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ.
6. ಶಾಖಾಧಿಕಾರಿಗಳು, ಗಣಕಶಾಖೆರವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ ಹಾಗೂ ಮಂಡಳಿಯ ವೆಬ್‌ಸೈಟ್ ಮತ್ತು ಶಾಲಾ ಲಾಗಿನ್‌ನಲ್ಲಿ ಪ್ರಕಟಿಸಲು ಸೂಚಿಸಿದೆ.
7. ಉಪನಿರ್ದೇಶಕರು (ಆಡಳಿತ), ಕ.ಪ್ರೌ.ಶಿ.ಪ.ಮಂಡಳಿ ರವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ.
8. ನಿರ್ದೇಶಕರು (ಪರೀಕ್ಷೆಗಳು) / ಕಾರ್ಯದರ್ಶಿಗಳ ಆಪ್ತ ಶಾಖೆಗೆ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ,
9. ಎಲ್ಲಾ ಪರಿಶೀಲನಾ ಶಾಖೆಗಳ ಶಾಖಾಧಿಕಾರಿಗಳಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ.
10. ಶಿಕ್ಷಣ ವಾರ್ತೆ
11. ಕಛೇರಿ ಪ್ರತಿ.

<u>ಪ್ರತಿಯನ್ನು ಗೌರವಪೂರ್ವಕವಾಗಿ:-</u>

1. ಮಾನ್ಯ ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
2. ಮಾನ್ಯ ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಮತ್ತು ಕಲಬುರಗಿ ವಿಭಾಗ.
3. ನಿರ್ದೇಶಕರು, ಅಂಗವಿಕಲ ಮತ್ತು ಹಿರಿಯ ನಾಗರೀಕ ಕಲ್ಯಾಣ ಇಲಾಖೆ, ಬೆಂಗಳೂರು.

# ಅನುಬಂಧ – 1

## ಪರೀಕ್ಷಾರ್ಥಿಯ ದೈಹಿಕ ಸಾಮರ್ಥ್ಯವನ್ನು ದೃಢೀಕರಿಸುವ ಪ್ರಮಾಣ ಪತ್ರ

ಈ ಮೂಲಕ ಪ್ರಮಾಣೀಕರಿಸುವುದೇನೆಂದರೆ ನಾನು, ------------------------------ ಇವರ ಮಗ/ಮಗಳು ಆಗಿರುವ ಕುಮಾರಿ/ಕುಮಾರ/ಶ್ರೀ/ಶ್ರೀಮತಿ------------------------------ (ದೈಹಿಕ ನ್ಯೂನತೆಯುಳ್ಳ ವಿದ್ಯಾರ್ಥಿ ಹೆಸರು) ಈ ವ್ಯಕ್ತಿಯನ್ನು ಪರೀಕ್ಷಿಸಿದ್ದು, ಇವರು ----------------- -------------------- ನ್ಯೂನತೆಯ ವಿಧ, ನ್ಯೂನತೆಯು ಶೇಕಡ ----- ಇದ್ದು ವೈದ್ಯಕೀಯ ಪ್ರಮಾಣ ಪತ್ರದಲ್ಲಿ ನಮೂದಿಸಿರುವಂತೆ ಹೊಂದಿದ್ದು ------------------------------------------ ----------------- ಶಾಲೆಯ ವಿದ್ಯಾರ್ಥಿಯಾಗಿದ್ದು, ಈ ಮೂಲಕ ದೃಢೀಕರಿಸುವುದೇನೆಂದರೆ ಇವನ/ಇವಳ ದೈಹಿಕ ನ್ಯೂನತೆಯು ಅವನ/ಅವಳ ಬರವಣಿಗೆಯ ಮೇಲೆ ತೊಂದರೆ ಉಂಟು ಮಾಡುತ್ತದೆ.

ಸಹಿ/-
ಮುಖ್ಯ ವೈದ್ಯಾಧಿಕಾರಿ/ಸಿವಿಲ್ ಸರ್ಜನ್/
ಸರ್ಕಾರಿ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕರು

ಹೆಸರು ಮತ್ತು ಪದನಾಮ
ಸರ್ಕಾರಿ ಆಸ್ಪತ್ರೆ/ಆರೋಗ್ಯ ಘಟಕ ಸಲಹಾ
ಕೇಂದ್ರದ ಹೆಸರು ಮತ್ತು ಮೊಹರು.

ಸ್ಥಳ:

ದಿನಾಂಕ:

**ಸೂಚನೆ:** ನ್ಯೂನತೆಗನುಗುಣವಾಗಿ ನುರಿತ ತಜ್ಞರು ನೀಡುವ ವೈದ್ಯಕೀಯ ಪ್ರಮಾಣ ಪತ್ರ. (ಉದಾ: ದೃಷ್ಟಿ ಮಾಂದ್ಯತೆ–ನೇತ್ರ ತಜ್ಞರು, ಲೋಕೊಮೋಟಿವ್ ನ್ಯೂನತೆ–ಮೂಳೆ ತಜ್ಞರು/ಪಿಎಂಆರ್)

# ಅನುಬಂಧ – 2

**ಎಸ್.ಎಸ್.ಎಲ್.ಸಿ ಪರೀಕ್ಷೆಗೆ**
**ಓದುಗಾರ/ಬರಹಗಾರರನ್ನು ಪಡೆಯಲು ಬಳಸಬಹುದಾದ ನಮೂನೆ.**

ನಾನು ---------------------------------------------------------------- ಶಾಲೆಯ ವಿದ್ಯಾರ್ಥಿಯಾಗಿದ್ದು----------------------------------------------- ಇವರ ಮಗ/ಮಗಳಾಗಿದ್ದು, ------------------------ ನೋಂದಣಿ ಸಂಖ್ಯೆಯಾಗಿದ್ದು ------------------ ------------------------------------------------------------------ ಪರೀಕ್ಷಾ ಕೇಂದ್ರವಾಗಿರುತ್ತದೆ.

ನಾನು ಈ ಮೂಲಕ ಪ್ರಮಾಣೀಕರಿಸುವುದೇನೆಂದರೆ ----------------------------------ಇವರು ಸದರಿ ಪರೀಕ್ಷೆಗೆ ಬರಹಗಾರರ/ಓದುಗಾರರ ಸೇವೆ ಒದಗಿಸಲಿದ್ದಾರೆ.

ನಾನು ಈ ಮೂಲಕ ಪ್ರಮಾಣೀಕರಿಸುವುದೇನೆಂದರೆ ಅವನ/ಅವಳ ವಿದ್ಯಾರ್ಹತೆಯು ------------------------------------------ ಆಗಿದ್ದು ಒಂದು ವೇಳೆ ಅವನು/ಅವಳ ವಿದ್ಯಾರ್ಹತೆಯು ನಮೂದಿಸಿದಕ್ಕಿಂತ ಹೆಚ್ಚಿನದೆಂದು ಕಂಡು ಬಂದಲ್ಲಿ ನಾನು ಪರೀಕ್ಷೆಗೆ ಸಂಬಂಧಿಸಿದ ಸೇವೆಗಳನ್ನು ಹಿಂಪಡೆಯುತ್ತೇನೆ.

ವಿಕಲ ಚೇತನ ವಿದ್ಯಾರ್ಥಿಯ ಪೋಷಕರ ಸಹಿ.      ವಿಕಲ ಚೇತನ ವಿದ್ಯಾರ್ಥಿಯ ಸಹಿ.

ಸ್ಥಳ:
ದಿನಾಂಕ:



8 S/t19 Jay

అనుబంధం - 3



## THE SCHEDULE

[*See* clause (*zc*) of section 2]

SPECIFIED DISABILITY

**1. Physical disability.—**

**A. Locomotor disability (a person's inability to execute distinctive activities associated with movement of self and objects resulting from affliction of musculoskeletal or nervous system or both), including—**

**(*a*) "leprosy cured person" means a person who has been cured of leprosy but is suffering from—**

**(*i*) loss of sensation in hands or feet as well as loss of sensation and paresis in the eye and eye-lid but with no manifest deformity;**

**(*ii*) manifest deformity and paresis but having sufficient mobility in their hands and feet to enable them to engage in normal economic activity;**

**(*iii*) extreme physical deformity as well as advanced age which prevents him/her from undertaking any gainful occupation, and the expression "leprosy cured" shall construed accordingly;**

**(*b*) "cerebral palsy" means a Group of non-progressive neurological condition affecting body movements and muscle coordination, caused by damage to one or more specific areas of the brain, usually occurring before, during or shortly after birth;**

**(*c*) "dwarfism" means a medical or genetic condition resulting in an adult height of 4 feet 10 inches (147 centimeters) or less;**

**(*d*) "muscular dystrophy" means a group of hereditary genetic muscle disease that weakens the muscles that move the human body and persons with multiple dystrophy have incorrect and missing information in their genes, which prevents them from making the proteins they need for healthy muscles. It is characterised by progressive skeletal muscle weakness, defects in muscle proteins, and the death of muscle cells and tissue;**

**(*e*) "acid attack victims" means a person disfigured due to violent assaults by throwing of acid or similar corrosive substance.**

**B. Visual impairment—**

**(*a*) "blindness" means a condition where a person has any of the following conditions, after best correction—**

**(*i*) total absence of sight; or**

**(*ii*) visual acuity less than 3/60 or less than 10/200 (Snellen) in the better eye with best possible correction; or**

**(*iii*) limitation of the field of vision subtending an angle of less than 10 degree.**

**(*b*) "low-vision" means a condition where a person has any of the following conditons, namely:—**

**(*i*) visual acuity not exceeding 6/18 or less than 20/60 upto 3/60 or upto 10/200 (Snellen) in the better eye with best possible corrections; or**

(*ii*) limitation of the field of vision subtending an angle of less than 40 degree up to 10 degree.

C. Hearing impairment—

(*a*) "deaf" means persons having 70 DB hearing loss in speech frequencies in both ears;

(*b*) "hard of hearing" means person having 60 DB to 70 DB hearing loss in speech frequencies in both ears;

D. "speech and language disability" means a permanent disability arising out of conditions such as laryngectomy or aphasia affecting one or more components of speech and language due to organic or neurological causes.

2. Intellectual disability, a condition characterised by significant limitation both in intellectual functioning (rasoning, learning, problem solving) and in adaptive behaviour which covers a range of every day, social and practical skills, including—

(*a*) "specific learning disabilities" means a heterogeneous group of conditions wherein there is a deficit in processing language, spoken or written, that may manifest itself as a difficulty to comprehend, speak, read, write, spell, or to do mathematical calculations and includes such conditions as perceptual disabilities, dyslexia, dysgraphia, dyscalculia, dyspraxia and developmental aphasia;

(*b*) "autism spectrum disorder" means a neuro-developmental condition typically appearing in the first three years of life that significantly affects a person's ability to communicate, understand relationships and relate to others, and is frequently associated with unusal or stereotypical rituals or behaviours.

3. Mental behaviour,—

"mental illness" means a substantial disorder of thinking, mood, perception, orientation or memory that grossly impairs judgment, behaviour, capacity to recognise reality or ability to meet the ordinary demands of life, but does not include retardation which is a conditon of arrested or incomplete development of mind of a person, specially characterised by subnormality of intelligence.

4. Disability caused due to—

(*a*) chronic neurological conditions, such as—

(*i*) "multiple sclerosis" means an inflammatory, nervous system disease in which the myelin sheaths around the axons of nerve cells of the brain and spinal cord are damaged, leading to demyelination and affecting the ability of nerve cells in the brain and spinal cord to communicate with each other;

(*ii*) "parkinson's disease" means a progressive disease of the nervous system marked by tremor, muscular rigidity, and slow, imprecise movement, chiefly affecting middle-aged and elderly people associated with degeneration of the basal ganglia of the brain and a deficiency of the neurotransmitter dopamine.

(*b*) Blood disorder—

(*i*) "haemophilia" means an inheritable disease, usually affecting only male but transmitted by women to their male children, characterised by loss or impairment of the normal clotting ability of blood so that a minor would may result in fatal bleeding;

(*ii*) "thalassemia" means a group of inherited disorders characterised by reduced or absent amounts of haemoglobin.

(*iii*) "sickle cell disease" means a hemolytic disorder characterised by chronic anemia, painful events, and various complications due to associated



8 [illegible]

tissue and organ damage; "hemolytic" refers to the destruction of the cell membrane of red blood cells resulting in the release of hemoglobin.

5. Multiple Disabilities (more than one of the above specified disabilities) including deaf blindness which means a condition in which a person may have combination of hearing and visual impairments causing severe communication, developmental, and educational problems.

6. Any other category as may be notified by the Central Government.

---

DR. G NARAYANA RAJU,
*Secretary to the Govt. of India.*

UPLOADED BY THE GENERAL MANAGER, GOVERNMENT OF INDIA PRESS, MINTO ROAD, NEW DELHI-110002
AND PUBLISHED BY THE CONTROLLER OF PUBLICATIONS, DELHI-110054.

GMGIPMRND—4011GI(S3)—28-12-2016.

MANOJ KUMAR Digitally signed by MANOJ KUMAR

# ಅನುಬಂಧ – 4

## ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು.

## ಮಾರ್ಚ್/ಏಪ್ರಿಲ್–2023ರ ಎಸ್.ಎಸ್.ಎಲ್.ಸಿ ಪರೀಕ್ಷೆಯ ಭಾಷಾ ಸಂಯೋಜನೆಯ ವಿಷಯ ಸಂಕೇತಗಳು

| | | |
|---|---|---|
| 01K | 31E | 61H |
| 01K | 31E | 64A |
| 01K | 31E | 65P |
| 01K | 31E | 66U |
| 01K | 31E | 67S |
| 01K | 31E | 68D/K |
| 01K | 31E | 69D/K |

| | | |
|---|---|---|
| 04L | 31E | 62K |
| 04L | 33K | 61H |
| 04L | 33K | 63E |
| 04L | 33K | 64A |
| 04L | 33K | 65P |
| 04L | 33K | 66U |
| 04L | 33K | 67S |
| 04L | 33K | 68D/K |
| 04L | 33K | 69D/K |

| | | |
|---|---|---|
| 06H | 31E | 62K |
| 06H | 33K | 63E |
| 06H | 33K | 64A |
| 06H | 33K | 65P |
| 06H | 33K | 66U |
| 06H | 33K | 67S |
| 06H | 33K | 68D/K |
| 06H | 33K | 69D/K |

| | | |
|---|---|---|
| 08M | 31E | 62K |
| 08M | 33K | 61H |
| 08M | 33K | 63E |
| 08M | 33K | 64A |
| 08M | 33K | 65P |
| 08M | 33K | 66U |
| 08M | 33K | 67S |
| 08M | 33K | 68D/K |
| 08M | 33K | 69D/K |

| | | |
|---|---|---|
| 10T | 31E | 62K |
| 10T | 33K | 61H |
| 10T | 33K | 63E |
| 10T | 33K | 64A |
| 10T | 33K | 65P |
| 10T | 33K | 66U |
| 10T | 33K | 67S |
| 10T | 33K | 68D/K |
| 10T | 33K | 69D/K |

| | | |
|---|---|---|
| 12U | 31E | 62K |
| 12U | 33K | 61H |
| 12U | 33K | 63E |
| 12U | 33K | 64A |
| 12U | 33K | 65P |
| 12U | 33K | 67U |
| 12U | 33K | 68D/K |
| 12U | 33K | 69D/K |

| | | |
|---|---|---|
| 14E | 33K | 61H |
| 14E | 33K | 64A |
| 14E | 33K | 65P |
| 14E | 33K | 66U |
| 14E | 33K | 67S |
| 14E | 33K | 68D/K |
| 14E | 33K | 69D/K |

| | | |
|---|---|---|
| 16S | 31E | 62K |
| 16S | 33K | 61H |
| 16S | 33K | 63E |
| 16S | 33K | 64A |
| 16S | 33K | 65P |
| 16S | 33K | 66U |
| 16S | 33K | 68D/K |
| 16S | 33K | 69D/K |

| 15E | 33K | 60H |
|---|---|---|
| ಎನ್‌ಸಿಇಆರ್‌ಟಿ ಪಠ್ಯಕ್ರಮ ಆದರ್ಶ ಶಾಲೆಯ ವಿದ್ಯಾರ್ಥಿಗಳಿಗೆ ಮಾತ್ರ ಅನ್ವಯಿಸುತ್ತದೆ | | |

ಸರ್ಕಾರದ ಆದೇಶ ಸಂಖ್ಯೆ:ಇಪಿ 62 ಎಸ್‌ಎಲ್‌ಬಿ 2021 ದಿನಾಂಕ:15.03.2021 ರನ್ವಯ ಸ್ಪಾಸ್ಟಿಕ್, ಕಿವುಡ ಮೂಗ, ಮಸ್ಕುಲರ್ ಡಿಸ್ಟ್ರೋಫಿ, ಕಲಿಕಾ ನ್ಯೂನತೆ, ಅಂಧ ವಿದ್ಯಾರ್ಥಿಗಳು/ ದೃಷ್ಟಿಮಾಂದ್ಯ ವಿದ್ಯಾರ್ಥಿ/ ಕ್ಷೀಣ ದೃಷ್ಟಿ ಹಾಗೂ ಬುದ್ಧಿಮಾಂದ್ಯ ವಿದ್ಯಾರ್ಥಿಗಳಿಗೆ ಶಿಕ್ಷಣ ಮಾಧ್ಯಮದ ಒಂದು ಭಾಷೆಯನ್ನು ಮಾತ್ರ ಅಭ್ಯಾಸ ಮಾಡಬಹುದು. ಉಳಿದ ಎರಡು ಭಾಷೆಗಳಿಗೆ ವಿನಾಯಿತಿ ನೀಡಿದೆ.

**ಕಲಿಕಾ ನ್ಯೂನ್ಯತೆ/ ಡಿಸ್‌ಲೆಕ್ಸಿಯಾ ಮತ್ತು ಅಂಧ ವಿದ್ಯಾರ್ಥಿಗಳು/ ದೃಷ್ಟಿಮಾಂದ್ಯ ವಿದ್ಯಾರ್ಥಿ/ ಕ್ಷೀಣ ದೃಷ್ಟಿ ಹಾಗೂ ಬುದ್ಧಿಮಾಂದ್ಯ ವಿದ್ಯಾರ್ಥಿಗಳಿಗೆ ಗಣಿತ ಮತ್ತು ವಿಜ್ಞಾನ ವಿಷಯಗಳ ಬದಲು ಆಯ್ಕೆ ಮಾಡಿಕೊಳ್ಳಬಹುದಾದ ಪರ್ಯಾಯ ವಿಷಯಗಳು ಹಾಗೂ ವಿಷಯ ಸಂಕೇತ**

| | | |
|---|---|---|
| 95 | 96 | 85 |
| 95 | 97 | 85 |
| 95 | 28 | 85 |
| 95 | 29 | 85 |
| 96 | 95 | 85 |
| 96 | 97 | 85 |
| 96 | 28 | 85 |
| 96 | 29 | 85 |
| 97 | 95 | 85 |
| 97 | 96 | 85 |
| 97 | 28 | 85 |
| 97 | 29 | 85 |

95–ಸಮಾಜ ಶಾಸ್ತ್ರ, 96 ಅರ್ಥಶಾಸ್ತ್ರ, 97 ರಾಜ್ಯ ಶಾಸ್ತ್ರ, 28–ಹಿಂದೂಸ್ಥಾನಿ ಸಂಗೀತ / 29–ಕರ್ನಾಟಕ ಸಂಗೀತ

**ತೃತೀಯ ಭಾಷೆಗೆ ವಿನಾಯಿತಿ ನೀಡಿ ಎನ್‌ಎಸ್‌ಕ್ಯೂಎಫ್ ವೃತ್ತಿ ಶಿಕ್ಷಣದ ವಿಷಯಗಳನ್ನು ಆಯ್ಕೆ ಮಾಡಿಕೊಳ್ಳಬಹುದಾದ ವಿಷಯ ಹಾಗೂ ವಿಷಯ ಸಂಕೇತ**

86–ಮಾಹಿತಿ ತಂತ್ರಜ್ಞಾನ, 87–ರೀಟೇಲ್, 88–ಆಟೋಮೊಬೈಲ್, 89–ಹೆಲ್ತ್‌ಕೇರ್, 90–ಬ್ಯೂಟಿ ಆಂಡ್ ವೆಲ್‌ನೆಸ್

**ವಿಶೇಷ ಸೂಚನೆ:– ಎನ್.ಎಸ್.ಕ್ಯೂ.ಎಫ್, ಜೆ.ಟಿ.ಎಸ್, ಎನ್.ಸಿ.ಇ.ಆರ್.ಟಿ ಪಠ್ಯಕ್ರಮದ ವಿಷಯಗಳನ್ನು ಖಾಸಗಿ ಅಭ್ಯರ್ಥಿಗಳು ಪರೀಕ್ಷೆಗೆ ಆಯ್ಕೆ ಮಾಡಿಕೊಳ್ಳಲು ಅವಕಾಶವಿರುವುದಿಲ್ಲ.**

# ಅನುಬಂಧ – 5

## ಭಾಷಾ ವಿಷಯಗಳು ಹಾಗೂ ಕೋರ್ ವಿಷಯಗಳ ಸಂಕೇತಗಳು

| ವಿಷಯ | ವಿಷಯ ಸಂಕೇತ | ವಿಷಯ | ವಿಷಯ ಸಂಕೇತ | ವಿಷಯ | ವಿಷಯ ಸಂಕೇತ |
|---|---|---|---|---|---|
| ಪ್ರಥಮ ಭಾಷೆ ಕನ್ನಡ | 01K | ದ್ವಿತೀಯ ಭಾಷೆ ಇಂಗ್ಲೀಷ್ | 31E | ಗಣಿತ | 81K, 81E, 81U, 81L, 81T, 81M, 81H |
| ಪ್ರಥಮ ಭಾಷೆ ತೆಲಗು | 04L | ದ್ವಿತೀಯ ಭಾಷೆ ಕನ್ನಡ | 33K | | |
| ಪ್ರಥಮ ಭಾಷೆ ಹಿಂದಿ | 06H | | | | |
| ಪ್ರಥಮ ಭಾಷೆ ಮರಾಠಿ | 08M | ತೃತೀಯ ಭಾಷೆ ಹಿಂದಿ | 61H | ವಿಜ್ಞಾನ | 83K, 83E, 83U, 83L, 83T, 83M, 83H |
| ಪ್ರಥಮ ಭಾಷೆ ತಮಿಳು | 10T | ತೃತೀಯ ಭಾಷೆ ಕನ್ನಡ | 62K | | |
| ಪ್ರಥಮ ಭಾಷೆ ಉರ್ದು | 12U | ತೃತೀಯ ಭಾಷೆ ಇಂಗ್ಲೀಷ್ | 63E | | |
| ಪ್ರಥಮ ಭಾಷೆ ಇಂಗ್ಲೀಷ್ | 14E | ತೃತೀಯ ಭಾಷೆ ಅರೇಬಿಕ್ | 64A | ಸಮಾಜ ವಿಜ್ಞಾನ | 85K, 85E, 85U, 85L, 85T, 85M, 85H |
| ಪ್ರಥಮ ಭಾಷೆ ಸಂಸ್ಕೃತ | 16S | ತೃತೀಯ ಭಾಷೆ ಪರ್ಷಿಯನ್ | 65P | | |
| ಪ್ರಥಮ ಭಾಷೆ ಇಂಗ್ಲೀಷ್ (ಎನ್‌ಸಿಇಆರ್‌ಟಿ ಪಠ್ಯಕ್ರಮ ಆದರ್ಶ ಶಾಲೆ ವಿದ್ಯಾರ್ಥಿಗಳಿಗೆ ಮಾತ್ರ) | 15E | ತೃತೀಯ ಭಾಷೆ ಉರ್ದು | 66U | | |
| | | ತೃತೀಯ ಭಾಷೆ ಸಂಸ್ಕೃತ | 67S | ಸಮಾಜ ಶಾಸ್ತ್ರ | 95K, 95E |
| | | ತೃತೀಯ ಭಾಷೆ ಕೊಂಕಣಿ | 68D/K | ಅರ್ಥ ಶಾಸ್ತ್ರ | 96K, 96E |
| | | ತೃತೀಯ ಭಾಷೆ ತುಳು | 69 D/K | ರಾಜ್ಯ ಶಾಸ್ತ್ರ | 97K, 97E |
| | | ತೃತೀಯ ಭಾಷೆ ಹಿಂದಿ (ಎನ್‌ಸಿಇಆರ್‌ಟಿ ಪಠ್ಯಕ್ರಮ ಆದರ್ಶ ಶಾಲೆ ವಿದ್ಯಾರ್ಥಿಗಳಿಗೆ ಮಾತ್ರ) | 60H | ಹಿಂದೂಸ್ಥಾನಿ ಸಂಗೀತ | 28 E/K |
| | | | | ಕರ್ನಾಟಕ ಸಂಗೀತ | 29 E/K |
| | | ಮಾಹಿತಿ ತಂತ್ರಜ್ಞಾನ | 86 E/K | | |
| | | ರೀಟೇಲ್ | 87 E/K | | |
| | | ಆಟೋಮೊಬೈಲ್ | 88 E/K | | |
| | | ಹೆಲ್ತ್‌ಕೇರ್ | 89 E/K | | |
| | | ಬ್ಯೂಟಿ ಆಂಡ್ ವೆಲ್‌ನೆಸ್ | 90 E/K | | |

# ಅನುಬಂಧ – 6

## ಕೇಂದ್ರ ಪಠ್ಯ ಕ್ರಮ ಮತ್ತು ಹೊರರಾಜ್ಯ ಪಠ್ಯಕ್ರಮದಿಂದ ರಾಜ್ಯ ಪಠ್ಯಕ್ರಮಕ್ಕೆ ವಲಸೆ ಬಂದ ವಿದ್ಯಾರ್ಥಿಗಳಿಗೆ ರಾಜ್ಯ ಪಠ್ಯಕ್ರಮದಲ್ಲಿ ವ್ಯಾಸಂಗ ಮುಂದುವರೆಸಲು ಅನುಮತಿಸಲಾದ ವಿದ್ಯಾರ್ಥಿಗಳ ಮಾಹಿತಿಯ ವಿವರ

ಶಾಲಾ ಸಂಕೇತ: ________ ಶಾಲೆಯ ಹೆಸರು ಮತ್ತು ವಿಳಾಸ :____________________

| ಕ್ರ ಸಂ | ವಿದ್ಯಾರ್ಥಿಯ ಹೆಸರು | ಲಿಂಗ | | ಪಠ್ಯಕ್ರಮ ಬದಲಾವಣೆ ಶುಲ್ಕ | ಮಂಡಳಿ ನೆಫ್ಟ್ ಚಲನ್ ಸಂಖ್ಯೆ & ದಿನಾಂಕ | ಬ್ಯಾಂಕಿನ ಹೆಸರು | ಉಪನಿರ್ದೇಶಕರು (ಆಡಳಿತ)ರವರು ನೀಡಿರುವ ಆದೇಶದ ಸಂಖ್ಯೆ ಮತ್ತು ದಿನಾಂಕ |
|---|---|---|---|---|---|---|---|
| | | ಗಂ | ಹೆ | | | | |
| 1 | 2 | 3 | 4 | 5 | 6 | 7 | 8 |
| | | | | | | | |
| | | | | | | | |
| | | | | | | | |
| | ಒಟ್ಟು | | | | | | |

ಅಕ್ಷರಗಳಲ್ಲಿ ಒಟ್ಟು ಮೊತ್ತ ರೂ _ _ _ _ _ _ _ _ _ _ _ _ _ _ _ _ _ _ _ _ _ _ _ _ _ _ _ _ _ _ _ _

ಶಾಲಾ ಮುಖ್ಯಸ್ಥರ ಸಹಿ
ಮತ್ತು ಮೊಹರು

# ಅನುಬಂಧ–7

**2023 ವರ್ಷದ ಮಾರ್ಚ್/ಏಪ್ರಿಲ್ ಮಾಹೆಯಲ್ಲಿ ನಡೆಯಲಿರುವ ಎಸ್‌ಎಸ್‌ಎಲ್‌ಸಿ ಮುಖ್ಯ ಪರೀಕ್ಷೆಗೆ ಖಾಸಗಿ ಅಭ್ಯರ್ಥಿಯಾಗಿ ನೋಂದಾಯಿಸಲು ಅರ್ಜಿ ನಮೂನೆ.**

| | | |
|---|---|---|
| 1 | ಅಭ್ಯರ್ಥಿಯ ಪೂರ್ಣ ಹೆಸರು | |
| 2 | ತಂದೆ/ಪೋಷಕರ ಹೆಸರು | |
| 3 | ತಾಯಿಯ ಹೆಸರು | |
| 4 | ಪೂರ್ಣ ಅಂಚೆ ವಿಳಾಸ | |
| 5 | ಜನ್ಮ ದಿನಾಂಕ | ಅಂಕಿಗಳಲ್ಲಿ :<br>ಅಕ್ಷರಗಳಲ್ಲಿ : |
| 6 | ವಯೋಮಿತಿ ಬಗ್ಗೆ ಒದಗಿಸಿದ ದಾಖಲೆಗಳು :<br>(2023ನೇ ಮಾರ್ಚ್ 01ನೇ ತಾರೀಖಿಗೆ 15 ವರ್ಷ ವಯೋಮಿತಿ ತುಂಬಿರುವ ಅಭ್ಯರ್ಥಿಗಳಿಗೆ ಮಾತ್ರ ಅವಕಾಶವಿರುತ್ತದೆ) | |
| 7 | ಅಭ್ಯರ್ಥಿಯು ವಾಸಿಸುತ್ತಿರುವ ಪಟ್ಟಣ / ತಾಲ್ಲೂಕು ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಅಥವಾ ಮಾನ್ಯತೆ ಪಡೆದ ಖಾಸಗಿ ಶಾಲೆಗಳ ಮುಖಾಂತರವೇ ನೋಂದಣಿಗಾಗಿ ಅರ್ಜಿ ಸಲ್ಲಿಸಿರುತ್ತಾರೆಯೇ? ಈ ಬಗ್ಗೆ ಪಡೆದಿರುವ ಅಧಿಕೃತ ದಾಖಲೆಯ ವಿವರ | |
| 8 | ಒಂದು ವೇಳೆ ಈಗಾಗಲೇ ಎಸ್.ಎಸ್.ಎಲ್.ಸಿ ಪರೀಕ್ಷೆ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆಯಾಗಿರುವವರು ಖಾಸಗಿಯಾಗಿ ಎಸ್.ಎಸ್.ಎಲ್.ಸಿ ಪರೀಕ್ಷೆಗೆ ಕೂರಲು ಅರ್ಹರಾಗಿರುವುದಿಲ್ಲ. ಈ ಬಗ್ಗೆ ಖಚಿತಪಡಿಸಿಕೊಳ್ಳಲಾಗಿದೆಯೇ | |
| 9 | ಈ ಹಿಂದೆ ಅಭ್ಯರ್ಥಿಯು ತೇರ್ಗಡೆ ಹೊಂದಿದ ಪರೀಕ್ಷೆ ಮತ್ತು ವಿವರ | 1. ತರಗತಿ<br>2. ಶಾಲಾ ದಾಖಲಾತಿ ಸಂಖ್ಯೆ<br>3. ವರ್ಷ<br>4. ಶಾಲೆಯ ಹೆಸರು |

ಮೇಲ್ಕಂಡ ಮಾಹಿತಿಗಳು ಸರಿಯಾಗಿರುತ್ತವೆಂದು ಘೋಷಿಸುತ್ತೇನೆ.

ಸ್ಥಳ:
ದಿನಾಂಕ:

ತಂದೆ/ತಾಯಿ/ಪೋಷಕರ ಸಹಿ

(ಅಭ್ಯರ್ಥಿಯು 15 ರಿಂದ 18ರ ವರ್ಷದ ಒಳಗಿನ ಅಪ್ರಾಪ್ತರಾಗಿದಲ್ಲಿ) ಅಭ್ಯರ್ಥಿಯ ಸಹಿ

---

**:: ಮುಖ್ಯ ಶಿಕ್ಷಕರ ದೃಢೀಕರಣ ::**

ಮೇಲ್ಕಂಡ ಅಭ್ಯರ್ಥಿಯನ್ನು ಖಾಸಗಿಯಾಗಿ ನೊಂದಾಯಿಸಲು ರೂ.205–00 (ಎರಡು ನೂರ ಐದು ರೂಪಾಯಿಗಳು ಮಾತ್ರ) ಪಡೆದಿದ್ದು, ಕಛೇರಿ ರಶೀದಿ ಸಂ.________________ ದಿ ________________ ಆಗಿರುತ್ತದೆ. ಮೇಲ್ಕಂಡ ಮಾಹಿತಿಯನ್ನು ಪರಿಶೀಲಿಸಿ ದೃಢೀಕರಿಸಿದೆ.

ಸ್ಥಳ:
ದಿನಾಂಕ: ಶಾಲಾ ಮುಖ್ಯಸ್ಥರ ಸಹಿ ಮತ್ತು ಮೊಹರು

# ಅನುಬಂಧ – 08

## ಎಸ್.ಎಸ್.ಎಲ್.ಸಿ ಪರೀಕ್ಷಾ ಫಲಿತಾಂಶ ಉತ್ತಮಪಡಿಸಿಕೊಳ್ಳುವ ವಿದ್ಯಾರ್ಥಿಗಳು ಸಲ್ಲಿಸಬೇಕಾದ ನಿಗದಿತ ಅರ್ಜಿ ನಮೂನೆ

---

1. ಅಭ್ಯರ್ಥಿಯ ಹೆಸರು : ..........................................................................................
2. ತಂದೆಯ ಹೆಸರು : ..........................................................................................
3. ತಾಯಿಯ ಹೆಸರು : ..........................................................................................
4. ನೋಂದಣಿ ಸಂಖ್ಯೆ : ..........................................................................................
5. ಜನ್ಮ ದಿನಾಂಕ : ..........................................................................................

(ಅಕ್ಷರಗಳಲ್ಲಿ):..........................................................................................

6. ಶಾಲೆಯ ಹೆಸರು & ವಿಳಾಸ : ..........................................................................................

..........................................................................................

7. ಶಾಲಾ ಸಂಕೇತ : ..........................................................................................
8. ಉತ್ತೀರ್ಣಗೊಂಡ ವರ್ಷ : ..........................................................................................
9. ಫಲಿತಾಂಶ ಉತ್ತಮಪಡಿಸಿಕೊಳ್ಳಲು ಪರೀಕ್ಷೆ ತೆಗೆದುಕೊಳ್ಳುತ್ತಿರುವ ವಿಷಯಗಳ ವಿವರ:

| ಕ್ರ ಸಂ | ವಿಷಯ ಸಂಕೇತ | ವಿಷಯ | ಮೊದಲ ಬಾರಿಗೆ ಎಲ್ಲಾ ವಿಷಯಗಳಲ್ಲೂ ಉತ್ತೀರ್ಣಗೊಂಡು ಪಡೆದ ಅಂಕಗಳು | ಉತ್ತೀರ್ಣಗೊಂಡ ವರ್ಷ | ಫಲಿತಾಂಶ ಉತ್ತಮಪಡಿಸಿಕೊಳ್ಳಲು ಪರೀಕ್ಷೆ ತೆಗೆದುಕೊಳ್ಳುತ್ತಿರುವ ವಿಷಯಗಳ ಸಂಕೇತ & ವಿಷಯ |
|---|---|---|---|---|---|
| 1 | | | | | |
| 2 | | | | | |
| 3 | | | | | |
| 4 | | | | | |
| 5 | | | | | |
| 6 | | | | | |

10. ಸದರಿ ಅರ್ಜಿಯೊಂದಿಗೆ ಲಗತ್ತಿಸಿರುವ ಎಸ್.ಎಸ್.ಎಲ್.ಸಿ ಮೂಲ ಅಂಕಪಟ್ಟಿಯ ಕ್ರಮ ಸಂಖ್ಯೆ: ..........................

### :: ವಿದ್ಯಾರ್ಥಿಯ ದೃಢೀಕರಣ ::

________________________ ಆದ ನಾನು ಎಸ್.ಎಸ್.ಎಲ್.ಸಿ ಪರೀಕ್ಷಾ ಫಲಿತಾಂಶ ಉತ್ತಮಪಡಿಸಿಕೊಳ್ಳುವ ಸಲುವಾಗಿ ಮೂಲ ಅಂಕಪಟ್ಟಿಯನ್ನು ಮಂಡಳಿಗೆ ಸಲ್ಲಿಸುತ್ತಿದ್ದು ಈ ಅವಧಿಯಲ್ಲಿ ಯಾವುದೇ ಉನ್ನತ ವ್ಯಾಸಂಗವನ್ನು ಮುಂದುವರೆಸುತ್ತಿರುವುದಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ. **ಒಂದು ವೇಳೆ ಎಸ್.ಎಸ್.ಎಲ್.ಸಿ ಪರೀಕ್ಷಾ ಫಲಿತಾಂಶ ಉತ್ತಮಪಡಿಸಿಕೊಳ್ಳುವ ಬಗ್ಗೆ ಇರುವ ನಿಯಮಗಳನ್ನು ಉಲ್ಲಂಘಿಸಿದ್ದಲ್ಲಿ ಮಂಡಳಿಯು ಕೈಗೊಳ್ಳುವ ಕ್ರಮಕ್ಕೆ ಬದ್ಧನಾಗಿರುತ್ತೇನೆ.**

ದಿನಾಂಕ:

.......................................................... ..........................................................

ಅಭ್ಯರ್ಥಿಯ ಸಹಿ — ಅಭ್ಯರ್ಥಿಯು ಅಪ್ರಾಪ್ತ ವಯಸ್ಕನಾಗಿದ್ದಲ್ಲಿ ಪೋಷಕರ ಸಹಿ

**"ಮೇಲ್ಕಂಡ ವಿವರಗಳನ್ನು ಪರಿಶೀಲಿಸಿದ್ದು, ಸರಿಯಾಗಿವೆ ಎಂದು ದೃಢೀಕರಿಸಿ ಅರ್ಜಿಯನ್ನು ರವಾನಿಸುತ್ತಿದ್ದೇನೆ."**

ಸ್ಥಳ :

ದಿನಾಂಕ : ಶಾಲಾ ಮುಖ್ಯಸ್ಥರ ಸಹಿ ಮತ್ತು ಮೊಹರು